REPORT OF THE MYSORE TENANCY AGRICULTURAL LAND LAWS COMMITTEE.

Motion to consider.

Sri M. P. PATIL (Minister for Revenue).—Sir, I beg to move:

> "That the report of the Mysore Tenancy Agricultural Land Laws Committee be taken into consideration."

Mr. DEPUTY SPEAKER.—Motion moved:

> "That the Report of the Mysore Tenancy Agricultural Land Laws Committee be taken into consideration."

***Sri M. P. PATIL** —Sir, the Hon'ble Members are aware of the history of the tenancy law in the new Mysore State. At the time of integration, different tenancy laws were prevailing in the five different regions.

ಶ್ರೀ ಕುಂದೂರು ರುದ್ರಪ್ಪ (ಚೆನ್ನಗಿರಿ).—ಒಂದು ಪಾಯಿಂಟು ಆಫ್ ಆರ್ಡರು, ಸ್ವಾಮೀ. ಇವೊತ್ತಿನ ದಿವಸ ಬಂದಿರುವುದು ಜತ್ತಿ ಸಮಿತಿಯ ವರದಿ. ಇದರ ವಿಷಯವಾಗಿ ಮಂತ್ರಿಗಳು ಈಗ ದೇಶ ವಿಶಾಲವಾಯಿತು ಎಂದೂ ವಿಶಾಲವಾಗಿ ಯೋಚನೆಮಾಡಬೇಕಾಗಿದೆ ಎಂದೂ ಹೇಳುತ್ತ ಈ ವರದಿಯನ್ನು ಇಂಗ್ಲೀಷಿನಲ್ಲಿ ಮಾತ್ರ ಹಂಚಿದ್ದಾರೆ. ಇನ್ನೂ ಕನ್ನಡದಲ್ಲಿ ಸರಕಾರದವರು ಪ್ರಿಂಟು ಮಾಡಿದ್ದಾರೋ ಇಲ್ಲವೋ ತಿಳಿಯದು. ಅಲ್ಲದೆ ಈ ವಿಷಯವಾಗಿ ಮಾತನಾಡುತ್ತಿರುವ ಮಂತ್ರಿಗಳು ಕೂಡ ಕನ್ನಡದಲ್ಲಿ ಮಾತನಾಡದೆ ಇಂಗ್ಲೀಷಿನಲ್ಲೇ ಮಾತನಾಡುತ್ತಿದ್ದಾರೆ, ಈ ವಿಷಯ ಬಹಳ ಮುಖ್ಯವಾದುದು, ಆದ್ದರಿಂದ ಈ ವಿಷಯದ ಬಗ್ಗೆ ಕನ್ನಡದಲ್ಲಿಯೇ ಮಾತನಾಡಿದರೆ ಎಲ್ಲರಿಗೂ ಅನಕೂಲವಾಗುತ್ತದೆ.

ಉಪಾಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಒಂದು ಕ್ಲಾರಿಫಿಕೇಷನ್ನು ಎಂದು ತಾವು ಕೇಳಬಹುದು

ಶ್ರೀ ಎಂ. ಪಿ. ಪಾಟೀಲ್.—ಈ ರಿಪೋರ್ಟನ್ನು ಪಬ್ಲಿಷ್ ಮಾಡಿದ ಅನಂತರ ಇದನ್ನು ಕನ್ನಡದಲ್ಲಿ ಪ್ರಿಂಟು ಮಾಡಲಿಕ್ಕೆ ಕೊಟ್ಟಿದ್ದೇವೆ. ಕನ್ನಡ ಪ್ರತಿಗಳು ಇನ್ನೂ ತಯಾರಾಗಿಲ್ಲ. ಆ ಕಾರಣದಿಂದ ಇನ್ನೂ ಹಂಚಿಲ್ಲ. ಅಚ್ಚಾಗಿ ಬಂದ ಬಳಿಕ ಎಲ್ಲರಿಗೂ ಹಂಚಲಾಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಈ ವಿಷಯದಲ್ಲಿ ಸಂಬಂಧಪಟ್ಟ ಮಂತ್ರಿಗಳು ಕನ್ನಡದಲ್ಲಿ ಹೇಳಿದರೆ ಎಲ್ಲರಿಗೂ ಚೆನ್ನಾಗಿ ತಿಳಿಯುತ್ತದೆ.

*ಶ್ರೀ ಎಂ. ಪಿ. ಪಾಟೀಲ್.—ಸ್ವಾಮಿ, ನಿಜವಾಗಿಯೂ ನೋಡಿದರೆ ನಾನು ಹೆಚ್ಚಾಗಿ ಹೇಳತಕ್ಕದ್ದೇನೂ ಇಲ್ಲ. ಆದರೆ ಈಗ ಈ ರಿಪೋರ್ಟನ್ನು ಸಭೆಯ ಮುಂದೆ ಇಡುವ ಕಾಲಕ್ಕೆ ಇದರ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಅದೇನೆಂದರೆ, ಹೊಸ ಮೈಸೂರು ರಾಜ್ಯ ಸ್ಥಾಪನೆಯಾದ ಮೇಲೆ ಆ ಕಾಲಕ್ಕೆ ಹೊಸ ಮೈಸೂರು ರಾಜ್ಯದಲ್ಲಿ ಬಂದಂತಹ ಐದು ಭಾಗಗಳಲ್ಲಿ ಬೇರೆ ಬೇರೆಯಾಗಿದ್ದಂತಹ ಟೆನನ್ಸಿ ಕಾಯಿದೆಗಳು ಇದ್ದುವು. ಬೊಂಬಾಯಿಯಲ್ಲಿ ಒಂದು ಕಾಯಿದೆ ಇತ್ತು. ಹೈದರಾಬಾದಿನಲ್ಲಿ ಒಂದು ಕಾಯಿದೆಯಿತ್ತು. ಹಳೆಯ ಮೈಸೂರಿನಲ್ಲಿ ಒಂದು ಕಾಯಿದೆಯಿತ್ತು, ಅದೇ ಪ್ರಕಾರ ಮದರಾಸಿನಲ್ಲಿ ಒಂದು ಕಾಯಿದೆಯಿತ್ತು. ಈ ಪ್ರಕಾರ ನಾಲ್ಕು ಕಾಯಿದೆಗಳಿದ್ದುವು. ಉಳಿದ ಪ್ರಾಂತಗಳಲ್ಲಿ......

Sri G. VENKATAI GOWDA (Palaiyam).—On a point of order, Sir We are entitled to discuss a motion or a Bill that is brought before this Assembly. Now this report is sought to be discussed. I want to know whether it is in order to discuss it unless it is in the form of a Bill or a motion.

Mr. DEPUTY SPEAKER.—A motion has been moved.

ಶ್ರೀ ಎಂ. ಪಿ. ಪಾಟೀಲ್.—ಆದುದರಿಂದ ಈಗ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆಯಾಗಿರುವ ಕಾಯಿದೆಗಳಿರುವುದರಿಂದ ಇಡೀ ಮೈಸೂರು ರಾಜ್ಯಕ್ಕೆ ಒಂದೇ ಸಮನಾದ ಕಾಯಿದೆಯನ್ನು ಮಾಡಬೇಕೆಂದು ಸರಕಾರದವರು ಯೋಚನೆ ಮಾಡುತ್ತಿದ್ದರು. ಆದರೆ ಅದಕ್ಕೆ ಕಾಲಾವಕಾಶ ಬೇಕಾಯಿತು. ಆದ ಕಾರಣ ಈ ಕಾಲಾವಧಿಗಾಗಿ ಮುಂದಕ್ಕೆ ಹಾಕಬೇಕಾಯಿತು. ಮುಂಬಯಿ ಮತ್ತು ಹೈದರಾಬಾದು ಕಾಯಿದೆಗಳಲ್ಲಿ ಕೆಲವು ಕಾಲಂಗಳಿದ್ದವು. ಅವುಗಳನ್ನೆಲ್ಲ ವಿಚಾರಮಾಡಿ ಅದಕ್ಕೆ ತಕ್ಕ ಹಾಗೆ ಒಂದು ಆರ್ಡಿನೆನ್ಸನ್ನು ಹೊರಡಿಸಿತ್ತು; ಮತ್ತು ಅದೇ ಆರ್ಡಿನೆನ್ಸನ್ನು ಇಲ್ಲಿ ಬಿಲ್ಲಿನ ರೂಪದಲ್ಲಿ ಇಟ್ಟು ಇದೇ ಸಭೆಯಲ್ಲಿ ಪಾಸು ಮಾಡಲಾಯಿತು. ಅದು ಈಗ ಕಾಯಿದೆಯಾಗಿದೆ. ಈ ಕಾನೂನಿನ ಪ್ರಕಾರ ಮುಂಬಯಿ ಕಾಯಿದೆ ಮತ್ತು ಹೈದರಾಬಾದು ಕಾಯಿದೆಯಲ್ಲಿದ್ದ ಕೆಲವು ಕಲಂಗಳನ್ನು ಒಂದು ವರ್ಷ ಕಾಲ ಮುಂದುವರಿಸಲಾಯಿತು, ಅಲ್ಲದೆ ಸರಕಾರದ ಈ ಕಾಯಿದೆಗಳನ್ನು ಈರೀತಿ ಮಾಡುವುದಕ್ಕೆ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಪರಿಸ್ಥಿತಿಗಳು ಇದ್ದುವು ಮತ್ತು ಬೇರೆ ರೀತಿಯಾದ ಕಾನೂನುಗಳೂ ಇದ್ದವು. ಅದೆಲ್ಲವನ್ನು ಕ್ರೋಢೀಕರಿಸಿ ಒಂದು ಏಕರೂಪವಾದ ಕಾನೂನನ್ನು ಮಾಡುವುದು ಬಹಳ ಅವಶ್ಯಕವಾಗಿತ್ತು. ಅದಕ್ಕಾಗಿ ಸರಕಾರದವರು ಒಂದು ಕಮಿಟಿಯನ್ನು ನೇಮಿಸಬೇಕೆಂದು ಆ ಕಮಿಟಿಯವರು ಈ ರಾಜ್ಯದಲ್ಲಿರುವ ಎಲ್ಲ ಸನ್ನಿವೇಶಗಳನ್ನೂ ತಿಳಿದು ಸರಕಾರಕ್ಕೆ ಶಿಫಾರಸು ಮಾಡಿದ ಮೇಲೆ ಒಂದು ಬಿಲ್ಲನ್ನು ತರಬೇಕೆಂದೂ ಯೋಚಿಸಲಾಯಿತು. ಅದೇ ಪ್ರಕಾರ ಸರಕಾರದವರು ದಿನಾಂಕ 10ನೇ ಮೇ 1957ರಲ್ಲಿ ಶ್ರೀ ಜತ್ತಿಯವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯವರು ನಮ್ಮ ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ ಸಂಚಾರಮಾಡಿ ಬೇರೆ ಬೇರೆ ಕಾನೂನುಗಳನ್ನು ಅಭ್ಯಾಸಮಾಡಬೇಕಾಯಿತು. ಅಷ್ಟೇ ಅಲ್ಲದೆ ನಮ್ಮ ದೇಶದಲ್ಲಿರುವ ಮತ್ತು ಉಳಿದ ಪ್ರಾಂತಗಳಲ್ಲಿ ಯಾವ ತರಹದ ಟೆನೆನ್ಸಿ ಕಾನೂನುಗಳು ಇವೆ ಅವುಗಳನ್ನು ಕೂಡ ಅಭ್ಯಾಸ ಮಾಡಬೇಕಾಯಿತು. ಇವೆಲ್ಲವನ್ನೂ ಮಾಡಿ ಒಂದು

(ಶ್ರೀ ಎಂ. ಪಿ. ಪಾಟೀಲ್)

ವರದಿಯನ್ನು ಒಪ್ಪಿಸಿದ್ದಾರೆ. ಮೊದಲು ಎರಡು ತಿಂಗಳಿನಲ್ಲಿ ಈ ವರದಿಯನ್ನು ಒಪ್ಪಿಸಬೇಕೆಂದುಸೂಚನೆ ಕೊಡಲಾಗಿತ್ತು. ಆದರೆ ಈ ಎರಡು ತಿಂಗಳಿನಲ್ಲಿ ಅವರು ಒಂದು ಸರಿಯಾದ ವರದಿಯನ್ನು ಕೊಡುವುದಕ್ಕೆ ಆಗ ಲಿಲ್ಲ; ಮತ್ತು ಅವರಿಗೆ ಮತ್ತಷ್ಟು ಕಾಲ ಬೇಕಾಯಿತು ಏಕೆಂದರೆ ಕಾನೂನುಗಳನ್ನು ಅಭ್ಯಾಸ ಮಾಡಬೇಕಾಗಿತ್ತು. ಬೇರೆ ಬೇರೆ ಭಾಗಗಳಿಗೆ ಹೋಗಿ ಅಲ್ಲಿರುವ ಪರಿಸ್ಥಿತಿಯನ್ನೆಲ್ಲ ತಿಳಿದುಕೊಳ್ಳಬೇಕಾಗಿತ್ತು. ಅದಕ್ಕಾಗಿ ಕಾಲಾವಕಾಶ ಸಾಲದೆಂದು ಈ ಕಾಲಾವಧಿಯನ್ನು ಪುನಃ ಮತ್ತೆರಡು ತಿಂಗಳಕಾಲ ಹೆಚ್ಚಿಸಬೇಕಾಯಿತು. ಈಗ ಈ ಸಮಿತಿಯವರು ಇವೆಲ್ಲವನ್ನೂ ಪರಿಶೀಲಿಸಿ ಒಂದು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ, ಅದರ ಮೇಲೆ ಸರಕಾರದವರು ತೀರ್ಮಾನವನ್ನು ಕೈಗೊಂಡು ಒಂದು ಬಿಲ್ಲನ್ನು ತಯಾರಿಸಬೇಕಾಗಿದೆ. ಈ ರೀತಿಯಾದ ಕಾನೂನನ್ನು ಮಾಡುವುದು ಬಹು ಮಹತ್ವವುಳ್ಳದ್ದು ಎನ್ನುವುದು ಸರ್ವರಿಗೂ ಈಗಾಗಲೇ ತಿಳಿದೇ ಇದೆ. ಈ ಕಾನೂನು ಪ್ರತಿಯೊಬ್ಬರಿಗೂ ಸಂಬಂಧಪಡತಕ್ಕಂತಹ ಕಾನೂನಾಗಿದೆ. ಅದರ ಬಗ್ಗೆ ಎಲ್ಲರೂ ಅವರ ಸಲಹೆಗಳನ್ನು ಕೊಟ್ಟು ವಿಚಾರ ಮಾಡಬೇಕಾದ ಪರಿಸ್ಥಿತಿಯಿದೆ. ಅದರ ಬಗ್ಗೆ ಸಾಮಾನ್ಯವಾಗಿ ಜನರು ಹೇಳುವುದೇನೆನ್ನುವುದನ್ನೂ ಸಹ ಸನ್ಮಾನ್ಯ ಸದಸ್ಯರು ಈ ರಿಪೋರ್ಟಿನಲ್ಲಿ ತಿಳಿಸಿದ್ದಾರೆ. ಸಾಮಾನ್ಯವಾಗಿ ಈ ಸಮಸ್ಯೆಯನ್ನು ಎಲ್ಲರಿಗೂ ಅನುಕೂಲವಾಗುವಂತೆ ಮಾಡಬೇಕೆಂದು ಯೋಚಿಸಿ ಮುಂದೆ ಸರ್ಕಾರದವರು ಒಂದು ಬಿಲ್ಲನ್ನು ತಯಾರು ಮಾಡಬೇಕಾಗಿದೆ.

ಈ ಕಮಿಟಿ ರಿಪೋರ್ಟ್ ಪ್ರಸಿದ್ಧವಾಗಿದ್ದುದರಿಂದ; ಅದನ್ನು ಈ ಸಭೆಯಲ್ಲಿ ಚರ್ಚೆಮಾಡಿದರೆ ಅದರಿಂದ ಸರ್ಕಾರಕ್ಕೆ ಮುಂದೆ ಬಿಲ್ಲು ತಯಾರು ಮಾಡುವುದಕ್ಕೆ ಸುಲಭವಾಗುತ್ತದೆ, ಅದರಿಂದ ಅವರಿಗೆ ಪ್ರಯೋಜನವಾಗುತ್ತದೆ; ಈ ದೃಷ್ಟಿಯಿಂದ ರಿಪೋರ್ಟನ್ನು ಸಭೆಯ ಮುಂದೆ ಇಟ್ಟಿದೆ. ಈಗ ರಿಪೋರ್ಟಿನಲ್ಲಿ ಏನು ಶಿಫಾರ್ಸು ಮಾಡಲ್ಪಟ್ಟಿದೆ, ಅದರ ಬಗ್ಗೆ ನಾನು ಈಗ ಏನು ಹೇಳತಕ್ಕದ್ದೂ ಇಲ್ಲ. ಸನ್ಮಾನ್ಯ ಸಭಾಸದಸ್ಯರು ಅವುಗಳ ಬಗ್ಗೆ ಬೇರೆ ಬೇರೆ ಹೇಳತಕ್ಕವರಿದ್ದಾರೆ. ಒಂದು ಸಂಗತಿ ಮಾತ್ರ ಈ ಬಗ್ಗೆ ಹೇಳಬೇಕಾಗಿದೆ. ಜತ್ತಿಸಮಿತಿಯವರು ಶಿಫಾರ್ಸು ಏನು ಮಾಡಿದ್ದಾರೋ ಆ ಶಿಫಾರ್ಸು ಕೆಲವರಿಗೆ ಸಮ್ಮತಿ ಇರಬಹುದು. ಕೆಲವರಿಗೆ ಇರಲಿಕ್ಕಿಲ್ಲ. ಆ ಮಾತು ಬೇರೆ. ಜತ್ತಿ ಸಮಿತಿಯವರು ಈಗ ಏನು ಕಾರ್ಯ ಮಾಡಿದ್ದಾರೆ ಅದು ಅತ್ಯಂತ ಸಮಾಧಾನದ ಕಾರ್ಯ ಮತ್ತು ಯೋಗ್ಯ ರೀತಿಯಿಂದ ಮಾಡಿದ್ದಾರೆ. ಅದರ ಬಗ್ಗೆ ಅವರಿಗೆ ತುಂಬ ಋಣಿಯಾಗಿದ್ದೇನೆ. ಅವರು ಈ ಕರ್ತವ್ಯ ಮಾಡಿದ್ದಕ್ಕೆ ಅವರಿಗೆ ಆಭಾರವನ್ನು ಸಮರ್ಪಿಸುತ್ತೇನೆ. ಈ ಕಮಿಟಿ ರಿಪೋರ್ಟ್ ತಮ್ಮ ಮುಂದೆ ಇದೆ. ವಿಚಾರಮಾಡಿ ಯೋಗ್ಯ ಸಲಹೆಗಳನ್ನು ಸರ್ಕಾರಕ್ಕೆ ನೀಡಿದರೆ ಅದರಿಂದ ಸರ್ಕಾರ ಬಿಲ್ಲು ತಯಾರು ಮಾಡುವುದರಲ್ಲಿ ಸಹಾಯವಾಗಬಹುದು. ಈ ದೃಷ್ಟಿಯಿಂದ ಸನ್ಮಾನ್ಯ ಸಭೆಯವರು ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಂ. ರಾಮಪ್ಪ (ಹರಿಹರ).—I raised a point of order. ಈ ಸಮಿತಿ ವರದಿ ವಿಷಯದಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಆ ವರದಿಯನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದು ಸೂಕ್ತವೇ, ಅದು ಕ್ರಮವಾಗಿದೆಯೇ ಎಂದು ಕೇಳುತ್ತೇನೆ. ಸರ್ಕಾರದವರು ತಮ್ಮ ನೀತಿಯ ವಿಷಯದಲ್ಲಿ ಅವರ ಅಭಿಪ್ರಾಯ ಏನೆಂಬುದನ್ನು ತಿಳಿಸುವುದು ಅವರ ಕರ್ತವ್ಯವಾಗಿತ್ತು. ನನ್ನ ಅಭಿಪ್ರಾಯದಲ್ಲಿ ವರದಿಯನ್ನು ಪರಿಗಣಿಸುವುದಕ್ಕಿಂತ ಮುಂಚೆ ಅದಕ್ಕೆ ಸಂಬಂಧಪಟ್ಟಂತೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ಈಗ ಸರ್ಕಾರದವರು, ಮಂತ್ರಿಮಂಡಲದವರ ಅಭಿಪ್ರಾಯ ಏನೆಂಬುದನ್ನು ಮುಂಚೆ ತಿಳಿಸಿ ಆಮೇಲೆ ಈ ವರದಿಯನ್ನು ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*Sri A. BHEEMAPPA NAIK (Challakere).—Formerly such reports were placed before the Hon'ble House and they were discussed. For example the States Reorganization Commission sent up a report which was placed before the House. There is nothing illegal in it nor is it out of order.

Sri G. ANNA RAO (Afzalpur).—I think the member has not correctly understood the position because the Government is quite in earnest to assess the opinion of the House before coming to the conclusion and preparing the Bill itself. Therefore, when this House has been given the privilege to express its opinion, is it permissible for the Government to form an opinion and then put the Report before this House? Therefore this objection does not hold any water.

ಉಪಾಧ್ಯಕ್ಷರು.—ಈ ಅಬ್ಜೆಕ್ಷನ್ ಹೋಲ್ಡ್ ಆಗುವುದಿಲ್ಲ. ಬಿಲ್ಲು ಮಾಡುವುದಕ್ಕೆ ಮುಂಚೆ ಈ ಸದನದ ಅಭಿಪ್ರಾಯ ತೆಗೆದುಕೊಳ್ಳಬೇಕು ಎಂದು ಮಿನಿಸ್ಟರು ಹೇಳುತ್ತಾರೆ. ಅದ್ದರಿಂದ, it is not a proper objection.

ಶ್ರೀ ಎಂ. ರಾಮಪ್ಪ.—ಸರ್ಕಾರದವರು ಏನು ಇದೆಯೆಂದು ತಿಳಿಸಿಬಿಟ್ಟು ಚರ್ಚೆ ಪ್ರಾರಂಭ ಮಾಡಲಿ. Let them be bold enough to state the position.

Mr. DEPUTY SPEAKER.—It cannot be the objection.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಗೇಣಿಶಾಸನ ವಿಚಾರದಲ್ಲಿ ರಿಪೋರ್ಟನ್ನು ಆಲೋಚನೆ ಮಾಡತಕ್ಕವರಾಗಿದ್ದೇವೆ. ಇದಕ್ಕೆ ಪೂರ್ವಭಾವಿಯಾಗಿ ಕೆಲವಾರು ಪ್ರಶ್ನೆಗಳು ಮತ್ತು ಅಭಿಪ್ರಾಯಗಳು ಉದ್ಭವಿಸುತ್ತವೆ. ಅವು ಏನು ಎಂದರೆ, ಕೆಲವಾರು ತಿಂಗಳ ಹಿಂದೆ ರಾಜಪ್ರಮುಖರು ಅಥವಾ ಗವರ್ನರ್ ಅವರು ಈ ಅಸೆಂಬ್ಲಿಯಲ್ಲಿ ಅಪ್ಪಣೆ ಕೊಡಿಸಿದಾಗ, ಸ್ವಲ್ಪ ದಿವಸಗಳಲ್ಲಿ ಅಗ್ರಿಕಲ್‌ಚರಲ್ ರಿಫಾರಮ್ಸ್ ಎಂದರೆ ವ್ಯವಸಾಯ ಸುಧಾರಣೆಯಾಗುತ್ತದೆ, ಭೂಸುಧಾರಣೆಯಾಗುತ್ತದೆ ಎಂದು ಹೇಳಿದಾಗ, ಸರ್ಕಾರದವರಿಂದ ಒಂದು ಅಭಿಪ್ರಾಯವನ್ನು ಕೊಡುವಾಗ Leader of the House ನಮಗೆ ಒಂದು ಭಾವನೆಯನ್ನು ಕೊಟ್ಟರು. ಇನ್ನು ಸ್ವಲ್ಪ ದಿವಸಗಳಲ್ಲಿ ಹೊಲ ಮಾಡುವವನು ಹೊಲ ಒಡೆಯನಾಗುತ್ತಾನೆ, ಅದೇ ನಮ್ಮ ತತ್ವ ಎಂದು

ಹೇಳಿದರು. ಆಗಲೇ ನಾನು ಹೇಳಿದೆ ಜತೆ ಕಮಿಟಿ ರಿಪೋರ್ಟ್ ತರಿಸುವುದಕ್ಕೆ ಹೊರಟಿದ್ದೀರಿ, ಟೆನೆನ್ಸಿ ಎಂದು ಹೇಳುತ್ತೀರಿ, ಜಮೀನು ಮಾಡುವವನು ಜಮೀನಿನ ಒಡೆಯನಾಗುತ್ತಾನೆ ಎಂದು ಬಾಯಲ್ಲಿ ಹೇಳುತ್ತಿದ್ದೀರಿ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ, ಇದಕ್ಕೆ ಏನು ಹೇಳುತ್ತೀರಿ ಎಂದು ಕೇಳಿದಾಗ ಉತ್ತರ ಕೊಡಲಿಲ್ಲ. ಈ ಪ್ರಶ್ನೆಯನ್ನು ಹಲವಾರುಸಾರಿ ಈ ಅಸೆಂಬ್ಲಿಯಲ್ಲಿ ಎತ್ತಿದ್ದು ಉಂಟು. ಆದ್ದರಿಂದ ಇಂತಹ ಅಸಂಬದ್ಧ ವರದಿಯನ್ನು ಮಾಡುವುದು, ಒಂದು ರೀತಿ ನಡೆದುಕೊಂಡು ಹೋಗುವುದು, ಇನ್ನೊಂದು ರೀತಿ ಭಾವನೆಗಳನ್ನು ಅದರಲ್ಲೂ ಪ್ರಭುತ್ವ ನಡೆಸುವವರು ಕೊಡಬಾರದು ಎಂದು ನನ್ನ ವಾದ. ರೆವಿನ್ಯೂ ಮಂತ್ರಿಗಳು ಹೇಳಿದ ಮಾತುಗಳನ್ನು ಕೇಳಿಕೊಂಡು ಕುಳಿತಿದ್ದೆ. ಈ ವಿಚಾರದಲ್ಲಿ ಒಂದು ಪದವನ್ನೂ ಹೇಳಲಿಲ್ಲ. ಈಗ ನಮ್ಮ ಮುಂದೆ ಬಂದಿರತಕ್ಕದನ್ನು ಗೇಣಿ ಶಾಸನ ಎಂದು ಕರೆಯುತ್ತಿದ್ದಾರೆ. ಟೆನೆನ್ಸಿ ಇಟ್ಟುಕೊಳ್ಳುವುದಿಲ್ಲ ಎನ್ನುವ ಭಾವನೆಯಿಂದ ಹೊರಟಿದ್ದಾರೆಂದು ಹೇಳುತ್ತಾರೆ. ವರದಿಯ 44ನೆಯ ಪುಟದಲ್ಲಿ ಈ ರೀತಿ ಹೇಳಿದ್ದಾರೆ.

> "These two objectives, namely (1) elimination of the landlord-tenant relationship and (2) redistribution of land to satisfy the aspirations of the landless have mainly inspired our recommendations contained in the succeeding chapters."

ಎಂದರೆ ಇನ್ನು ಜಮೀನುದಾರನಿಗೂ, ಗೇಣಿದಾರನಿಗೂ ಇರತಕ್ಕ ಸಂಬಂಧವೇನೂ ಇಟ್ಟುಕೊಳ್ಳುವುದಿಲ್ಲ. ಹೊಲ ಮಾಡುವವನು ಜಮೀನ್ದಾರನಾಗುತ್ತಾನೆ ಎನ್ನುವ ಮೂಲ ಭೂತವಾದ ತತ್ವವನ್ನು ಇಟ್ಟುಕೊಂಡು ಈಗಾಗಲೇ ಅದರಲ್ಲಿ ನಾನಾರೀತಿಯ ಹೊಂದಾಣಿಕೆ ಜೋಡಣೆಗಳಿಂದ ಪದಗಳನ್ನು ಹಾಕಿ ಬಹುಭಾಗದ ಒಂದು ಭಾವನೆಯನ್ನು ಮತ್ತೆ ಟೆನೆನ್ಸಿ ದಾರನಿಗೆ ಇಟ್ಟಿದ್ದಾರೆ. ಗೇಣಿಶಾಸನ ಅಥವಾ ಕೌಲು ಶಾಸನ ಎಂದು ಏನೇ ಹೇಳಲಿ ಜಮೀನುದಾರನು ಇನ್ನೂ ಜಮೀನ್ದಾರನಾಗಿ ಉಳಿಯುವ ಭಾವನೆ ಇದೆ. ಈ ಅಸಂಬದ್ಧವಾದ ಪ್ರಲಾಪ ಏತಕ್ಕೆ ಬಂತು, ಎಂದು ತಮಗೆ ಶಂಕೆ ಬಂದಿರಬಹುದು. ಇಂಗ್ಲೀಷಿನಲ್ಲಿ ನಾವು ಒಂದು ಗಾದೆ ಹೇಳುತ್ತೇವೆ. ಅದೇನೆಂದರೆ "Willing to wound, but afraid to strike." We are not tackling the problem but we are tickling the problem. ಇದನ್ನು ಏತಕ್ಕೆ ಹೇಳುತ್ತೇನೆಂದರೆ ಒಂದು ಆತ್ಮಶುದ್ಧಿಯಿಂದ ಇದನ್ನು ತರುತ್ತಾ ಇಲ್ಲ. ಏನೋ ಒಂದು ಚಮತ್ಕಾರ ಭಾವನೆಯನ್ನು ಜನಗಳಿಗೆ ತೋರಿಸಿ ಅದರ ಮರೆಯಲ್ಲಿ ತಾವು ಏನು ಉದ್ದೇಶ ಪಟ್ಟಿರುತ್ತೀರೋ ಆ ಉದ್ದೇಶ ಸಾಧನೆಗೋಸ್ಕರ ಮಾಡಿರುತ್ತೀರಿ. ಆ ಉದ್ದೇಶ ಹೀಗಿದೆ. ಮಧ್ಯಮ ವರ್ಗದವರನ್ನು ತೆಗೆದುಹಾಕಿ, ಅತ್ಯುನ್ನತ ವರಮಾನ ಬರುವವರನ್ನು ಇಟ್ಟುಕೊಂಡು ಬಡತನವನ್ನು ಮತ್ತೆ ಹೆಚ್ಚಿಗೆಮಾಡಿ ಚೆನ್ನಾಗಿ ಉತ್ಪತ್ತಿ ಬರುವವರಿಗೂ ಮತ್ತೂ ಕಡಮೆ ಉತ್ಪನ್ನ ಬರುವವರಿಗೂ ಇರುವ ಅಂತರವನ್ನು ಹೆಚ್ಚಿಗೆ ಮಾಡತಕ್ಕ ಹವ್ಯಾಸದಲ್ಲಿ ಇದ್ದೀರಿ ಎಂದು ಸಮರ್ಥನೆಮಾಡಿ ಹೇಳುತ್ತೇನೆ. ಅದು ಹೇಗೆ ಎಂದರೆ 1952ನೆಯ ಇಸ್ವಿಯಲ್ಲಿ ತಾವು ಗೇಣಿ ಶಾಸನವನ್ನು ತರುವಾಗ ಐದು ವರ್ಷ ಆದ ಮೇಲೆ ಯಾರು ಒಪ್ಪಂದ ಗೇಣಿದಾರ ಆಗಿದ್ದಾನೋ ಅವನಿಂದ ಜಮೀನ್ದಾರನು ಕಸಿದ ಕೊಳ್ಳಬಹುದು. ನಾನಾ ನಮೂನೆಯಾದ ರಕ್ಷಣೆಯನ್ನು ಕೊಡುವುದರ ಮೂಲಕ ಸಾಧ್ಯವಾದವಟ್ಟಿಗೆ ಗೇಣಿಯನ್ನು ತೆಗೆದು ಹಾಕಿ ಸ್ವತಂತ್ರವಾಗಿರುವ ಹಾಗೆ ಅವರನ್ನು ಪ್ರಚೋದನೆ ಮಾಡಿದ್ದಾರೆಂದು ಖಂಡಿತ ಹೇಳುತ್ತೇನೆ. ಈ ರೀತಿಯಾಗಿ ಮಧ್ಯಮ ವರ್ಗದವರಿಗೆ ಅನರ್ಥವಾಗುವ ಸ್ಥಿತಿಯಲ್ಲಿ ನಡೆದುಕೊಂಡು ಬಂದಿರತಕ್ಕದ್ದು ಯಾರಿಗೂ ಹಿತಕರವಲ್ಲ.

ಹಿಂದೆ ಈ ಶಾಸನ ಬಂದಾಗ ಕೇಳಿದ ನಿಗದಿಯ ಪ್ರಶ್ನೆಗೆ ಉತ್ತರಕೊಡಬೇಕು. ನಿಗದಿಯ ಬಗ್ಗೆ ಅಧಿಕಾರ ವಹಿಸಿದ ಪಕ್ಷದವರಿಂದ ಉತ್ತರ ಬಂದಿಲ್ಲ. ದಯವಿಟ್ಟು ಧೈರ್ಯಮಾಡಿ ಸಾಧ್ಯವಾದ ಮಟ್ಟಿಗೂ ಈ ಗೇಣಿಶಾಸನವನ್ನು ಒಂದು ರೂಪಕ್ಕೆ ತರುವ ಹೊತ್ತಿಗೆ ಗೇಣಿದಾರನನ್ನು ತೆಗೆದುಹಾಕಿ ಜಮೀನು ವಶಪಡಿಸಿಕೊಳ್ಳುತ್ತಾರೆಂಬ ಭಾವನೆಯನ್ನು ಹೋಗಲಾಡಿಸಬೇಕು. ಈಗ ಇದು ಬಹಳ ವಿಷಮಸ್ಥಿತಿಗೆ ಬಂದಿದೆ. ಪ್ರಭುತ್ವ ನಡೆಸುತ್ತಿರುವ ಪಕ್ಷದವರು ದಯವಿಟ್ಟು ಈ ವಿಚಾರದಲ್ಲಿ ನಿಗದಿಯ ಅಭಿಪ್ರಾಯ ಕೊಡಲೇಬೇಕು. ಹಾಗೆ ಅಭಿಪ್ರಾಯ ಕೊಡದೆ ಹೋದರೆ ಅದು ಸರಿಯಾಗುವದಿಲ್ಲ. ಮುಂದಿನ ಮಾರ್ಗದರ್ಶನವೇನು? ಇನ್ನು ಭೂಮಾಲಿಕರ ಸಂಬಂಧ ಕಡಿಸಿಬಿಡುತ್ತಾರೆ. ಹೊಲ ಮಾಡುವವನೇ ಹೊಲದೊಡೆಯ. ಹೊಲ ಮಾಡುವವರಲ್ಲಿ ಇರತಕ್ಕ ಹವ್ಯಾಸ ಇನ್ನಾವ ಬೇರೆ ಉದ್ಯಮದಲ್ಲಿಯೂ ಕಂಡುಬರುವದಿಲ್ಲ. ಆದುದರಿಂದ ಇದು ಬಹಳ ಮಹತ್ವದ ವಿಷಯ. ಈ ವಿಚಾರದಲ್ಲಿ ಜಾಗ್ರತೆಯಾಗಿ ಸಮಾಧಾನಕರವಾದ ಉತ್ತರವನ್ನು ಸರ್ಕಾರ ಪಕ್ಷದವರು ಕೊಡಬೇಕು. ಈ ವಿಷಯವನ್ನು ಪರಿಶೀಲಿಸುವಾಗ ಸಮಿತಿಯವರು ಬಹಳ ಕಷ್ಟಪಟ್ಟಿದ್ದಾರೆ. ಸಮಿತಿಯವರು ಇಟ್ಟುಕೊಂಡಿರತಕ್ಕ ಮೂಲ ಶಾಸ್ತ್ರ ಯಾವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಇನ್ನೊಂದು ಪ್ರಶ್ನೆ. ಐದು ಎಕರೆಗಿಂತ ಹೆಚ್ಚಿಗೆ ಭೂಮಿಯನ್ನು ಇಟ್ಟುಕೊಂಡಿರತಕ್ಕ ಜಮೀನ್‌ದಾರರ ಒಂದು ಪಟ್ಟಿಯನ್ನು ತಯಾರಿಸಿ ಕಳಿಸಬೇಕೆಂದು ಹಿಂದಕ್ಕೆ ಅಧಿಕಾರಿಗಳಿಗೆ ತಿಳಿಸಲಾಗಿದೆ. ಇದು ಏತಕ್ಕೆ? ಐದು ಎಕರೆಗಿಂತ ಹೆಚ್ಚಿಗೆ ಎಂದು ಏತಕ್ಕೋಸ್ಕರ ಬೇಕಾಗಿದೆ? ಕೆಲವಾರು ವರ್ಷಗಳ ಹಿಂದೆ ಈ ಆರ್ಡರ್ ಹೊರಟಿದೆ. ನಿಜವಾಗಿ ಇದರ ಉದ್ದೇಶ ಏನು ಇದೆ?

Sri M. R. PATIL (Hubli).—I rise to a point of order, Sir. The point of order is whether the Leader of the Opposition is speaking on the Report or on the policy of the Government. He is speaking on the general policy of Government and not on the Report; is it in order?

Mr. DEPUTY SPEAKER.—Why raise a point of order on that? You can ask for a clarification.

ಶ್ರೀ ಕೆ. ಕೆಂಚಪ್ಪ.—ಅಮೇಲೆ ಐದು ಎಕರೆಗಿಂತ ಹೆಚ್ಚಿಗೆ ಜಮೀನು ಇದ್ದವರ ಲಿಸ್ಟ್ ಮಾಡಿ ಕಳಿಸಿಕೊಟ್ಟಿದ್ದಾರೆ. ಅಂಥ ಭೂಮಿಯ ಒಡೆಯರ ಪಾಡು ಏನಾಗಿದೆ ನೋಡಬೇಕು. ಈ ಹಿಂದೆ ಯಾರು ಯಾರು ಗೇಣಿದಾರರು ಆಗಿದ್ದರೋ ಮತ್ತು ಒಕ್ಕಲನ್ನು ಓಡಿಸಿದ್ದಾರೆಯೋ ಅವರ ಗತಿ ಏನು? ಈ ಹಿಂದೆ ಗೇಣಿ

(ಶ್ರೀ ಕೆ. ಕೆಂಚಪ್ಪ)

ದಾರರು ಒಕ್ಕಲನ್ನು ಜಮೀನು ಬಿಡಿಸಿದ್ದರೆ ಅವರು ಏನು ಮಾಡಬೇಕು? ಅಂಥವರಿಗೆ ಜಮೀನು ವಾಪಸ್ಸು ಕೊಡಿಸುತ್ತಾರೆಂದು ಇದೆಯೇ?

Sri M. P. PATIL.—I request the Hon'ble Member to see the Report.

Sri K. KENCHAPPA.—I have seen it, Sir. Can you read and let me know where it is said? Please show me where it is said that the evicted tenant will get the la d ; that is my point.

ಐದು ವರ್ಷಗಳ ಹಿಂದೆ ಏನಾಗಿದೆ? ಮೈಸೂರು ಸಂಸ್ಥಾನದಲ್ಲಿ ಯಾರುಯಾರು ಗೇಣೀದಾರರು ಎಂಬುದಕ್ಕೆ ದಾಖಲೆ ಇಲ್ಲ. ಒಕ್ಕಲನ್ನು ಎಬ್ಬಿಸಿದ್ದರೆ, ರಿಪೋರ್ಟಿನಲ್ಲಿ ಇರತಕ್ಕಂಥಾ ಒಂದು ಮೂಲ ಭೂತ ಹಕ್ಕನ್ನು ಪ್ರತಿಪಾದಿಸುವಾಗ ಸಮಗ್ರವಾಗಿ ಪ್ರತಿಪಾದಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಆಲೋಚನೆ ಮಾಡಬೇಕು. ನಮ್ಮ ಅಭಿಲಾಷೆ ಇಷ್ಟೇ ಇದೆ. ಬಹಳ ದಿವಸಗಳಿಂದ ಗೇಣೀ ಮಾಡುತ್ತಿದ್ದವರನ್ನು ತೆಗೆದುಹಾಕಿದ್ದರೆ ರಿಟ್ರೋಸ್ಪೆಕ್ಟಿವ್ ಎಫೆಕ್ಟ್ ಕೊಟ್ಟು ಗೇಣಿ ಕೊಡಬೇಕು. 1952ನೆಯ ಇಸವಿಯಿಂದ ಯಾರನ್ನಾದರೂ ಓಡಿಸಿದರೆ ಅವರಿಗೆ ಪುನಃ ಸ್ಥಾನ ಕೊಡಿಸಬೇಕು. ಈ ರೀತಿಯಾಗಿ ಮೈಸೂರು ಸಂಸ್ಥಾನದಲ್ಲಿಯೇ ಇದೆಯೆಂದಲ್ಲ. ಇದು ಹಿಂದೂಸ್ಥಾನದಲ್ಲೆಲ್ಲಾ ನಡೆದಿದೆ. ಒಕ್ಕಲನ್ನು ಎಬ್ಬಿಸಿದ್ದರೆ ಪುನಃ ಕೊಡುವ ಹಾಗೆ ಯಾವ ರೀತಿ ಕಾನೂನು ಮಾಡುತ್ತಾರೆ ಅದನ್ನು ಹೇಳಬೇಕು ಕಾನೂನು ಜಾರಿಗೆ ಬರುವದಕ್ಕೆ ಮುಂಚೆ ಯಾವ ಯಾವ ಗೇಣೀದಾರರನ್ನು ಬಿಡಿಸಿದ್ದಾರೆಯೋ ಅವರಿಗೆಲ್ಲರಿಗೂ ಯಾವ ಕಾಲದ್ದೇ ಆಗಲಿ ಮತ್ತೆ ಅವರಿಗೆ ಹೊಲ ಕೊಡತಕ್ಕದ್ದು ಮತ್ತು ಹೊಲದ ಒಡೆತನ ಕೊಡಬೇಕು.

ನನ್ನ ಕೆಲವು ಅಭಿಪ್ರಾಯಗಳನ್ನು ಕೊಡಲಿಕ್ಕೆ ಈಗ ನಾನು ಇಷ್ಟಪಡುವದಿಲ್ಲ. ಈ ರಿಪೋರ್ಟಿನ ಬಗ್ಗೆ ಸರಿಯಾದ ಭಾವನೆಯನ್ನು ಕೊಟ್ಟನಂತರ ನನ್ನ ಅಭಿಪ್ರಾಯವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನನ್ನ ಅಭಿಪ್ರಾಯವನ್ನು ಕೊಟ್ಟುಬಿಟ್ಟಿದ್ದೇನೆಂದು ಇಟ್ಟುಕೊಳ್ಳಬಾರದು. ಕೆಲವು ಮೂಲಭೂತ ಪ್ರಶ್ನೆಗಳು ಇವೆ. ಅವನ್ನು ಎತ್ತಿದ್ದಾರೆ. ಆದುದರಿಂದ ನಾನು ಕೊನೆಗೆ ಇನ್ನೊಮ್ಮೆ ಮಾತನಾಡಿ ನನ್ನ ಅಭಿಪ್ರಾಯ ಕೊಡುತ್ತೇನೆ.

Sri J. H. SHAMSUDDIN (Honawar).—Can the Leader of the Opposition ask for a reservation of right to speak after he has spoken already?

Sri K. KENCHAPPA.—Is there any prohibition in any statutory provision? We have got to go according to the provisions of the Rules of Procedure and Conduct of Business. Let the Speaker give a ruling. Where is it stated in the Rules of Procedure?

Sri J. H. SHAMSUDDIN.—Convention is there. There is no rule in the Rules of Procedure that a member has a right to speak twice on the same subject. That will be repetition and repetition will amount to irrelevancy. A member can take part only once; if he exhausts that remedy, he has no more remedy.

2-30 P.M.

*ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಈಗ ನಮ್ಮ ಪಾರ್ಟಿ ಲೀಡರ್ ಸರಿಯಾದ ವರದಿ ಬಂದಮೇಲೆ ಮತ್ತು ಕಮಿಟಿ ತೀರ್ಮಾನ ಮಾಡಿದಮೇಲೆ ಪುನಃ ಹೇಳುತ್ತೇನೆಂದು ಹೇಳಿದರು. ಆಡಳಿತ ಪಕ್ಷದವರು ನಮ್ಮ ಪಕ್ಷದ ಲೀಡರ್ ಸೆಕೆಂಡ್ ಟೈಂ ಹೇಳುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ ವಾದಕ್ಕೆ ಅರ್ಥವಿಲ್ಲ. ವಿರೋಧ ಪಕ್ಷದ ನಾಯಕರಾಗಿರುವವರು ಪದೇ ಪದೇ ಸಲಹೆ ಕೊಡಬಹುದು. ಆಗಾಗ್ಗೆ ವಿರೋಧ ಪಕ್ಷದ ನಾಯಕರು ಕಾಂಗ್ರೆಸ್ ಬೆಂಚಿನಲ್ಲಿ ಹೇಳುವ ವಿಷಯಗಳನ್ನು ತಿಳಿದು ಸಲಹೆಗಳನ್ನು ಕೊಡಬೇಕಾಗುತ್ತದೆ. ಈಗ ಚರ್ಚೆ ಮಾಡುತ್ತಿರುವ ವಿಷಯ ಆರ್ಡಿನರಿಯಾಗಿದೆ. ಇದು ಜಂಟೀ ಸಮಿತಿಯವರ ವರದಿಯ ಮೇಲಿನ ಚರ್ಚೆಯ ವಿಚಾರ. ಇದನ್ನು ಒಂದು ಸಾಮಾನ್ಯ ದೃಷ್ಟಿಯಿಂದ ಹೇಳತಕ್ಕದ್ದಲ್ಲ. ಅವರು ಹೇಳತಕ್ಕ ನಿಯಮ ಈವರೆಗೆ ಇಲ್ಲವೆಂದು ನಾನು ಹೇಳುತ್ತೇನೆ.

***Sri S. D. KOTHAVALE** (Chikodi).—Rule 150 reeds thus:

> "150 (1). After the member who moves has spoken, other members may speak to the motion in such order as the Speaker may call upon them. If any member who is so called upon does not speak, he shall not be entitled except by the permission of the Speaker, to speak to the motion at any later stage of the debate.
>
> (2) Except in the exercise of a right of reply or as otherwise provided by these rules, no member shall speak more than once on any motion, except with the permission of the Speaker."

So not only there is a convention, to which reference was made by my Hon'ble friend, but there is a definite rule saying that a member is entitled to speak only once and the permission which is referred to in sub-rule (2) can be given only in exceptional circumstances and not otherwise. So I submit that the Leader of the Opposition has no right to speak again on this subject.

Sri K. KENCHAPPA.—The representation made by the Hon'ble Member is not warranted here. The provision that he has himself read out says that with the permission of the Chair I can speak once again. It is only that permission which I have sought and so

it is rather surprising why Hon'ble Members read out the provision and at the same time speak against the very same provision.

*Sri K. PUTTASWAMY (Mysore).—The Leader of the Opposition is speaking on the motion for the first time. He has not attempted to seek the permission of the Chair to speak for the second time nor has the Chair given him permission to speak for the second time. Hence no discussion need take place now on the point whether a member who has already spoken once on a motion can speak as a matter of right on that very motion for the second time.

Sri A. BHEEMAPPA NAIK.—Sir, the Hon'ble Member Sri Kothavale has quoted a definite rule which says that a member can speak only once. If the Leader of the Opposition wants to speak again he may ask the permission of the Chair at that time, but now we will have to take it that he is speaking on the Bill. After he has spoken once, if he again requests the Chair for permission to speak for the second time, it is for the Chair to permit him or not.

Mr. DEPUTY SPEAKER.—I quite agree with Sri Puttaswamy. If he wants to speak again and makes a request for it and if I consider it necessary I will permit him.

Sri H. M. CHANNABASAPPA (Krishnarajanagar).—Nowhere in the rules it has been provided that the Speaker can permit a member to speak again, at his discretion. So members would be very much obliged to the Speaker if he could enlighten them under what provision of the rules the member claims a right to speak again and under what provision of the rules the speaker could permit him to do so.

Mr. DEPUTY SPEAKER.—That is left to the Speaker.

Sri Y. VEERAPPA (Holenarasipur).—Under rule 168 the Speaker can if he wants give such permission.

Mr. DEPUTY SPEAKER.—I have already given my ruling.

*ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಯಾವರೀತಿಯಾಗಿಯೂ ಇನ್ನೊಂದುಸಾರಿ ನಾನು ಮಾತನಾಡಲು ಸ್ಪೀಕರ್ ಸಾಹೇಬರ ಅನುಮತಿಯನ್ನು ಕೇಳಬಾರದು ಎನ್ನುವ ವಿಚಾರ ಎಲ್ಲಿಯೂ ಇಲ್ಲ. ಹೋಗಲಿ. ಇವೆಲ್ಲಾ ಮಾತನಾಡಿದಮೇಲೆ ನನ್ನ ಅಭಿಪ್ರಾಯಗಳೇನೆಂಬುದೇ ಮರೆತು ಹೋಯಿತು. ಗೇಣೀಶಾಸನದ ಕೆಲವಾರು ಅಂಶಗಳನ್ನು ನಾವು ತಿಳಿದುಕೊಳ್ಳುವಾಗ, ಈ ಗೇಣೀಶಾಸನದಲ್ಲಿ ಇಲ್ಲದೇ ಇರತಕ್ಕ ಭಾವನೆಯನ್ನು ಸಂಬಂಧಪಟ್ಟ ಗೇಣಿ ರಿಪೋರ್ಟನ್ನು ತಯಾರುಮಾಡಿದ್ದವರಿಂದ ತಿಳಿದುಕೊಳ್ಳಬೇಕೆಂದು ಹೇಳುವುದರಲ್ಲಿ ಯಾವ ದುರುದ್ದೇಶವೂ ಇಲ್ಲ. ಆ ಭಾವನೆಯನ್ನು ತಿಳಿದುಕೊಂಡಮೇಲೆ ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಈ ಸದುದ್ದೇಶದಿಂದ ಇನ್ನೊಂದುಸಾರಿ ಈ ವಿಚಾರವನ್ನು ಆಲೋಚನೆ ಮಾಡುವ ಅವಕಾಶ ಬೇಕಾಗುತ್ತದೆಂದು ಸ್ಪೀಕರ್ ಅವರ ಅನುಮತಿಯನ್ನು ಕೇಳುವುದು ಸಹಜವಾಗಿದೆ. ಆ ರೀತಿ ಅನುಮತಿಯನ್ನು ಕೇಳುವುದಕ್ಕೆ ಪ್ರೊಹಿಬಿಷನ್ ಇಲ್ಲ. ಅವರು ಕೊಡುವುದಕ್ಕೂ ಪ್ರೊಹಿಬಿಷನ್ ಇಲ್ಲ. ಅಪೊಸಿಷನ್ ಲೀಡರ್ ಎಂದರೂ ಅದಕ್ಕೆ ವಿರುದ್ಧವಾಗಿ ಮಾತನಾಡುವುದಕ್ಕೆ ಒಂದು ಮಿತಿಬೇಕು. ಅದಕ್ಕೆ ಒಂದು ಕಾನೂನಿನ ಸಪೋರ್ಟ್ ಬೇಕು. ಅದನ್ನು ಬಿಟ್ಟು ಏನೋ ಒಂದು ರೀತಿಯಿಂದ ಮಾತನಾಡುವುದಕ್ಕೆ ಹೋದರೆ ಅದು ಸರಿಹೋಗುವುದಿಲ್ಲ. ಇನ್ನು ಗೇಣಿ ಶಾಸನದ ಮುಖ್ಯ ವಿಚಾರವಾಗಿ ಹೇಳುತ್ತೇನೆ. ಈಗ ಜಮೀನನ್ನು ತೆಗೆದುಕೊಂಡಿರುವವರು ಹೊಲವನ್ನು ಮಾಡತಕ್ಕವರನ್ನು ತಪ್ಪಿಸಿ ಅವರಿಗೆ ಏನು ಮಾಡಬೇಕೆಂದಿದ್ದಾರೆಂಬುದು ತಿಳಿಯುವುದಿಲ್ಲ.

Sri S. D. KOTHAVALE.—On a point of order. The Leader of the Opposition had already finished his speech and he had resumed his seat.

Mr. DEPUTY SPEAKER.—No, he has not finished.

Sri S. D. KOTHAVALE.—He has finished. The record may be seen. If a member has once finished his speech and resumed his seat, is it open for him to speak again under rule 150 (2) ?

Mr. DEPUTY SPEAKER.—He has not finished his speech.

Sri C. J. MUCKANNAPPA (Gubbi).—Is it the intention of the party in power to obstruct the Leader of the Opposition from speaking ?

ಶ್ರೀ ಕೆ. ಕೆಂಚಪ್ಪ.—ಈಗ ನಾವು ಗೇಣೀಶಾಸನವನ್ನು ಮಾಡುವಾಗ ಪೂರ್ವ ಭಾವಿಯಾಗಿ ಈ ವರದಿಯನ್ನು ಆಲೋಚನೆಮಾಡುವಾಗ ಯಾವನು ಹೊಲ ಮಾಡುತ್ತಾನೋ ಅವನನ್ನು ಹೊಲದ ಒಡೆಯನನ್ನಾಗಿ ಮಾಡಬೇಕು ಎನ್ನುವ ಭಾವನೆಯನ್ನು ನಾವು ಎಷ್ಟರ ಮಟ್ಟಿಗೆ ಇಟ್ಟಿದ್ದೇವೆ ಎನ್ನುವುದನ್ನು ಆಲೋಚನೆ ಮಾಡಿ ನೋಡಿದರೆ ಅದು ತೀರ ಕಡಮೆಯಾಗಿದೆ

ಇದನ್ನು ನಾವು ಸ್ಥೂಲವಾಗಿ ಪರಿಶೀಲನೆಮಾಡಿ ನೋಡಿದರೆ ಇವರಲ್ಲಿ ಏನು ಹೇಳಿದ್ದಾರೆಂದರೆ—ಯಾರಾದರೊಬ್ಬ ಗೇಣೀದಾರನು ಒಂದು ಜಮೀನನ್ನು ಸಾಗುವಳಿಮಾಡುತ್ತಿದ್ದರೆ ಅಂಥವನಿಗೆ ಆ ಜಮೀನನ್ನು ಯಾರು ಸಾಗುವಳಿಗೆ ಕೊಟ್ಟಿದ್ದಾರೋ ಅಂಥ ಭೂಮಾಲೀಕ ಇಷ್ಟಪಟ್ಟರೆ ಅವನು ಈ ಒಂದು ಫ್ಯಾಮಿಲಿ ಹೋಲ್ಡಿಂಗಿನ ಪರಿಮಿತಿಗೆ ಒಳಪಡುವ ಜಮೀನನ್ನು ಗೇಣೀದಾರನಿಂದ ತಪ್ಪಿಸಿ ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಇದಕ್ಕೂ ಒಂದು ಸೀಲಿಂಗನ್ನು ನಿಗದಿಮಾಡಿದ್ದಾರೆ. ಆದರೆ ಇಂಥ ಒಂದು ನೀತಿ

(ಶ್ರೀ ಕೆ. ಕೆಂಚಪ್ಪ)

ಯನ್ನು ಎಂದರೆ ಕನಿಷ್ಠ ಅಥವಾ ಪರಮಾವಧಿಯ ಪ್ರಮಾಣದ ಜಮೀನನ್ನು ಇಟ್ಟುಕೊಳ್ಳುವ ಧೋರಣೆಯನ್ನು ಯಾವ ಕ್ರಮ ಅನುಸರಿಸಿ ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ? ಮೊದಲನೆಯದಾಗಿ ಈ ದಿವಸ ಇವರು ಯಾವ ಯಾವ ಗೇಣಿ ಮಾಡತಕ್ಕ ರೈತನಿದ್ದಾನೋ ಅಂಥವನಿಗೆ ಆ ಜಮೀನಿನ ಒಡೆತನವನ್ನೇನಾದರೂ ಕೊಡುತ್ತಿದ್ದಾರೆಯೇ ಎಂದು ನೋಡಿದರೆ, ಅದಿಲ್ಲ ಎಂದು ಉತ್ತರ ಬರುತ್ತದೆ. ಈ ದಿವಸ ಯಾವ ರೈತ ಟೆನೆಂಟ್ ಆಗಿದ್ದಾನೋ ಅಂಥವನಿಗೂ ಮತ್ತು ಜಮೀನಿನ ಮಾಲೀಕನಾಗಿರತಕ್ಕಂಥವನಿಗೂ ಎಷ್ಟೆಷ್ಟು ಜಮೀನಿರಬೇಕೆಂದು ಕನಿಷ್ಠ ಮತ್ತು ಪರಮಾವಧಿ ನಿಗದಿಯನ್ನು ನಿರ್ಧರಿಸುವ ವಿಚಾರದಲ್ಲಿ ಇವರು ಯಾವ ರೀತಿನೀತಿಗಳನ್ನು ಅನುಸರಿಸಿದ್ದಾರೆಂಬುದನ್ನೀಗ ನಾವು ಮೊದಲು ಪರಿಶೀಲಿಸಬೇಕಾಗಿದೆ. ನಮ್ಮ ದೇಶ ಮತ್ತು ನಮ್ಮ ಸಮಾಜದಲ್ಲಿ ತಕ್ಕ ಜನರಲ್ಲಿ ಬಹುಮಂದಿ ವ್ಯವಸಾಯಗಾರರು. ಇದನ್ನು ಪರಿಶೀಲಿಸುವುದಾದರೆ ಒಂದು ಸಂಸಾರದವರು 1,200 ರೂಪಾಯಿಗಳ ವರಮಾನ ಬರತಕ್ಕ ಜಮೀನು ಎಷ್ಟಾಗುತ್ತದೋ ಅಷ್ಟನ್ನು ಒಂದು ಫ್ಯಾಮಿಲಿ ಹೋಲ್ಡಿಂಗಿನ ಪರಿಮಿತಿಯೆಂಬುದಾಗಿ ತೀರ್ಮಾನ ಕೈಗೊಂಡಿದ್ದಾರೆ. ಇದರ ನಾಲ್ಕೂವರೆಯಷ್ಟು ಉತ್ಪತ್ತಿ ಬರುವಂಥ ಜಮೀನಿಗಿಂತಲೂ ಮೀರಿ ಯಾರಿಗೂ ಭೂಮಿ ಇರಬಾರದೆಂದು ಒಂದು ಸೀಲಿಂಗ್ ಲಿಮಿಟನ್ನು ಹಾಕಿದ್ದಾರೆ. ಆ ಸೀಲಿಂಗ್ ಲಿಮಿಟ್ ಎಷ್ಟೆಂದರೆ ಪರಮಾವಧಿ ಉತ್ಪತ್ತಿ 5,100 ರೂಪಾಯಿಗಳು ಇವರ ಮೇಲ್ಪಟ್ಟು. ಅವರು ಮತ್ತೇನು ಹೇಳಿದ್ದಾರೆಂದರೆ—ಒಂದು ಸಂಸಾರದಲ್ಲಿ ಐದು ಜನರು ಮಾತ್ರ ಇದ್ದರೆ ಅಂಥವರು ವಿಶೇಷವಾದ ಸೀಲಿಂಗ್ ಲಿಮಿಟನ್ನು ಇಟ್ಟುಕೊಳ್ಳಬಹುದೆಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಅಂಥ ದೊಡ್ಡ ದೊಡ್ಡ ಜಮೀನ್ದಾರರುಗಳಿರುವುದು ಬಹಳ ಕಡಿಮೆ. ನಮ್ಮ ದೇಶದಲ್ಲಿರತಕ್ಕ ವ್ಯವಸಾಯಗಾರರಲ್ಲಿ ಬಹುಮಂದಿ ಮಧ್ಯಮವರ್ಗದ ವ್ಯವಸಾಯಗಾರರು. ಹೀಗಿರುವಾಗ ಇವರ ವಿಚಾರದಲ್ಲಿ ಫ್ಯಾಮಿಲಿ ಹೋಲ್ಡಿಂಗ್ ಮತ್ತು ಸೀಲಿಂಗ್ ಲಿಮಿಟನ್ನು ನಿಗದಿಮಾಡುವಾಗ ಇವರು 5,400 ರೂಪಾಯಿಗಳನ್ನು ಪರಮಾವಧಿ ಅಂತರವನ್ನಾಗಿ ಗೊತ್ತು ಮಾಡಿದ್ದಾರೆ. ಆದರೆ ಈ ಪರಮಾವಧಿ ಅಂತರವನ್ನು ಇವರು 5,000ಕ್ಕೆ ಅಲ್ಲದಿದ್ದರೆ 10,000ಕ್ಕೆ ಇಟ್ಟುಕೊಳ್ಳಲಿ. ನಾನು ಬೇಡವೆನ್ನುವುದಿಲ್ಲ. ಕನಿಷ್ಠ ಪರಿಮಿತಿಯನ್ನು ಅವರು ಎಷ್ಟಕ್ಕಾದರೂ ಇಟ್ಟುಕೊಳ್ಳಲಿ. ಆದರೆ ಮೊದಲು ನಾವು ಈ ಸಮಸ್ಯೆಯನ್ನು ಪರಿಶೀಲನೆಮಾಡುವಾಗ ಮುಂದೆ ಅನುಸರಿಸಬೇಕಾದ ರೀತಿನೀತಿಗಳೇನಿರಬೇಕೆಂಬುದನ್ನು ವಿಮರ್ಶಿಸಬೇಕಾಗಿದೆ. ಇದೇ ರೀತಿ ದೇಶದಲ್ಲಿರತಕ್ಕ ಪ್ರತಿಯೊಂದು ವರ್ಗದ ವರಮಾನವನ್ನು ನಾವು ಪರಿಗಣಿಸಬೇಕಾಗಿದೆ. ಆದರೆ ಇದೇ ಸಭೆಯಲ್ಲಿ ಕೆಲವು ದಿವಸಗಳ ಹಿಂದೆ ಸರ್ಕಾರಿ ನೌಕರರ ಸಂಬಳ ಸಾರಿಗೆ ವಿಚಾರ ಚರ್ಚೆಯಾಗುತ್ತಿದ್ದಾಗ ಕನಿಷ್ಠ ಮತ್ತು ಪರಮಾವಧಿ ಪರಿಮಿತಿಯ ಅಂತರವನ್ನು 35 ರಷ್ಟು ಮಾತ್ರ ಇಟ್ಟುಕೊಂಡಿದ್ದೇವೆಂದು ಹೇಳಿದರು. ಒಬ್ಬ ನೌಕರನಿಗೆ ತಿಂಗಳಿಗೆ 30-40 ರೂಪಾಯಿಗಳ ಸಂಬಳ ಬಂದರೆ ಮತ್ತೊಬ್ಬ ನೌಕರನಿಗೆ ತಿಂಗಳಿಗೆ 1,800-1,900 ರೂಪಾಯಿಗಳ ಸಂಬಳ ಕೊಡಲಾಗುತ್ತಿದೆ. ಇದು ಎಷ್ಟು ವ್ಯತ್ಯಾಸವಾಗಿ ಕಾಣುತ್ತಿದೆ! ಹೀಗೆಯೇ ನಾವು ಎಲ್ಲರೂ ಮತ್ತು ಪ್ರತಿಯೊಬ್ಬರೂ ಸಮಾಜದ ಒಂದು ಅಂಗವೆಂದು ಹೇಳಿಕೊಳ್ಳುತ್ತಿರುವಾಗ ಹೀಗೆ ಸಮಾಜದ ಪ್ರತಿಯೊಂದು ಅಂಗಕ್ಕೂ ಇರಬೇಕಾದ ಆಸ್ತಿ ಎಷ್ಟೆಂಬುದನ್ನು ನಿಗದಿಮಾಡುವಾಗ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಮಾಡುವುದು ಎಷ್ಟು ಅಸಂಬದ್ಧವಾಗಿ ಕಾಣುತ್ತಿದೆ! ನಮ್ಮ ಸಮಾಜದಲ್ಲಿ ಒಂದು ಭಾಗದ ಜನರಿಗೆ ಅನುಕೂಲಪರಿಸ್ಥಿತಿಯನ್ನೊದಗಿಸಿಕೊಟ್ಟು ಇನ್ನೊಬ್ಬರಿಗೆ ಅನಾನುಕೂಲ ಉಂಟುಮಾಡುವುದು ಯಾವ ನ್ಯಾಯ? ಇದೇನು ತಾವು ಜಾರಿಗೆತರಲು ಹೊರಟಿರುವ ಸಮಾಜವಾದ ತತ್ವ!

ಆದುದರಿಂದಲೇ ನಾನು ಕೇಳುತ್ತಿರುವುದು ತಾವು ಈ ರಿಪೋರ್ಟನ್ನು ಮಂಡಿಸುವಾಗ ಈ ವಿಚಾರಗಳನ್ನೆಲ್ಲಾ ಸರಿಯಾಗಿ ವಿವರಿಸಿ ತಿಳಿಸಿದರೆ ಚೆನ್ನಾಗಿತ್ತು ಎಂದು. ಈಗ ತಾವು ಕೈಕಾರಿಪಂಗಡದಲ್ಲಿ ಈ ರೀತಿಯ ಒಂದು ಬದಲಾವಣೆಯನ್ನು ಮಾಡುವಾಗ ನಮ್ಮ ಸಮಾಜದಲ್ಲಿರತಕ್ಕ ವರ್ಗಗಳೆಷ್ಟು, ಯಾವ ಯಾವ ಉದ್ಯೋಗಗಳಲ್ಲಿ ಜನರು ತೊಡಗಿದ್ದಾರೆ, ಅವರ ಸಂಪಾದನೆ ಏನಿದೆ ಎನ್ನುವುದನ್ನು ಸರ್ಕಾರದವರು ಈ ದಿವಸ ಆಲೋಚನೆಮಾಡಿ ಈ ಕಾರ್ಯವನ್ನು ಕೈಕೊಂಡಿದ್ದಾರೆಯೇ? ಅದೂ ಹೋಗಲಿ, ವ್ಯವಸಾಯದ ಕಸುಬಿನಲ್ಲಿರತಕ್ಕವರಿಗೆ ವಾರ್ಷಿಕ ಉತ್ಪನ್ನ 1,400 ರೂಪಾಯಿಗಳಿಂದ ಹಿಡಿದು 5,000 ರೂಪಾಯಿಗಳವರೆಗೂ ಇರಬಹುದೆಂದು ಒಂದು ಪರಮಾವಧಿ ಎಲ್ಲೆಯನ್ನು ನಿರ್ಧರಿಸಬೇಕೆಂದು ಹೇಳಲಾಗಿದೆ. ಈ ಒಂದು ಸಂಪಾದನೆಯನ್ನಾದರೂ ಆ ವರ್ಗದಲ್ಲಿರತಕ್ಕವರೆಲ್ಲರಿಗೂ ಒಂದೇಸಮನಾಗಿ ಅನ್ವಯಿಸುವಂತೆ ಏನಾದರೂ ಮಾಡಿದ್ದಾರೆಯೇ ಎಂದರೆ ಅದೂ ಇಲ್ಲ. ಈ ರೀತಿಯ ಒಂದು ಅಭಿಪ್ರಾಯಕ್ಕೆ ಬರಲು ಕಾರಣವೇನೆಂಬುದರ ವಿಚಾರದಲ್ಲಿ ಏನಾದರೂ ಹೇಳಿದ್ದಾರೆಯೇ ಎಂದು ಹುಡುಕಿದರೆ—ಈ ಬಗ್ಗೆ ಅವರು ಒಂದು ಚಕಾರ ಶಬ್ದ ಕೂಡ ಹೇಳಿಲ್ಲ. ಇದನ್ನೆಲ್ಲಾ ನೋಡಿದರೆ ಸರ್ಕಾರದವರ ಉದ್ದೇಶ ರೈತನ ಹಿತಸಾಧನೆಗೆಂದು ಹೇಳುತ್ತ, ಈ ರೀತಿ ಒಬ್ಬೊಬ್ಬರಿಗೂ ಇಷ್ಟೊಂದು ಅಂತರವನ್ನು ಕಲ್ಪಿಸಿ ಕಡೆಗೆ ರೈತನಾಗಿರುವ ಗೇಣೀದಾರರನ್ನೂ ಮತ್ತು ಜಮೀನು ಮಾಲೀಕರನ್ನೂ ತಪ್ಪುದಾರಿಗೆಳೆಯಲು ಹೀಗೆ ಮಾಡುತ್ತಿದ್ದೀರೆಂದು ನನಗೆ ಅನ್ನಿಸುತ್ತಿದೆ. ಇಲ್ಲಿಯತನಕ ಇವರು ಹೇಳುತ್ತಿದ್ದ ತತ್ವವೇನೆಂದರೆ ಯಾರು ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾನೋ ಅವನೇ ಭೂಮಿಗೆ ಒಡೆಯನಾಗಬೇಕು ಎಂಬುದಾಗಿ. ಆದರೆ ಆ ರೀತಿ ಆ ದಿವಸ ಹೇಳಿದ್ದೇ ಒಂದು; ಈ ದಿವಸ ಮಾಡುತ್ತಿರುವುದೇ ಒಂದು. ಹೀಗಾದರೆ ಇದು ಏನು ದೇಶಕ್ಕೆ ಒಳ್ಳೆಯದನ್ನು ಮಾಡೀತು? ಈ ವರದಿಯಲ್ಲಿ ಗೇಣೀದಾರನಿಗೂ ಒಂದು ಸೀಲಿಂಗ್ ಲಿಮಿಟ್, ಭೂ ಮಾಲೀಕನಿಗೂ ಒಂದು ಸೀಲಿಂಗ್ ಲಿಮಿಟ್ ಹಾಕಿದ್ದಾರೆ. ಆದರೆ ಈ ಸೀಲಿಂಗ್ ಲಿಮಿಟ್ ಒಬ್ಬೊಬ್ಬರಿಗೂ ಒಂದೊಂದು ರೀತಿಯಾಗಿದೆ. ಈ ವಿಚಾರಗಳಿಗೆಲ್ಲಾ ತಾವು ಹೆಚ್ಚಿನ ಗಮನ ಕೊಡಬೇಕು. ಮಹಾತ್ಮ ಗಾಂಧಿಯವರೇ ಅವರ ಸ್ವತಃ ಬರೆದಿರುವ ಒಂದು ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ:—"ಕೃಷಿಗಾರರ ವಿಚಾರದಲ್ಲಿ ಯಾವ ಒಂದು ಶಾಸನ ತರಬೇಕಾದರೂ ಬಹಳ ಎಚ್ಚರಿಕೆಯಿರಬೇಕು, ಬಹಳ ಹುಷಾರಿನಿಂದ ಅದನ್ನು ಮಾಡಬೇಕು; ನಮ್ಮ ದೇಶದಲ್ಲಿ ಬಹು ಜನರು ಈ ಕೃಷಿಯಲ್ಲಿ ತೊಡಗಿದ್ದಾರೆ: ಅವರ ಕನಿಷ್ಠ ಮತ್ತು ಪರಮಾವಧಿ ಉತ್ಪತ್ತಿಯನ್ನು ನಿರ್ಧರಿಸುವಾಗ ಸಮಾಜದಲ್ಲಿ ಹೆಚ್ಚು ಅಂತರವಿರಬಾರದು; ನಮ್ಮ ಸಮಾಜದಲ್ಲಿ ಪ್ರತಿಯೊಂದು ಉದ್ಯೋಗದಲ್ಲೂ ಇರತಕ್ಕ ಜನರ ಉತ್ಪತ್ತಿಗೂ ಈ ಕೃಷಿಗಾರರ ಉತ್ಪತ್ತಿಗೂ ಹೆಚ್ಚು ಅಂತರವಿರಬಾರದು; ಹೀಗೆ ಎಲ್ಲಾ ದೃಷ್ಟಿಗಳಿಂದಲೂ

ಪರಿಶೀಲನೆ ಮಾಡಿ, ಅನಂತರ ಆ ತತ್ವಗಳನ್ನು ಜಾರಿಗೆ ತರಬೇಕೇ ವಿನಾ ಕೇವಲ ಈ ರೈತಾಪಿ ವರ್ಗಕ್ಕೇ ಒಂದು ಇತಿಮಿತಿಯನ್ನುಂಟುಮಾಡಿದರೆ ಅದು ದೊಡ್ಡ ತಪ್ಪಾದೀತು" ಎಂದು ಹೇಳಿದ್ದಾರೆ.

ಸ್ವಾಮೀ, ಒಂದು ವಿಚಾರ ಹೇಳುತ್ತೇನೆ. ತಮಗೆ ನಾನು ಮಾತನಾಡುವುದು ಇಷ್ಟವಿಲ್ಲದಿದ್ದರೆ ನಾನು ಕುಳಿತುಕೊಂಡುಬಿಡುತ್ತೇನೆ. ತಮಗೆ ಸಮಾಧಾನ ವಾಗದಿದ್ದರೆ ನಾನು ಮಾತನಾಡುವುದೇಬೇಡ. ಏತಕ್ಕೆಂದರೆ ನಾನು ಈಗಾಗಲೇ ಒಂದು ಪುಟವಿಂದ ಓದಿ ಹೇಳಿದ್ದೇನೆ. ಅದನ್ನು ಮೇಲೆ ಹೇಳಿದ Shadow of Mahatma" ಎನ್ನುವ ಪುಸ್ತಕದಿಂದ ಓದಿಕೊಳ್ಳಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ ವಿ. ದೇಸಾಯಿ (ಗಂಗಾವತಿ).—"Shadow of Mahatma" ಎನ್ನುವ ವಿಚಾರವಲ್ಲ. ಇಲ್ಲಿ ತಾವು P.S.P. Leader ಆಗಿ ತಮ್ಮ ಸಲಹೆಯನ್ನು ಕೊಡುವುದರಲ್ಲಿ ಎರಡು ವಿಧವಾದ ಟೀಕೆಯನ್ನು ತಾವು ಮಾಡುತ್ತಿರುವ ಹಾಗಿದೆ.

ಶ್ರೀ ಕೆ. ಕೆಂಚಪ್ಪ.—ನೀವು ಏನನ್ನು ಇಟ್ಟುಕೊಂಡು ಇಲ್ಲಿ ಮಾಡುತ್ತಿದ್ದೀರಿ, ಎಂದರೆ ಪ್ರತಿಯೊಂದು ಭಾಗದಲ್ಲಿಯೂ ಹಿಂದಿನಿಂದ fix ಮಾಡಿದ್ದ ಮೇಲೆ ಈಗ ಜಮೀನಿನ ಮೇಲೆ ceiling fix ಮಾಡಿದ್ದೀರಿ. ಆದರೆ ಈ ಜಮೀನುದಾರನಿಂದ ಪ್ರತಿಯೊಂದು ರೈತನಿಂದ ಇಷ್ಟೇ ಪರಮಾವಧಿಯಾಗುತ್ತದೆ ಎನ್ನುವುದನ್ನು fix ಮಾಡಿಲ್ಲ. ಆದರೆ ಇದನ್ನು ಕೈಯಲ್ಲಿ ಬಿಟ್ಟು ಬಿಟ್ಟು ಒಂದಕ್ಕೆ ಮುನ್ನೂರರಷ್ಟು ಅಂತರ ಇಟ್ಟುಕೊಂಡು ಇರುವ ವಿಚಾರವನ್ನೇ ನೀವು ಇಟ್ಟುಕೊಳ್ಳುತ್ತಿರುವುದು. ಒಬ್ಬ ಬ್ಯಾಂಕಿನ ಮಾಲೀಕನೋ ಅಥವಾ ಡಾಕ್ಟರೋ 15 ಸಾವಿರ ರೂಪಾಯಿಗಳು ತನ್ನ ಉತ್ಪನ್ನವೆಂದು ಇಟ್ಟುಕೊಂಡರೆ ಅದರಂತೆ ಭೂಮಿಯ ವಿಷಯವಾಗುವುದಿಲ್ಲ.

Today, this land hunger does not mean hunger for land only. Land is used not in the sense of land only but it is used in the sense of property.

ಆದುದರಿಂದ ಆ ಆಸೆಯನ್ನು ಸಂಪೂರ್ಣವಾದ ಬೇಕು ಎನ್ನುವುದು ವಾದ ; ಬೇರೆ ಜಮೀನನ್ನು ಇಟ್ಟುಕೊಳ್ಳಬೇಕು ಎಂದಲ್ಲ. ಅಲ್ಲಿ ಎಷ್ಟು ಜಮೀನನ್ನು ಇಟ್ಟುಕೊಳ್ಳತಕ್ಕದ್ದು, ಉತ್ಪನ್ನ ಮಾಡಿಕೊಳ್ಳತಕ್ಕದ್ದು ಎನ್ನುವುದನ್ನು ಆಲೋಚನೆಯಾಡಬೇಕು. ಬರೀ ಲ್ಯಾಂಡನ್ನು fix ಮಾಡಿಬಿಡೋಣವೆಂದರೆ ಅದೇನಾಗುತ್ತದೆ ಸ್ವಾಮೀ? ಅಂತರದ ವಿಷಯದಲ್ಲಿ ಇವೊತ್ತಿನ ದಿವಸ ಒಂದು ಪ್ರಶ್ನೆ ಮಾಡುತ್ತೇನೆ. ಸರಕಾರಿ ನೌಕರಿಯಲ್ಲಿರುವ ಒಬ್ಬ ಜವಾನನನ್ನು ತೆಗೆದುಕೊಳ್ಳಿ. Government of India ದಲ್ಲಿ ಕೆಲಸ ಮಾಡುವ ಒಬ್ಬ ಜವಾನನಿಗೆ ಈಗ 75 ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಅದೇ ನಮ್ಮ ಸರಕಾರದಲ್ಲಿರುವ ಜವಾನನಿಗೆ 25 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಹಾಗೇ ಈಗ 75 ರೂಪಾಯಿಗಳನ್ನು ಕೊಡುವುದೇ ಅಲ್ಲದೆ ಇನ್ನೊಬ್ಬರಿಗೆ 1,800 ರೂಪಾಯಿಗಳನ್ನು ಕೊಡುತ್ತಿರುವುದು ಎಂದಿದ್ದರೆ ಇದು ನಿಮ್ಮ ಸಮತಾವಾದ ತತ್ವಕ್ಕೆ ಅನುಸಾರವಾಗಿ ಇಟ್ಟುಕೊಳ್ಳತಕ್ಕದ್ದು ಎಂದರೆ ಸರಿಯಾಗಿರುತ್ತದೆಯೋ? ಈರೀತಿಯಾಗಿರುವುದು ಸಮತಾವಾದವಾಗುವುದಿಲ್ಲ. ಎಲ್ಲರಿಗೂ ಪ್ರಪೋರ್ಷನೇಟಾಗಿ ವೇತನ್ನು ಸಮವಾಗಿ ಹಂಚಬೇಕೆಂದಿರುವಾಗ ಈ ರೀತಿಯೆಲ್ಲ ಮಾಡಿದ್ದೀರಿ. ಈ ದೃಷ್ಟಿಯಲ್ಲಿ ಏಕಾಏಕಿ ತೆಗೆದುಕೊಂಡು ಬಂದಿರುವುದರಿಂದ ನಾವೂ ಏಕಾಏಕಿ ಇಲ್ಲಿ ಸೇರಿರುವಾಗ ಇದು ಕಷ್ಟವಿದೆ ಎಂದು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇದನ್ನು ನಾವು ಮೂಲಭೂತವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. 1,200 ರೂಪಾಯಿಗಳು ಒಬ್ಬರಿಗೆ ಮತ್ತು ಪರಮಾವಧಿ 5,000 ರೂಪಾಯಿಗಳ ವರೆಗೆ ಹೀಗೆ ಇಷ್ಟು ವ್ಯತ್ಯಾಸವಿದ್ದರೆ ಇದನ್ನು ಹೇಗೆ ಒಪ್ಪಿಕೊಳ್ಳುವುದಕ್ಕಾಗುತ್ತದೆ? ಒಂದುಕಡೆ ಒಬ್ಬರಿಗೆ ತಿಂಗಳಿಗೆ 1,200 ರೂಪಾಯಿಗಳೆಂದು ಮತ್ತೊಂದು ಕಡೆ ಇನ್ನೊಬ್ಬರಿಗೆ ಆದಾಯ ವರ್ಷವೊಂದಕ್ಕೆ 5,000 ರೂಪಾಯಿಗಳೆಂದು ಇಷ್ಟು ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದೀರಿ. ಅಲ್ಲದೆ, ಇವೊತ್ತಿನ ಸಮಾಜದಲ್ಲಿ ದವಸವನ್ನು ಬೆಳೆಯುವ ರೈತರಿಗೆ ಒಂದು ceiling ಇಟ್ಟುಕೊಳ್ಳಿ ಎಂದು ಬೇರೆ ಇದರಲ್ಲಿದೆ. ಹೀಗಿರುವಾಗ ಯಾವ ಒಂದು ಧೋರಣೆಯನ್ನು ಅನುಸರಿಸಿ ಈರೀತಿ ಮಾಡುತಿದ್ದೀರಿ ಎಂದು ಕೇಳುತ್ತಿದ್ದೇನೆ. ಈಗ ಧಾರಣೆವಾಸಿಯನ್ನು ನೋಡಿ, ಅದರಲ್ಲೂ ಅಂತರವಿದೆ. ಎಂದಮೇಲೆ ವಸ್ತುಗಳನ್ನು ಕೊಂಡುಕೊಳ್ಳಬೇಕಾದರೆ ಜಗತ್ತಿನಲ್ಲಿರುವ ಸಕಲವಸ್ತುಗಳನ್ನು ಸರಿಯಾಗಿ ಹಂಚುವ ಭಾವನೆಯಿಂದ ಇದು ಬಂದಿರುವುದು. ಅಲ್ಲದೆ ನೀವು ceiling point ನ್ನು ನಿಗದಿಮಾಡಬಾರದು ಎಂದು ನಮ್ಮ ಭಾವನೆಯಲ್ಲ. ಇದರಲ್ಲಿ ನೀವು ಒಂದು definite ಆದ ಒಂದು ತತ್ವವನ್ನು ಅನುಸರಿಸಬೇಕು.

ಶ್ರೀ ಬಿ. ವಿ. ದೇಸಾಯಿ (ಕಲಘಟಗಿ).—ಮಾನ್ಯ ಸದಸ್ಯರು ಹೇಳತಕ್ಕದ್ದು ಆಲ್ ಇಂಡಿಯಾ ಪಿ. ಎಸ್. ಪಿ. ಪಾರ್ಟಿಯ ಅಭಿಪ್ರಾಯವೋ ಅಥವಾ ವೈಯಕ್ತಿಕವಾದ ತಮ್ಮ ಸ್ವಂತ ಅಭಿಪ್ರಾಯವೋ?

ಶ್ರೀ ಕೆ. ಕೆಂಚಪ್ಪ.—ಬೇರೊಂದು ವಿಷಯವಲ್ಲ. Double thinking and double action is foreign to us. We stand firmly by the principles that have been enunciated in the policy statement which are absent in the policy statement of other parties.

ಶ್ರೀ ಸಿ. ಜೆ. ಮುಕಣ್ಣಪ್ಪ.—ಸ್ವಾಮೀ, ಒಂದು ಕ್ಲಾರಿಫಿಕೇಷನನ್ನು ಕೇಳಬೇಕಾಗಿದೆ. Is the Hon'ble Member Sri Desai in charge of the whole thing and is he going to answer for everything? He can interrupt, but he cannot put queries. We must allow a member to speak and express his opinions.

Sri D. DEVARAJ URS (Hunsur).—One of the Hon'ble Members Sri Ramappa who happens to be a P.S.P. Member has not given any minute of dissent. The leader of the P.S.P. party here seems to oppose the Report. Are we to take whether he is expressing his personal opinion or his party's opinion?

Sri Y. VEERAPPA (Holenarasipur).—Let us understand things. Instead of simply creating a scene on the floor of the House, it is better to understand things in a proper way. I have been critically watching what the leader of the P. S. P. has been saying and I find that his views are opposed to

(SRI Y. VEERAPPA)

the fundamental principles of the Congress Party. There are some defects in the Jatti Report. So, it is better that the suggestions embodied in the Report are corrected so as to be in conformity with the election manifesto of the Congress Party. Instead of understanding the implications, friends here and there get up and interrupt the speech of the leader without adhering to the high traditions of this House.

Sri M. P. PATIL.—I want to know whether the Hon'ble Member is making a speech.

ಶ್ರೀ ಕೆ. ಕೆಂಚಪ್ಪ.—ಸ್ವಾಮೀ, ನಮ್ಮ ಪಿ. ಎಸ್. ಪಿ. ಎಂದರೆ ಪ್ರಜಾಸೋಷಿಯಲಿಸ್ಟ್ ಪಾರ್ಟಿಯ ತತ್ವ ಏನು ಎನ್ನುವ ಪ್ರಶ್ನೆಯನ್ನು ಕೇಳಿದ್ದರಿಂದ ಹೇಳಬೇಕಾಗಿದೆ. ನಮ್ಮ ಪ್ರಜಾಸೋಷಿಯಲಿಸ್ಟ್ ಪಾರ್ಟಿಯ ತತ್ವ ಪ್ರತಿಯೊಂದು ಭಾಗದಲ್ಲಿಯೂ ಸಹ ಮತ್ತು ಸಮಾಜದ ಪ್ರತಿಯೊಂದು ಸೆಕ್ಷನ್ನಿನಲ್ಲಿಯೂ ಸಹ ಕನಿಷ್ಟ. ಸಂಬಳ ತಿಂಗಳಿಗೆ ಒಂದುನೂರು ರೂಪಾಯಿಗಳಿರಬೇಕೆಂದು ಮತ್ತು ಪರಮಾವಧಿ ಒಂದು ಸಾವಿರ ರೂಪಾಯಿಗಳ ಮೇಲ್ಪಟ್ಟು ಇರಬಾರದು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ ಅದೇ ಕಾಂಗ್ರೆಸ್ಸಿನಲ್ಲಿ ಅವರು ಯಾವ ಸ್ಟೇಟ್ ಮೆಂಟಿನಲ್ಲಿಯೂ ಹೇಳಲಿಲ್ಲ. ಈ ರೀತಿಯಾಗಿ "ಬ್ಲಫ್" ಮಾಡುವುವನ್ನು ನಾವು ಕಲಿತಿಲ್ಲ ಮತ್ತು ನೀವು ಆ ರೀತಿಯಾಗಿ ಮಾಡುವುದೂ ಸರಿಯಾದುದಲ್ಲ.

Sri R. M. DODMANE HEGDE (Deputy Minister for Planning and Development).—On a point of order, Sir. The Leader of the opposition has used the word "Bluff" which, in my opinion, is unparliamentary.

Mr. DEPUTY SPEAKER.—It is not unparliamentary.

ಶ್ರೀ ಕೆ. ಕೆಂಚಪ್ಪ.—ಆದುದರಿಂದ ನಾನು ಇನ್ನು ಮುಂದೆ ಹೋಗುತ್ತೇನೆ. ಈ ಪ್ರಶ್ನೆಯನ್ನು ಎತ್ತಿದ್ದು ಬಹಳ ಒಳ್ಳೆಯದಾಯಿತು. ಇದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ. ಆದುದರಿಂದ ನಾನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ; ಮತ್ತು ನಮ್ಮ ಮಾನ್ಯಮಿತ್ರರು, ಆಡಳಿತ ನಡೆಸುತ್ತಿರುವವರು ತಮ್ಮ ಪಾಲಿಸಿ ಸ್ಟೇಟು ಮೆಂಟಿನಲ್ಲಿ ತಮ್ಮ ಮೂಲತತ್ವ ಏನು ಎನ್ನುವುವನ್ನು ತಿಳಿಸಿ, ಅದನ್ನು ಪ್ರತಿಯೊಂದು ಭಾಗಕ್ಕೂ ಯಾವರೀತಿಯಾಗಿ ಅನ್ವಯಿಸುತ್ತೀರಿ ಎನ್ನುವುದನ್ನು ಹೇಳುವುದು ಅಗತ್ಯ. ಈರೀತಿಯಾದ ವಿವರಗಳನ್ನು ಈ ಜತ್ತಿ ಸಮಿತಿಯ ರಿಪೋರ್ಟಿನಲ್ಲಿ ಹೇಳಲೇಬೇಕಾಗುತದೆ. ಇಲ್ಲದೆ ಹೋದರೆ ನಿಮ್ಮ ಮಾತಿನಲ್ಲಿ ತಿರುಳು ಎಳ್ಳಷ್ಟೂ ಇಲ್ಲದೆ ನಿಮ್ಮ ವಾದದ ದಿವಾಳಿತನ ಏನು ಎನ್ನುವುದು ಸಿಕ್ಕಿದ ಹಾಗಾಗುತ್ತದೆ.

The House adjourned at Three of the Clock and re assembled at Thirty Minutes past Three of the Clock.

[MR. DEPUTY SPEAKER in the Chair.]

*ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ನಾನು ಆಗಲೇ ಹೇಳುತ್ತಿದ್ದೆ. ಈ ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ಯಾವ ಯಾವ ಗೇಣೀದಾರರನ್ನು ಬಿಡಿಸಿದ್ದಾರೋ ಅವರೆಲ್ಲರಿಗೂ, ಯಾವತಗಾದೆಯನ್ನೂ ಮಾಡದೆ, ಅವರಿಗೆ ಹೊಲ ಮಾಡತಕ್ಕ ಅಧಿಕಾರ ಕೊಡಬೇಕು; ಮತ್ತು ಅವರಿಗೆ ಹೊಲದ ಒಡೆತನವನ್ನು ಕೊಡಬೇಕು ಎನ್ನತಕ್ಕದ್ದು ಮೊದಲನೆಯದು. ಇದು 1948 ನೆಯ ಇಸ್ವಿಯಿಂದ ಪ್ರಾರಂಭವಾಗಬೇಕು. ಅದರ ಹಿಂದೆ ಕೆಲವಾರು ವರ್ಷ ಜಮೀನನ್ನು ಮಾಡತಕ್ಕವರು ಮುಂದೆ ಆ ಜಮೀನು ಮಾಡುವ ಉತ್ತೇಜನವನ್ನು ಇಟ್ಟುಕೊಳ್ಳಬೇಕಾದದ್ದು ಅಗತ್ಯ. ಎರಡನೆಯದು ಪರಿಮಿತಿ ಎನ್ನುವ ವಿಚಾರದಲ್ಲಿ ಈಗತಾನೆ ಕೆಲವಾರು ವಿಚಾರಗಳು ಉದ್ಭವಿಸಿವೆ. ಫ್ಯಾಮಿಲಿ ಹೋಲ್ಡಿಂಗ್ಸನ್ನು 4½ ಭಾಗ ಅತ್ಯಾವಶ್ಯಕವಾದ ಭಾಗವಾಗಿ ಇಲ್ಲಿ ನಿಗದಿಮಾಡಿದ್ದಾರೆ. ಜತ್ತಿ ಸಮಿತಿಯವರ ಮುಖ್ಯ ಶಿಫಾರಸುಗಳ ಸಾರಾಂಶದ ವರದಿಯ ಎಂಟನೆಯ ಪುಟದಲ್ಲಿ ಈರೀತಿ ಹೇಳಿದೆ:

"Family Holding :—The Committee are of the view that the family holding in Mysore may be defined as an extent of land which would give to the owner-cultivator, the net income of Rs. 1,200 per annum"

ಇದು ಸಂಸಾರದ ಹೋಲ್ಡಿಂಗ್ ಎಂದು ಇಟ್ಟುಕೊಳ್ಳತಕ್ಕ ವಿಚಾರ. ಮತ್ತೆ ಅದರ ಕೆಳಗೆ ಸೀಲಿಂಗ್ ಎನ್ನತಕ್ಕದ್ದಕ್ಕೆ ಹೀಗೆ ಹೇಳಿದೆ.

"*Ceilings.*—The Committee recommended that as in the Hyderabad Act, the ceiling on existing holdings under personal cultivation may be 4½ family holdings"

ಅಂದಮೇಲೆ ಈಗಾಗಲೇ ಪ್ರಶ್ನೆ ಮಾಡಿದ್ದಕ್ಕೆ ಮಾನ್ಯ ಸದಸ್ಯರಿಗೆ ಇದನ್ನು ಓದುವುದರ ಮೂಲಕ ಸಮಾಧಾನವಾಗಿರಬಹುದು ಎಂದು ಹೇಳುತ್ತೇನೆ. ನಮ್ಮ ಸಮಾಜದಲ್ಲಿರುವ ನಾನಾ ಭಾಗದ ಜನತೆಯ ವರಮಾನವನ್ನು ನಿಗದಿಮಾಡುವಾಗ ವ್ಯವಸಾಯಗಾರರನ್ನು ನೋಯಿಸುವುದು ಒಳ್ಳೆಯದಲ್ಲ. ಬೇರೆಯವರಿಗೆ ಅನ್ವಯಿಸುವ ಹಾಗೆ ಮಾಡಬೇಕು. ಇಲ್ಲಿ ಫ್ಯಾಮಿಲಿ ಹೋಲ್ಡಿಂಗ್ ನಿವ್ವಳ ವರಮಾನ 1,200 ರೂಪಾಯಿ ಇರಬೇಕು ಎಂದು ಹೇಳಿದ್ದಾರೆ. ಮತ್ತೊಂದು ಕಡೆ ಅತ್ಯಧಿಕ ವರಮಾನ 4½ ಯಷ್ಟು ಎಂದರೆ ಐದು ಸಾವಿರ ಚಿಲ್ಲರೆ ಇರಬೇಕೆಂದು ಹೇಳಿದ್ದಾರೆ. 4½ ಎನ್ನುವುದಕ್ಕೆ ಬದಲು ಹತ್ತರಷ್ಟು ಇಟ್ಟುಕೊಂಡ ಹಾಗಾಗುತ್ತದೆ. ಉದಾಹರಣೆಗೆ ಒಂದು ಫ್ಯಾಮಿಲಿ ಹೋಲ್ಡಿಂಗಿಗೆ ಕನಿಷ್ಟವರಮಾನ ತಿಂಗಳಿಗೆ 100 ರೂಪಾಯಿ ಮತ್ತು ಅತ್ಯಧಿಕವರಮಾನ 1,000 ರೂಪಾಯಿಗಳೆಂದರೆ ಒಂದು ವರ್ಷಕ್ಕೆ ಕನಿಷ್ಠ ವರಮಾನ 1,200 ರೂಪಾಯಿ ಮತ್ತು ಅತ್ಯಧಿಕ ವರಮಾನ 12,000 ಇರಬೇಕು ಎಂದರೆ ಹತ್ತರಷ್ಟು ಆಗುತ್ತದೆ, ಅದನ್ನು ಹೇಳಿಲ್ಲ. ಅದರ ಬದಲು ಅತ್ಯಧಿಕ ವರಮಾನ 4½ ಯಷ್ಟು ಒಂದು ಸಂಸಾರಕ್ಕೆ ಇರಬೇಕು ಎಂದು ಹೇಳಿದ್ದಾರೆ. ಒಂದು ಸಂಸಾರದಲ್ಲಿ ಐದು ಜನಗಳಿಗಿಂತ ಹೆಚ್ಚಾಗಿದ್ದರೆ ಎರಡರಷ್ಟು ಇಟ್ಟುಕೊಳ್ಳಬಹುದು.

ಎಂದರೆ ಹತ್ತುಸಾವಿರ ಚಿಲ್ಲರೆ ಎಂದು ಹೇಳಲ್ಪಟ್ಟಿದೆ. ನಾನು ಕೇಳುತ್ತೇನೆ ಇದನ್ನು ಯಾವುದಾದರೂ ಒಂದು ನಿಗದಿಯಾದ ಮಾರ್ಗವನ್ನು ಅನುಸರಿಸಿ ಮಾಡಿದೆಯೇ? 4½ ಯಷ್ಟು ವ್ಯತ್ಯಾಸವನ್ನು ಇಲ್ಲಿ ಇಟ್ಟುಕೊಂಡಿದ್ದಾರೆ. ಆದರೆ ಜೀವನ ಮಾರ್ಗದಲ್ಲಿ ಪ್ರತಿಯೊಂದು ಭಾಗದ ಜನಾಂಗಕ್ಕೂ ಸಹ 4½ ಭಾಗ ಇಟ್ಟುಕೊಂಡರೆ ಅದನ್ನು ಒಪ್ಪಿಕೊಳ್ಳೋಣ. ಒಂದು ಕಡೆ ತಿಂಗಳಿಗೆ 100 ರೂಪಾಯಿ ಕನಿಷ್ಠ ವರಮಾನ ಮತ್ತು 1,000 ರೂಪಾಯಿ ಅತ್ಯಧಿಕ ವರಮಾನ ಎಂದು ಹೇಳುತ್ತಾರೆ. ಆಗ ಕನಿಷ್ಠ ವರಮಾನ ಒಂದು ವರ್ಷಕ್ಕೆ 1,200 ಮತ್ತು ಅತ್ಯಧಿಕ ವರಮಾನ 12,000 ಸಾವಿರ ರೂಪಾಯಿ ಆಗುತ್ತದೆ. ಆದ್ದರಿಂದ ತಮ್ಮ ಪಾಲಿಸಿಯಲ್ಲಿ ಏನಿದೆ ಎಂದು ಹೇಳಬೇಕು? ಇದು ಬರಿ ವ್ಯವಸಾಯಗಾರರಿಗೆ ಅನ್ವಯಿಸತಕ್ಕದ್ದಲ್ಲ. ವ್ಯವಸಾಯಗಾರರಿಗೆ ಅನ್ವಯಿಸುವ ಒಂದು ತತ್ವವನ್ನು ಜನತೆಯ ಪ್ರತಿಯೊಂದು ಭಾಗಕ್ಕೂ ಅನ್ವಯಿಸುವಂತೆ ನಾವು ನಿಗದಿ ಮಾರ್ಗವನ್ನು ಅನುಸರಿಸುತ್ತಾ ಇಲ್ಲ. ನಗರದಲ್ಲಿ ಒಂದು ನಮೂನೆ, ವರ್ತಕರಿಗೆ ಒಂದು ನಮೂನೆ, ಫ್ಯಾಕ್ಟರಿ ಮಾಲೀಕರಿಗೆ, ಬ್ಯಾಂಕ್ ಡೈರೆಕ್ಟರಿಗೆ ಮತ್ತೊಂದು ನಮೂನೆ ಇಟ್ಟುಕೊಂಡು ಈರೀತಿ ಭಿನ್ನ ಭಾವ ಹುಟ್ಟಿಸಿರುವುದು ಜನತೆಯಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಹೇಳುತ್ತೇನೆ. ಈ ವಿಚಾರದಲ್ಲೂ ಸಹ ನಮ್ಮ ಪ್ರಜಾ ಸೋಸಿಯಲಿಸ್ಟ್ ಪಕ್ಷದವರ ನಿಲುವು ಕನಿಷ್ಠ 100 ರೂಪಾಯಿ ಇರಬೇಕೆಂಬುದು. ಹೀಗೆ ತಾವು ಕನಿಷ್ಠ ಎಷ್ಟಾದರೂ ಇಟ್ಟುಕೊಳ್ಳಿರಿ, ಅತ್ಯಧಿಕ ಎಷ್ಟಾದರೂ ಇಟ್ಟುಕೊಳ್ಳಿರಿ ಪ್ರತಿಯೊಂದು ಜನಾಂಗದ ಪ್ರತಿಯೊಂದು ಅಂಗಕ್ಕೂ ಅದು ಅನ್ವಯಿಸುವ ರೀತಿಯಲ್ಲಿ ಇರಬೇಕು ಎನ್ನುವುದೇ ನನ್ನ ಅಭಿಪ್ರಾಯ; ಮತ್ತು ಇನ್ನುಮುಂದೆ ನಿಗದಿಮಾಡುವಾಗ ಯಾವುದನ್ನು ಇಟ್ಟುಕೊಂಡು ಯಾವ ಮಾರ್ಗ ಅನುಸರಿಸುತ್ತಾರೆ? 1952ನೆಯ ಇಸವಿಯಲ್ಲಿ ಭೂಮಿಯಲ್ಲಿ ಬೆಳೆದ ಮಾಲಿನ ಖರೀದಿಯ ಬೆಲೆಯನ್ನು ಇಟ್ಟುಕೊಂಡು ಲೆಕ್ಕಾಮಾಡಿ ನಿಗದಿ ಮಾಡುತ್ತಾರೆಯೇ? ಇದು ಎಷ್ಟರ ಮಟ್ಟಿಗೆ ಸಮಂಜಸವಾಗಿದೆ ಎಂಬುದನ್ನು ಆಲೋಚನೆ ಮಾಡಬೇಕು. ಏತಕ್ಕೆಂದರೆ 1951-53ನೆಯ ಇಸವಿಯಲ್ಲಿ ಧಾರಣೆವಾಸಿ ತುಂಬ ಹೆಚ್ಚಾಗಿತ್ತು. ಈ ವರದಿಯಲ್ಲಿ ಒಂದು family holding ಎಂದರೆ ಒಂದು ಸಂಸಾರಕ್ಕೆ ನಿಗದಿಮಾಡಿದ ಭೂಮಿ ಎಷ್ಟು ಎಂಬುದಕ್ಕೆ ಒಂದು ವರ್ಷಕ್ಕೆ ನಿವ್ವಳ ಉತ್ಪನ್ನ 1,200 ರೂಪಾಯಿ ಬರುವಷ್ಟು ಭೂಮಿ ಎಂದು ಹೇಳಿದೆ. ಅಂದರೆ gross income 2,400 ರೂಪಾಯಿಗಳಷ್ಟು ಬರುತ್ತದೆ ಎಂದ ಹಾಗಾಯಿತು. ಒಟ್ಟು ಉತ್ಪನ್ನದಲ್ಲಿ 1,200 ರೂಪಾಯಿ ಖರ್ಚು ಆಗುವುದು ಹಾಗು ನಿವ್ವಳ ಉತ್ಪತ್ತಿ 1,200 ರೂಪಾಯಿ ಬರುತ್ತದೆ ಎಂದು ಹೇಳಿದ ಹಾಗೆ ಆಗುವುದು. ಈ ರೀತಿಯಾಗಿ ಲೆಕ್ಕ ಮಾಡುವುದರಿಂದ ವ್ಯವಸಾಯದ ಬಗ್ಗೆ ಸರಿಯಾದ ಅರಿವು ಇದೆ ಎಂದು ನನಗೆ ಎನಿಸುವುದಿಲ್ಲ. ನೀರಾವರಿ ಜಮೀನು ಇದ್ದರೆ ನಾಲ್ಕರಲ್ಲಿ ಒಂದು ಭಾಗ ಮತ್ತು ಖುಷ್ಕಿ ಜಮೀನು ಇದ್ದರೆ ಮೂರರಲ್ಲಿ ಒಂದು ಭಾಗ ಖರ್ಚು ಬರುತ್ತದೆಂದು ಮಾತ್ರೊಂದುಕಡೆ ಹೇಳಿದ್ದಾರೆ. ಈ ರೀತಿ ಲೆಕ್ಕ ಮಾಡುವುದರಿಂದ ಎಷ್ಟು ತಪ್ಪು ಹೆಚ್ಚಿಟ್ಟಿದ್ದಾರೆ ಎಂಬುದನ್ನು ಆಲೋಚನೆ ಮಾಡಬೇಕು. ಒಂದು ಎಕರೆ ಭೂಮಿಯಲ್ಲಿ ಹತ್ತು ಪಲ್ಲ ಭತ್ತ ಬರುತ್ತದೆಂದು ಇಟ್ಟುಕೊಳ್ಳೋಣ. ಒಂದು ಪಲ್ಲ ಭತ್ತಕ್ಕೆ 20 ರೂಪಾಯಿಗಳ ದರದಂತೆ ಹತ್ತು ಪಲ್ಲ ಭತ್ತಕ್ಕೆ 200 ರೂಪಾಯಿ ಉತ್ಪತ್ತಿ ಬರುತ್ತದೆ. ಇದರಲ್ಲಿ 100 ರೂಪಾಯಿ ಅಷ್ಟೇ ಖರ್ಚು ಆಗುತ್ತದೇನು? ಜಮೀನು ಕಂದಾಯ, ಬೀಜ, ಗೊಬ್ಬರ ಇವುಗಳಿಗೆಲ್ಲಾ ಅರ್ಧದಷ್ಟೇ ಖರ್ಚು ಬರುತ್ತದೇನು? ವ್ಯವಸಾಯ ಮಾಡಿರತಕ್ಕವರು ವ್ಯವಸಾಯದ ಅನುಭವವುಳ್ಳವರು ಈ ರೀತಿಯಾಗಿ ಹೇಳತಕ್ಕಂಥಾದ್ದೇನು? ಇನ್ನೊಂದು ವಿಚಾರ. ಖುಷ್ಕಿ ಜಮೀನು ಇದ್ದರೆ ಎಷ್ಟು ಬರುತ್ತದೆ, ಡ್ರೈಲ್ಯಾಂಡ್ ಇದ್ದರೆ ಎಷ್ಟು ಬರುತ್ತದ ನೋಡೋಣ.

> "In respect of personally cultivated lands, the net income should be taken as half the average produce for lands with assured irrigation and ⅓ the average gross produce for other lands as determined by the Land Commission"

ಎಂದು ಹೇಳಿದೆ. ಖರ್ಚು ಕಡಮೆ ಬರುತ್ತದೆ ಎಂಬ ಭಾವನೆ ಇದು ಕೊಡುತ್ತದೆ. ಇದು ನಿಜವೇ? ಇದರಿಂದ ಎಷ್ಟೋ ಅನ್ಯಾಯವಾಗುತ್ತದೆ? ಇದನ್ನೆಲ್ಲಾ ನಿಗದಿ ಮಾಡುವಾಗ ಆಲೋಚನೆಮಾಡಬೇಕಾಗಿತ್ತು, ಇದು ವ್ಯವಸಾಯದ ನಿಜವಾದ ಅನುಭವಕ್ಕೆ ವಿರೋಧವಾದದ್ದು. ಇನ್ನು ಸೀಲಿಂಗಿನ ಬಗ್ಗೆ ಈ ರೀತಿ ಹೇಳಿದೆ:

> "The ceiling on existing holdings under personal cultivation may be 4½ family holdings as against Three family holdings for future acquisition. The ceiling may be doubled where the family consists of more than five members."

ಇದನ್ನು ಯಾವ ಆಧಾರದ ಮೇಲೆಮಾಡಿದ್ದಾರೆ? ಒಂದು ಸಂಸಾರದಲ್ಲಿ 25 ಜನ ಇರಬಹುದು. ಒಂದು ಸಂಸಾರದಲ್ಲಿ ಐದು ಜನಕ್ಕೆ ಮೇಲ್ಪಟ್ಟು ಇದ್ದರೆ ಎರಡರಷ್ಟು ಇರಬೇಕು ಎಂಬುದನ್ನು ಯಾವ ಆಧಾರದಮೇಲೆ ಮಾಡಿದ್ದಾರೆ? ಒಂದು ಸಂಸಾರದಲ್ಲಿ ಐವತ್ತು ಜನ ಅಥವಾ ಇನ್ನೂ ಹೆಚ್ಚಿಗೆ ಜನ ಇರಬಹುದು. ಅದು ಸಂಸಾರವಲ್ಲವೇ? ಉತ್ಪತ್ತಿ ಎಷ್ಟು ಬರುತ್ತದೆ ಎಂಬುದನ್ನು ಆಲೋಚನೆ ಮಾಡಬೇಕಾದುದು ಅವಶ್ಯಕವಾಗಿದೆ. The ceiling may be doubled where the family consists of more than five members. ಒಂದು ಸಂಸಾರದಲ್ಲಿ ಐದು ಜನಕ್ಕೆ ಮೇಲ್ಪಟ್ಟು ಇದ್ದರೆ ಅಂದರೆ ನೂರು ಜನ ಒಂದು ಸಂಸಾರದಲ್ಲಿ ಇದ್ದರೆ ಏನು ಮಾಡಬೇಕು? ಈರೀತಿ ceiling double ಮಾಡಬೇಕು ಎಂದು ಹೇಳುವುದು ಯಾವ ನೈತಿಕ ಮಟ್ಟ? ಯಾವ ಧರ್ಮ ಮಾರ್ಗ ಇದು? ತಾವು ಇದನ್ನು ಆಲೋಚನೆ ಮಾಡಬೇಕು. ಹಿಂದುಸ್ಥಾನದಲ್ಲಿ ಎಲ್ಲಾ ಪ್ರಾಂತಗಳಲ್ಲಿ fragmentation and consolidation of lands ಬಗ್ಗೆ ಕಾನೂನು ಮಾಡಿದ್ದಾರೆ. ಆದರೆ ನಮ್ಮಲ್ಲಿ ಮಾಡಿಲ್ಲ. ತುಂಡು ಭೂಮಿಗಳನ್ನು ಒಟ್ಟುಗೂಡಿಸಿ ಸಾಗುವಳಿ ಮಾಡುವುದರಿಂದ ಲಾಭವಾಗುತ್ತದೆ. ಕಾಫೀ ಪ್ಲ್ಯಾಂಟೇಷನ್ ವಿಚಾರದಲ್ಲಿ ಇಟ್ಟುಕೊಂಡಿರುವ ಧೋರಣೆಯನ್ನು ನೋಡಿದರೆ ಧನಿಕರಿಗೂ ಬಡವರಿಗೂ ಇನ್ನೂ ಹೆಚ್ಚು ಅಂತರ ಉಂಟುಮಾಡುವ ಸನ್ನಿವೇಶ ಕಂಡುಬರುತ್ತದೆ. ಯಾಲಕ್ಕಿ ಮತ್ತು ಕಾಫೀ ಪ್ಲ್ಯಾಂಟೇಷನ್ನಿನ ವಿಚಾರದಲ್ಲಿ ಸರಿಯಾದ ನೀತಿಯನ್ನು ಇಟ್ಟುಕೊಂಡಿಲ್ಲ.

(ಶ್ರೀ ಕೆ. ಕೆಂಚಪ್ಪ)

ಅಲ್ಲದೆ ಇನ್ನೊಂದು ಪಕ್ಷಪಾತ ಮನೋಭಾವನೆಯನ್ನು ತೋರಿಸಿದ್ದಾರೆ. ಅದು ಏನೆಂದರೆ, ಕಾಫಿ ಪ್ಲಾಂಟೇಷನ್ಸಿಗಾಗಲಿ, ರಬ್ಬರ್ ಪ್ಲಾಂಟೇಷನ್ಸಿಗಾಗಲಿ ತೋರಿಸತಕ್ಕ ಮನೋಭಾವನೆಯನ್ನು ಒಂದು ಅಡಿಕೆ ಪ್ಲಾಂಟೇಷನ್ನಿಗೆ, ಒಂದು ತೆಂಗಿನ ಪ್ಲಾಂಟೇಷನ್ನಿಗೆ ಏಕೆ ತೋರಿಸಲಿಲ್ಲ ? ಈ ವಿಚಾರವನ್ನು ಕೂಲಂಕಷವಾಗಿ ಆಲೋಚನೆ ಮಾಡಬೇಕು. ಅವರ ಮನೋಭಾವದಲ್ಲಿ ಒಂದು ಕಂಪ್ಯಾಕ್ಟ್ ಏರಿಯಾ ಅಂದರೆ ಒಂದೇ ಭಾಗದಲ್ಲಿರುತ್ತದೆಯೇ ? ಅದನ್ನು ಸರಿಯಾಗಿ ನೋಡಬೇಕು ಎನ್ನುವ ಮನೋಭಾವನೆ ಇದ್ದಹಾಗೆ ಅರ್ಥ ಬರುತ್ತದೆ. ಒಂದು ಕಾಫಿ ತೋಟ ಬೆಳೆಸಬೇಕಾದರೆ, ಒಂದು ಅಡಿಕೆ ತೋಟ ಬೆಳೆಸಬೇಕಾದರೆ ಎಷ್ಟು ದಿವಸಬೇಕು, ಇನ್‌ವೆಸ್ಟ್‌ಮೆಂಟ್ ಎಷ್ಟು ಬೇಕು, ಬಂಡವಾಳ ಎಷ್ಟು? ಬಹಳ ದಿವಸ ಬೆಳೆದು ಬಹಳ ದಿವಸ ಸಾಕಿ, ಆ ರೀತಿ ದೇಶದ ಸಂಪತನ್ನು ಅಭಿವೃದ್ಧಿ ಪಡಿಸಬೇಕು. ರಬ್ಬರ್, ಕಾಫಿ ಪ್ಲಾಂಟೇಷನ್ನಿಗೆ, ಮೆಣಸು, ಏಲಕ್ಕಿ ಬೆಳೆ ಬೆಳೆಯುವವರಿಗೆ ಒಂದು ರೀತಿ ಮನೋಭಾವ ತೋರಿಸಿ ತೆಂಗು, ಅಡಿಕೆ ಬೆಳೆಯುವವರಿಗೇಕೆ ಇನ್ನೊಂದು ರೀತಿ ಮನೋಭಾವನೆಯನ್ನು ತೋರಿಸಿದ್ದೀರಿ. ಇದನ್ನು ಆಲೋಚನೆ ಮಾಡಬೇಕು. ಈ ರೀತಿ ಆಲೋಚನೆ ಮಾಡುವಾಗ ನಮಗೆ ಒಂದು ವಿಚಾರ ಹೊಳೆಯುತ್ತದೆ. ಮಧ್ಯಮ ವರ್ಗದಲ್ಲಿರುವವರಿನ್ನರೆ ಅವರನ್ನು ಕೆಳದರ್ಜೆಗೆ ತಂದು ಕೆಳದರ್ಜೆಯವರಿಗೂ ಧನಿಕರಿಗೂ ಇರುವ ಅಂತರವನ್ನು ಹೆಚ್ಚಿಗೆ ಮಾಡುವ ಮೂಲಕ ನೀವು ನಿಮ್ಮ ಪಾರ್ಟಿಯ ವರ್ಚಸ್ಸನ್ನು ಹೆಚ್ಚಿಗೆ ಬೆಳೆಸೋಣ ಧನಿಕರ ಅಭಿಮಾನವನ್ನು ಹೆಚ್ಚಿಗೆ ಬೆಳೆಸೋಣ ಎನ್ನುವ ಮನೋಭಾವನೆಯನ್ನು ತಾಳಿರುತ್ತೀರೆಂಬುದು ನಮಗೆ ಕಾಣಿಸುತ್ತದೆ. ಈ ವರದಿಯನ್ನು ಬರೆದಿರುವವರು ಹೇಳುವುದೇನಿದೆಯೋ ಅದು ನನಗೆ ಗೊತ್ತಾಗಲಿಲ್ಲ. ಬೊಂಬಾಯಿ ಆಕ್ಟಿನಲ್ಲಿ ಒಂದು ಸೆಕ್ಷನ್ ಇದೆ. ಅದರಂತೆ ಅಡಿಕೆ ತೋಟಗಳಿಗೆ ಈ ಕಾನೂನನ್ನು ಜಾರಿಮಾಡಿಲ್ಲ. ಅದು ಒಳ್ಳೆಯದೋ ಕೆಟ್ಟದ್ದೋ ಆ ಮಾತು ಬೇರೆ. ಇಲ್ಲಿ ಮಾಡಿರುವುದು ಹೇಗಿದೆಯೆಂದರೆ, ಕಾಫಿ ಪ್ಲಾಂಟೇಷನ್‌ಗಳನ್ನು ಹಾಗೆಯೇ ಇಟ್ಟುಕೊಂಡು, ತೆಂಗು ಅಡಿಕೆ ತೋಟಗಳನ್ನು ಒಡೆದುಹಾಕಿ ಅದರ ಮೂಲಕ ಮಧ್ಯಮ ವರ್ಗದವರನ್ನು ಒಡೆಯುವ ಮನೋಭಾವನೆಯನ್ನು ಮಾಡಿದ್ದಾರೆ. ಈ ಪಕ್ಷಪಾತ ಮನೋಭಾವನೆ ಏಕೆ ಬಂತೋ ನನಗೆ ಗೊತ್ತಿಲ್ಲ. ಈಗ ಇರುವ ಪ್ಲಾಂಟೇಷನ್‌ಗಳಿಗೆ ಸೀಲಿಂಗ್ ಪಾಯಿಂಟ್ ಇಡುವುದಕ್ಕೆ ಕಾರಣವೇನೆಂಬುದನ್ನು ನಾವು ಗಮನಿಸಬೇಕು. ಹಿಂದೆ ಇದ್ದುದಕ್ಕಿಂತ ಮುಂದೆ ಬರುವುದಕ್ಕೆ ಸೀಲಿಂಗ್ ಪಾಯಿಂಟ್ ಇರಲೇಬೇಕು. ಅದಕ್ಕೆ ನಮ್ಮ ಪಾರ್ಟಿ ನಿಲುವು ಇದೆ. ಆದರೆ ಸೀಲಿಂಗ್ ಎನ್ನುವುದು ಎಲ್ಲರಿಗೂ ಸಮನಾಗಿ ಅನ್ವಯಿಸಬೇಕು. ಯಾವ ರೀತಿ ಹಂಚಬೇಕು ಎನ್ನುವುದನ್ನು ಯೋಚನೆ ಮಾಡುವಾಗ ಬೇರೆ ಭಾಗದ ಜಮೀನಿಗೆ ಯಾವ ರೀತಿ ಮಾಡಬೇಕೆಂದು ಇದ್ದಾರೋ ಇಲ್ಲಿಯೂ ಅದೇ ರೀತಿ ಮಾಡಬೇಕು. ಇದರಲ್ಲಿ ಬೇಕಾದಷ್ಟು ತೊಡಕು ಇದೆ. ಒಂದು ತೋಟವನ್ನು ಒಡೆದು ಹಾಕುವುದಕ್ಕೆ ಬದಲಾಗಿ ಅದನ್ನು ಮಾಡುತ್ತಾ ಇರುವವರಿಗೆ ಕೊಟ್ಟರೆ, ಅವರು ಅದನ್ನು ಜವಾಬ್ದಾರಿಯಿಂದ ಕಾಪಾಡುತ್ತಾರೆ. ತೋಟ ಎಂದರೆ ತೆಂಗಿನ ತೋಟ, ಅಡಿಕೆ ತೋಟ ಮಾತ್ರವೇ ಅಲ್ಲ; ಎಲ್ಲದಕ್ಕೂ ಒಂದೇ ರೀತಿಯ ಮನೋಭಾವನೆ ಇರಬೇಕು. ನಮ್ಮ ನಿಲುವೇನು ಎಂಬುದನ್ನು ಆಲೋಚನೆ ಮಾಡಬೇಕು. ಯಾರು ಜಮೀನು ಮಾಡುತ್ತಿದ್ದಾರೋ ಅವರಿಗೇ ಜಮೀನು ಹೋಗಬೇಕು. ಅವನೇ ಜಮೀನು ಮಾಲೀಕನಾಗಬೇಕು. ಇಲ್ಲಿ ಹಾಗೆ ಮಾಡಲಿಲ್ಲ. ಇಲ್ಲಿ ಪಕ್ಷಪಾತ ಮನೋಭಾವನೆಯನ್ನು ತೋರಿಸಿದ್ದಾರೆ. ಯಾರು ಜಮೀನು ಮಾಡುತ್ತಾರೋ ಅವರ ಜಮೀನನ್ನು ಹಂಚುವಾಗ ಅವರ ಅರ್ಧ ಭಾಗದಷ್ಟು ಫ್ಯಾಮಿಲಿ ಹೋಲ್ಡಿಂಗ್ಸಿಗೆ ಕೊಡಬೇಕೆಂದು ಮೊಗಂಟಿ ಹೇಳಿ ಸೀಲಿಂಗ್ಸ್ ಪಾಯಿಂಟನ್ನು ಬಿಟ್ಟರು. ಇಲ್ಲಿ ಒಂದು ಹೊಸ ನಮೂನೆಯನ್ನು ಇಟ್ಟುಕೊಂಡಿದ್ದಾರೆ. ಟೆನೆಂಟ್ ಆಗಿರುವವರು ಇಷ್ಟೇ ಇಟ್ಟುಕೊಳ್ಳಬೇಕೆಂದಿದೆ. ಆದರೆ ಜಮೀನು ಮಾಲಿಕನಾಗಿದ್ದರೆ, ಅಷ್ಟು ವಾಪಸ್ಸು ತೆಗೆದುಕೊಳ್ಳಬಹುದು. ಅವನಿಗೆ ಸೀಲಿಂಗ್ ಪಾಯಿಂಟ್ ಕನ್ಸಿಡರೇಷನ್ ಇಲ್ಲ. ಇದು ನಮ್ಮ ತತ್ವಕ್ಕೆ ಅಷ್ಟು ಸರಿಹೋಗುತ್ತದೆಯೇ ? ಯಾವನಾದರೂ ಒಬ್ಬ ಟೆನೆಂಟ್ ಆಗಿರುವವನು ಸಂಸಾರದಲ್ಲಿ ಐದು ಜನಗಳಿಗಿಂತ ಕಡಿಮೆ ಇದ್ದರೆ, ನಾಲ್ಕೂವರೆಯಷ್ಟು ಫ್ಯಾಮಿಲಿ ಹೋಲ್ಡಿಂಗ್ಸ್ ಆದರೆ, ಐದು ಜನಗಳಿಗಿಂತ ಜಾಸ್ತಿ ಇದ್ದರೆ, ಫ್ಯಾಮಿಲಿ ಹೋಲ್ಡಿಂಗ್ ನಾಲ್ಕೂವರೆಯಷ್ಟಿರುವುದು ಅದರ ಡಬ್ಬಲ್ ಆಗುತ್ತದೆ, ಅಂದರೆ ಎಂಟರಷ್ಟು ಆಗುತ್ತದೆ. ಅದನ್ನು ಬಿಟ್ಟು ಬಾಕಿ ಜಮೀನನ್ನು ತೆಗೆದುಕೊಂಡು ಜಮೀನು ಇಲ್ಲದವನಿಗೆ ಕೊಟ್ಟಿದ್ದಾರೆಯೇ ಎಂದರೆ ಅದೂ ಇಲ್ಲ. ಇದನ್ನು ಸರಿಯಾಗಿ ಹೇಳಲಿಲ್ಲ. ಇದರ ವಿಚಾರವಾಗಿ ಏನ ಮಾಡಬೇಕೆಂಬುದನ್ನು ಹೇಳುವುದನ್ನು ಏತಕ್ಕೆ ಮರೆತಿದ್ದಾರೋ ಗೊತ್ತಾಗಲಿಲ್ಲ. ಈ ದೃಷ್ಟಿಯಿಂದ ಎಷ್ಟು ವಿಶದವಾಗಿ ಹೇಳಿದರೂ ಕಡಿಮೆಯಾಗುತ್ತದೆ. ಇದು ದೊಡ್ಡ ಪ್ರಶ್ನೆ. ಮುಂದೆ ಜಮೀನನ್ನು ಹಂಚುವಾಗ ಯಾರಿಗೆ ಕೊಡುತ್ತೀರಿ ಎಂಬ ಪ್ರಶ್ನೆಯನ್ನೂ ಸಹ ನಾವು ಆಲೋಚನೆ ಮಾಡಲಿಲ್ಲವೆಂದು ತಾವು ತಿಳಿದುಕೊಳ್ಳಬಹುದು. ಭೂಮಿಯಲ್ಲಿ ಸಾಗುವಳಿ ಮಾಡುವ ಜಮೀನು ಎಷ್ಟಿದೆ, ಸಾಗುವಳಿಮಾಡುವ ಜಮೀನನ್ನು ಹಂಚುವುದರಲ್ಲಿ ಯಾವ ರೀತಿ ಮಾಡುತ್ತಿದ್ದೀರಿ ಎಂಬುದನ್ನು ನಾವು ಪೂರ್ಣವಾಗಿ ಆಲೋಚನೆ ಮಾಡಿದ್ದೇವೆ. ಇದರಲ್ಲಿ ಏನಾದರೂ ಒಂದು ನಿಗದಿಯಾದ ಮಾರ್ಗವನ್ನು ಇಟ್ಟುಕೊಂಡಿದ್ದೀರಾ ? ಜಮೀನ ಮಾಡುವವರು ಎಷ್ಟು ಜನರಿದ್ದಾರೆ, ಜಮೀನಿನಿಂದ ಜೀವನ ಮಾಡುವ ಜನರ ಅಂಕಿ ಅಂಶಗಳಿವೆಯೇ, ಬೇರೆ ವಿಧವಾಗಿ ಜೀವನ ಮಾಡುವವರು ಎಷ್ಟು ಫ್ಯಾಮಿಲಿಯವರು ಇದ್ದಾರೆ ಎಂಬುದಕ್ಕೆ ಏನಾದರೂ ಸ್ಟ್ಯಾಟಿಸ್ಟಿಕ್ಸ್ ತೆಗೆದಿದ್ದೀರಾ? ಯಾರಾರಿಗೆ ಯಾವ ಯಾವ ನಮೂನೆ ಮೂಲಕ ಜಮೀನು ಕೊಡಬೇಕೋ ಆರೀತಿ ಅವರಿಗೆ ಕೊಟ್ಟು ನಮ್ಮ ಸಮಾಜದಲ್ಲಿರತಕ್ಕ ಎಲ್ಲಾ ಆರ್ಥಿಕ ಸಲಕರಣೆಗಳನ್ನೂ ಸಾಮಾನ್ಯವಾಗಿ ಹಂಚುವ ಒಂದು ವ್ಯವಸ್ಥೆ ಇದರಲ್ಲಿ ಎಲ್ಲಿಯಾದರೂ ಇದೆಯೇ ಎಂದರೆ ಅದರ ಸುದ್ದಿಯೇ ಇಲ್ಲ. ಈಗ ಇದು ಜಮೀನಿಗೆ ಸಂಬಂಧಪಟ್ಟದ್ದು. ಇದನ್ನು ಏಕೆ ಹೇಳುತ್ತೇನೆಂದರೆ, ಜೀವನ ನಾನಾ ನಮೂನೆಯದು ; ತೊಡಕಿನ ಭಾವನೆಯನ್ನು ಹೊಂದಿರತಕ್ಕದ್ದು ; ಜೀವನದ ಒಂದು ಮಾರ್ಗವನ್ನು ನಿಗದಿ ಮಾಡುವ ಹಣೆಯ ಬರಹವನ್ನು ಸರ್ಕಾರದವರು ಲೇಖಣಿ ಇಟ್ಟುಕೊಂಡು ಬರೆಯುವಾಗ ಇನ್ನೊಂದು ಕಡೆ ಏಟು ಬಿದ್ದು ಸಮಾಜಕ್ಕೆ ಕೆಡಕು ಆಗಿದ್ದುದು ನಮ್ಮ ಗಮನಕ್ಕೆ ಬಂದಿದೆ. ಸಮಾಜದಲ್ಲಿರತಕ್ಕ ಎಲ್ಲಾ ಆರ್ಥಿಕ ಸಲಕರಣೆಗಳನ್ನೂ ಸಮನಾಗಿ ಹಂಚುವಾಗ ಒಂದು ಸಮಾನವಾದ ತತ್ವವನ್ನು ಇಟ್ಟುಕೊಳ್ಳಬೇಕು. ಇದು ಬರೀ ಜಮೀನಿಗೆ ಸಂಬಂಧ

ಪಟ್ಟ ವಿಚಾರ ಎಂದು ಹೇಳುವ ವಾದ ಅರ್ಥವಿಲ್ಲದ ವಾದ. ಅಂತಹ ಅರ್ಥಶೂನ್ಯವಾದ ವಾದವನ್ನು ಮಾಡಬೇಡಿ. ಜಮೀನಿಗೆ ಸಂಬಂಧಪಟ್ಟ ಎಲ್ಲಾ ಕಾನೂನುಗಳನ್ನು ಏಕಾಏಕಿ ತರಬಹುದೇ? ಸರ್ಕಾರಿ ನೌಕರರಲ್ಲಿ ಸಂಬಳ ಸಾರಿಗೆಗಳಲ್ಲಿ 75 ರೂಪಾಯಿ, 35 ರೂಪಾಯಿ, 30 ರೂಪಾಯಿ ವ್ಯತ್ಯಾಸ ಇದ್ದಹಾಗೆ ಇಲ್ಲಿ ಇಟ್ಟುಕೊಂಡಿದ್ದರೆ, ನಾನು ಬೇಡವೆಂದು ಹೇಳುತ್ತಿರಲಿಲ್ಲ. ಜತ್ತಿ ಸಮಿತಿ ವರದಿಯಲ್ಲಿ ಅನೇಕ ದುರ್ಭಾವನೆಗಳು ಅಡಕವಾಗಿ ಯಾವ ಯಾವ ರೀತಿ ಎಷ್ಟರಮಟ್ಟಿಗೆ ಕಡೆಗಣಿಸಿ ನೋಡುತಿದ್ದಾರೆ, ಯಾವ ಯಾವ ರೀತಿ ಉತ್ಪ್ರೇಕ್ಷೆಯಿಂದ ನೋಡುತ್ತಿದ್ದಾರೆ, ಎಷ್ಟೆಷ್ಟರಮಟ್ಟಿಗೆ ಪುರಸ್ಕರಿಸಿ ನೋಡುತ್ತಿದ್ದಾರೆ ಎನ್ನುವ ಪಕ್ಷಪಾತ ಮನೋಭಾವನೆಯನ್ನು ತೋರಿಸಿದ್ದಾರೆ. ಆ ರೀತಿ ಪಕ್ಷಪಾತ ಮನೋಭಾವನೆಯನ್ನು ತೋರಿಸುತ್ತಾ ಹೋದರೆ ದೇಶದ ಪ್ರಗತಿಗಾಗಲಿ ಜನರ ಹಿತಕ್ಕಾಗಲಿ, ಗೌರವಕ್ಕಾಗಲಿ ಸಾಧುವಲ್ಲ. ಆದ್ದರಿಂದ ನಾನು ಹೆಚ್ಚಿಗೆ ಹೇಳುವುದಿಲ್ಲ, ಏಕೆಂದರೆ ಇದರಲ್ಲಿ ಹೇಳುವ ಅಂಶಗಳು ಬಹಳ ಇವೆ.

4 P.M.

ಈ ಜಮೀನು ಪದ್ಧತಿ ಎನ್ನುವುದು ಬಹಳ ತೊಡಕಿನ ಸಮಸ್ಯೆ. ಇದನ್ನು ಒಂದು ಕಡೆ ಬಿಡಿಸುತ್ತಾ ಹೋದರೆ ಮತ್ತೊಂದು ಕಡೆಯಿಂದ ಇದು ಏಟು ಹೊಡೆಯುತ್ತಿರುತ್ತದೆ. ನಾವೆಲ್ಲರೂ ಇದುವರೆಗೂ ನಮ್ಮಲ್ಲಿರತಕ್ಕ ಜಮೀನನ್ನು ಒಂದು ಸ್ಥಿರವಾದ ಆಸ್ತಿಯೆಂದು ಭಾವಿಸಿದ್ದೆವು. ಇನ್ನು ಮೇಲೆ ಜಮೀನು ವ್ಯವಸಾಯ ಮಾಡುವ ಜನರೇ ಮುಂದೆ ಆ ಜಮೀನಿಗೆ ಒಡೆಯರಾಗುತ್ತಾರೆಂದು ಭಾವಿಸಿದ್ದೆವು. ಭೂಸುಧಾರಣೆಯನ್ನು ಮಾಡುತ್ತೇವೆಂದರೆ ತಮ್ಮ ಅರ್ಥವೇನೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಸೆಕ್ಯೂರಿಟಿ ಆಫ್ ಟೆನ್ಯೂರ್ ಎನ್ನುವುದರ ಅರ್ಥವೇನು? ಇಲ್ಲಿ ತಾವು ಹೇಳಿರುವ ಟೆನೆನ್ಸಿಗೂ ಮತ್ತು ಟೆನ್ಯೂರಿಗೂ ಬಹಳ ವ್ಯತ್ಯಾಸವಿದೆ. ಈ ದಿವಸ ದೇಶದಲ್ಲಿರತಕ್ಕ ನಾನಾ ಉದ್ಯಮಗಳೂ ಒಂದೊಂದು ಆಸ್ತಿ ಎಂತಲೇ ಹೇಳಬೇಕಾಗುತ್ತದೆ. ಜಮೀನು ಮಾಡತಕ್ಕವನಿಗೆ ಜಮೀನೇ ಆಧಾರ; ಲೇಖನಿ ಹಿಡಿದಿರತಕ್ಕವನ ಜೀವನಕ್ಕೆ ಆ ಲೇಖನಿಯೇ ಒಂದು ಆಸ್ತಿ; ಹೀಗೆಯೇ ಪ್ರತಿಯೊಂದು ಉದ್ಯಮವೂ ಒಬ್ಬರ ಜೀವನಾಧಾರದ ಆಸ್ತಿ. ಇದರಿಂದಲೇ ಇಲ್ಲಿಯತನಕ ಜನರು ಜಮೀನನ್ನು ಒತ್ತೆಯಿಟ್ಟು ಜೀವನ ನಡೆಸುತ್ತಿದ್ದರು. ಅಂಥ ಒಂದು ರಹ ಇಲ್ಲಿಯವರೆಗೂ ಇತ್ತು. ರೈತನಿಗೆ ಕಷ್ಟಕಾಲ ಒದಗಿದಾಗ ಆತನ ಭೂ ಆಸ್ತಿಯನ್ನು ಮಾರಿ ಅದರಿಂದ ಬರುತ್ತಿದ್ದ ಉತ್ಪತ್ತಿಯನ್ನು ಬೇರೆ ಮಾರ್ಗದಲ್ಲಿ ಉಪಯೋಗಿಸಲು ಆತನಿಗೆ ಅವಕಾಶವಿತ್ತು. ಆದರೆ ಮುಂದೆ ಇದರ ಪರಿಣಾಮವೇನಾಗುತ್ತದೆ ಎನ್ನುವುದು ಈ ವರದಿಯಲ್ಲಿ ವ್ಯಕ್ತಪಟ್ಟಿಲ್ಲ. ಇನ್ನು ಮುಂದೆ 20 ವರ್ಷಗಳ ತನಕ ಒಬ್ಬ ಗೇಣೀದಾರನಿಗೆ ಜಮೀನನ್ನು ಕೊಟ್ಟರೆ ಅವನು ಆ ಅವಧಿಯೆಲ್ಲಾ ಮುಗಿದರೂ ಅವನು ಹಾಗೆಯೇ ಬರಿ ಗೇಣೀದಾರನಾಗಿಯೇ ಉಳಿಯುತ್ತಾನೆ. ಮೇಲ್ಪಟ್ಟು ಅವನು ಆ ಜಮೀನನ್ನು ಪರಭಾರೆ ಮಾಡುವ ಹಕ್ಕೂ ಕೂಡ ಅವನಿಗಿಲ್ಲ. ಇದು ಖಾಯಂ ಆದಂತಾಯಿತು. ಇದನ್ನು ಟೆನೆನ್ಸಿ ಪ್ರೊಟೆಕ್ಷನ್ ಎಂದು ಕರೆದಿದ್ದಾರೆ. ನಾನು ತಿಳಿದುಕೊಂಡಿರುವುದು ಈ ಟೆನೆನ್ಸಿ ಆಫ್ ಪ್ರೊಟೆಕ್ಷನ್ ಎಂದರೆ ರೈತನಾದವನಿಗೆ ಈ ಜಮೀನು ನನ್ನದು, ಇದು ಪರರದು ಎನ್ನುವ ಭಾವನೆ ಮೂಡಿಸುವುದು ಎಂದು ತಿಳಿದುಕೊಂಡಿದ್ದೆ. ಆದರೆ ಸರ್ಕಾರ ಹೀಗೆ ಒಂದಾವರ್ತಿ ಗೇಣಿಗೆ ಜಮೀನುಗಳನ್ನು ಕೊಟ್ಟ ಮೇಲೆ ಅವುಗಳನ್ನು ಪುನಃ ಅವನಿಂದ ಹೇಗೆ ವಾಪಸು ತೆಗೆದುಕೊಳ್ಳಲು ಅವಕಾಶ ಕೊಡುತ್ತಾರೋ ಅದು ನನಗೀಗ ತಿಳಿಯಲಿಲ್ಲ. ಜಮೀನು ಮಾಲೀಕ ಎಂದು ಹೇಳಿಕೊಳ್ಳತಕ್ಕವನು ಜಮೀನನ್ನು ಯಾವತ್ತೂ ಆಬಾದು ಮಾಡಿಲ್ಲ. ಆ ಬಗ್ಗೆ ಅವನು ಎಳ್ಳಷ್ಟೂ ಪ್ರಯತ್ನ ಮಾಡಿರುವುದಿಲ್ಲ. ಆ ಜಮೀನನ್ನು ಉತ್ತಮಗೊಳಿಸಿರುವವನು ಗೇಣೀದಾರ. ಹೀಗಿದ್ದರೂ ಆ ಗೇಣೀದಾರನನ್ನು ಬಿಡಿಸಿ ಆ ಜಮೀನನ್ನು ಮತ್ತೆ ಅದರ ನಾಮಕಾವಾಸ್ತೆ ಮಾಲೀಕನಿಗೆ ಕೊಡಬಹುದೆಂದು ಹೇಳಿರುವುದರಲ್ಲಿ ಗೇಣೀದಾರನನ್ನು ಎಷ್ಟರಮಟ್ಟಿಗೆ ಎಕ್ಸ್‌ಪ್ಲಾಯಿಟ್ ಮಾಡಿಕೊಳ್ಳಲಾಗಿದೆ ಎಂಬುದು ಎದ್ದು ಕಾಣುತ್ತಿದೆ. ಒಬ್ಬರ ದುಡಿಮೆಯನ್ನು ಇನ್ನೊಬ್ಬರು ತಿನ್ನಬಾರದೆಂದು ರಾಜ್ಯಾಂಗದಲ್ಲಿ ಹೇಳಿದೆ. ಹೀಗೆ ಹೇಳಿದ್ದಾಗಲೂ ಸಹ ಜಮೀನ್ದಾರನಾಗಿರತಕ್ಕವನು ತನ್ನ ಜಮೀನಿನ ಬಗ್ಗೆ ಎಳ್ಳಷ್ಟೂ ಆಸಕ್ತಿವಹಿಸದೆ ಇದ್ದಾಗ ಆ ಜಮೀನಿಗೆ ವಿಶೇಷವಾಗಿ ಶ್ರಮಿಸಿ, ಅದನ್ನು ಉತ್ತಮಪಡಿಸಿದಂಥ ಗೇಣಿದಾರನನ್ನು ಈ ದಿವಸ ಒಬ್ಬ ಕೂಲಿಗಾರನ ಮಟ್ಟಕ್ಕೆ ಇಳಿಸಿದಂತಾಯಿತು. ನ್ಯಾಯವಾಗಿ ಎಕ್ಸ್‌ಪ್ಲಾಯಿಟೇಷನ್ ತಪ್ಪಿಸುವುದರ ಬದಲು ಅದನ್ನು ಇಮ್ಮಡಿ ಮಾಡಿದ್ದಾರೆ. ರೈತನಾಗಿ ಗೇಣಿಸಾಗುವಳಿ ಮಾಡತಕ್ಕವನು ಆ ಜಮೀನಿಗೆ ಗೊಬ್ಬರ ಹಾಕಿ ಅದಕ್ಕೆ ಬೇಕಾದಷ್ಟು ಶ್ರಮವನ್ನು ಖರ್ಚುಮಾಡಿ, ಆ ಭೂಮಿಯನ್ನು ಕಾಲಕಾಲಕ್ಕೆ ಸರಿಯಾಗಿ ಸಾಗುವಳಿಮಾಡಿ, ಹೀಗೆ ಎಲ್ಲ ವಿಧದಲ್ಲೂ ಆ ಭೂಮಿಯ ಉತ್ತಮಸ್ಥಿತಿಗೆ ಕಾರಣನಾಗಿರತಕ್ಕಂಥ ರೈತನ ಹಿತವನ್ನು ಸಂಪೂರ್ಣವಾಗಿ ಕೈಬಿಟ್ಟುಬಿಡಲಾಗಿದೆ. ಹೀಗೆ ಜಮೀನಿನ ಉತ್ತಮಸ್ಥಿತಿಗೆ ವಿಶೇಷವಾಗಿ ದುಡ್ಡನ್ನು ಖರ್ಚು ಮಾಡಿ, ಆ ಜಮೀನಿನ ಉಳುಮೆ, ಅದಕ್ಕೆ ಎತ್ತು ಇತ್ಯಾದಿ ನಾನಾ ರೂಪದಲ್ಲಿ 20 ವರ್ಷಗಳ ಪರಿಯಂತ ಬಂಡವಾಳ ಹಾಕಿ ಶ್ರಮಿಸಿದಂಥವನಿಗೆ ಈ ದಿವಸ ದೊರೆಕಿಸಿಕೊಟ್ಟಿರುವ ಪ್ರತಿಫಲವೇನೆಂದರೆ, ಆ ಮನುಷ್ಯ ಆ ಜಮೀನನ್ನು ಯಾರಿಗೂ ಪರಭಾರೆ ಮಾಡಬಾರದು ಎಂಬುದು. ಆದರೆ ಯಾರು ಕೇವಲ ಮಾಲೀಕನೆನಿಸಿಕೊಂಡು ಆ ಆಸ್ತಿಯ ಬಗ್ಗೆ ಎಳ್ಳಷ್ಟೂ ಶ್ರಮಿಸಿದವನಿಗೆ ಯಾವ ಅನುಕೂಲತೆಗಳನ್ನು ಕೊಡಲಾಗಿದೆ ಎಂಬುದನ್ನು ಹೋಲಿಕೆ ಹಾಕಿ ನೋಡಿದರೆ ಅನ್ಯಾಯವೆಂಬುದು ಎದ್ದು ಕಾಣುತ್ತಿದೆ. ಹೀಗೆ ಇಲ್ಲಿಯವರೆಗೂ ಜಮೀನು ಆಬಾದು ಮಾಡಿರತಕ್ಕ ರೈತನಿಂದ ಆ ಜಮೀನನ್ನು ಕಿತ್ತುಕೊಂಡು ಪುನಃ ಮಾಲೀಕನಿಗೇ ಕೊಡಬಹುದೆಂದು ಇಲ್ಲಿ ಹೇಳಿರತಕ್ಕದ್ದು ಎಕ್ಸ್‌ಪ್ಲಾಯಿಟೇಷನ್ ಅಲ್ಲದೆ ಮತ್ತೇನಾಗುತ್ತದೆ?

ಒಬ್ಬ ಸದಸ್ಯರು.—'ಎಕ್ಸ್‌ಪ್ಲಾಯಿಟೇಷನ್' ಎಂಬುದರ ಅರ್ಥವೇನು?

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಈ ಸಭೆಯಲ್ಲಿ ಆಡಳಿತ ಪಕ್ಷದವರ ಧೋರಣೆಯೇ ಒಂದು ರೀತಿಯಾಗಿದೆ. ಆದರೆ ಅವರು ಹೇಳುವ ಹಾಗೆ ನಾನು ಹೇಳುವುದಕ್ಕೆ ಆಗುವುದಿಲ್ಲ; ಅದು ಸಾಧ್ಯವೂ ಇಲ್ಲ. ಆದ್ದರಿಂದ ನಾನು ಹೇಳುತ್ತಿರುವುದನ್ನು ಅವರು ಯಾವ ರೀತಿ ಬೇಕಾದರೂ ತಿಳಿದುಕೊಳ್ಳಬಹುದು. ಆದರೆ ಇಲ್ಲಿ ಎಲ್ಲರ ಮನಸ್ಸಿಗೂ ಸೊಗಸುವಂತೆ ಮಾತನಾಡತಕ್ಕ ಶಕ್ತಿಯನ್ನು ದೇವರು ನನಗೆ ಕೊಟ್ಟಿಲ್ಲ. ಈ ಎಕ್ಸ್‌ಪ್ಲಾಯಿಟೇಷನ್ ಎಂದರೆ ಏನೆಂಬುದರ ಬಗ್ಗೆ ನಾನೀಗ ಇಂಡಿಯನ್ ಕಾನ್ಸ್ಟಿಟ್ಯೂಷನ್ನಿನ ಕೆಲವು ಭಾಗಗಳನ್ನು ಓದುತ್ತೇನೆ. ಆದರೆ ಒಟ್ಟಿನಲ್ಲಿ ಈ ಎಲ್ಲ ಪ್ರಾವಿಜನ್‌ಗಳ

(ಶ್ರೀ ಕೆ. ಕೆಂಚಪ್ಪ)

ಒಳತತ್ವ ಒಬ್ಬರನ್ನು ಮತ್ತೊಬ್ಬರು ಶೋಷಣೆ ಮಾಡಲು ಯಾರೊಬ್ಬರಿಗೂ ಅವಕಾಶವಿರಬಾರದೆಂಬುದೇ ಆಗಿದೆ. ದೇಶದ ಸ್ವತ್ತನ್ನು ಸಂಪಾದನೆಯನ್ನು ಹಂಚುವಾಗ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಹಂಚಿಕೆ ಮಾಡಬಾರದೆಂದು ವಿಧಿಯಲ್ಲಿ ಹೇಳಿದೆ, ಆದರೆ ಇಲ್ಲಿಯೂ ಸಹ "ಶೋಷಣೆಯನ್ನು ತಪ್ಪಿಸತಕ್ಕದ್ದು" ಎಂಬುದಾಗಿಯೇ ಶಿರೋನಾಮೆ ಇದೆ. ಈ ಶಿರೋನಾಮೆಯ ಪ್ರಕಾರ ಶೋಷಣೆಯನ್ನು ತಪ್ಪಿಸತಕ್ಕದ್ದು ಸರ್ಕಾರದವರ ಆದ್ಯಕರ್ತವ್ಯ. ಮೊನ್ನೆ ಬರ್ಹಂಪುರದಲ್ಲಿ ನಡೆದ ಒಂದು ಬಹಿರಂಗ ಸಭೆಯಲ್ಲಿ ಹೀಗೆ ಹೇಳಿದ್ದಾರೆ:

In this connection, I will read the significant resolution passed recently at a public meeting at Berhampore, Orissa, which was presided over by the Speaker, of the LegislativeAssembly:

"This meeting emphatically protests against the general tendency on the part of the Central and State Governments and most of the political leaders to completely ignore and disregard the legitimate interests of the middle-class and their modest investments and deeply deplores that every reform should be sought to be carried out solely at the expense of the already hard-hit middle-class, while in advance western democracies, equitable distribution of national wealth is brought about by levelling down the wealthiest section by a widely created system of taxation and levelling up the poorer sections, by ensuring better and varied means of livelihood, thereby bringing all, generally, to the middle-class level, while in our country, the unfortunate effect of the lopsided reform is to make them ever more insecure thereby creating a greater gulf between the poorer and the richer classes. This is all the more deplorable and short-sighted since no alternative means of livelihood or social security for all is ensured and; even hypocritical, since it is done in the name of social justice and a socialist pattern of society. This meeting warns the concerned authorities and the political leaders that to reduce the middle-class to frustration and desperation is the surest way to hasten the social up heaval intended to be averted by all."

ಈ ರೀತಿಯಾಗಿ ಅವರು ಹೇಳಿದ್ದಾರೆ. ಆದುದರಿಂದ ನಾನು ಹೇಳುವುದು ಇಷ್ಟೇ ಬಾಕಿ ವಿಚಾರವನ್ನು ನಮ್ಮ ಮಾನ್ಯ ಸದಸ್ಯರು ಹೇಳಬಹುದು. ನಾನು ಒಂದೇ ಒಂದು ವಿಷಯವನ್ನು ಹೇಳಿ ಮುಗಿಸಿಬಿಡುತ್ತೇನೆ. ಹಿಂದೆ ಯಾರು ಯಾರು ಜಮೀನನ್ನು ತೆಗೆದುಕೊಂಡು ಬಿಟ್ಟಿದ್ದಾರೋ, ಮತ್ತು ಯಾವ ವಿಧದಿಂದ ತೆಗೆದುಕೊಂಡರೋ, ಅದನ್ನು ವಾಪಸುಕೊಡಿಸಲು ಸರಿಯಾದ ಶಾಸನವನ್ನು ಮಾಡಿ ಮತ್ತು ಸರಿಯಾದ ಕಾನೂನನ್ನು ಮಾಡಬೇಕೆಂದು ಹೇಳುತ್ತಲೇ ಇದ್ದೇನೆ. 1948ನೇ ಇಸವಿಯಿಂದ ಇದುವರೆಗೂ ಇಲ್ಲವೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ದಾಖಲೆ ಇಲ್ಲ ಎನ್ನುತ್ತಾರೆ. ನಾನು ಸ್ವಲ್ಪ ಲಾಯರ್ ಗಿರಿ ಮಾಡಿದ್ದೇನೆ. ನನಗೆ ತಿಳಿದಂತೆ ದಾಖಲೆಯಿದೆ. ಪಹಣಿ ದಾಖಲೆ ಎಂದಿದೆ. ಇದನ್ನು ಹನ್ನೆರಡು ವರ್ಷಗಳವರೆಗೆ ಇಟ್ಟುಕೊಳ್ಳಬೇಕೆಂದಿದೆ. ಹೀಗೆ ಹನ್ನೆರಡು ವರ್ಷ ಇಟ್ಟುಕೊಳ್ಳಬೇಕೆಂದಿರುವಾಗ, ಈಗಾಗಲೇ ಈ ಹನ್ನೆರಡು ವರ್ಷದ ಅವಧಿ ಮುಗಿಯುತ್ತ ಬಂದಿದೆ. ಈಗಾಗಲೇ 57ನೆಯ ಇಸವಿ ವೇಳೆಗೆ ಇದನೆಲ್ಲ ಸರಿಯಾಗಿ ಇಟ್ಟುಕೊಳ್ಳಬೇಕಾಗಿತ್ತು. ಈ ಪಹಣಿಯಲ್ಲಿ ಯಾರು ಯಾರು ಜಮೀನುಗಳನ್ನು ಮಾಡುತ್ತಿದ್ದಾರೆ, ಮತ್ತು ಆ ರೀತಿಜಮೀನು ಮಾಡುವವರು, ಸಂಬಂಧಪಟ್ಟ ಜಮೀನನ್ನು ಮಾಡತಕ್ಕವರು, ಸರಕಾರಿ ನೌಕರಿಯಲ್ಲಿ . . . .

Sri M. P. PATIL.—On a point information, Sir I have myself seen some of these registers and what the Hon'ble Leader of the Opposition says is not quite correct. In some registers the names of tenants are entered. That is true, but that is in very few cases.

ಶ್ರೀ ಕೆ. ಕೆಂಚಪ್ಪ.—ಎಂದಮೇಲೆ, ನಾನು ಕೇಳುತ್ತೇನೆ, ಒಂದು ಫಾರಂನಲ್ಲಿ ಮೂಲಹಿಡುವಳಿದಾರ ಎಂದು ಹೇಳಿ ಮತ್ತೊಂದು ಕಾಲಂ ಇದ್ದರೆ ಅದನ್ನು ಬಿಟ್ಟು ಬಿಟ್ಟು entry ಮಾಡದೆ ಇದ್ದರೆ, ಹಾಗೆ ಇಂತಹ entry ಮಾಡದೆ ಇರುವುದರಿಂದ ಪ್ರಜಾಸೇವಕರೆಂದು ಇಟ್ಟುಕೊಂಡಿರುವ ಸರಕಾರಿ ನೌಕರರು ಹೀಗೆ ಮಾಡುತ್ತಿರುವುದು ತುಂಬ ಶೋಚನೀಯ.

Sri M. P. PATIL.—As a matter of fact, orders have already been issued that entries should be made in tenants' registers and this work is going on in every village.

ಶ್ರೀ ಕೆ. ಕೆಂಚಪ್ಪ.—ಸ್ವಾಮೀ, ಮುಂದೆ ಆಗುವುದನ್ನು ಹೇಳುವುದಕ್ಕಾಗುವುದಿಲ್ಲ. ಪ್ರಾಂತಗಳು ಈಗ ಮೈಸೂರು ಸಂಸ್ಥಾನಕ್ಕೆ ವಿಲೀನವಾಗಿವೆ. 48ನೆಯ ಇಸವಿಯಿಂದ ಹಿಂದೆ ಕೂಡ ಈ ಪಹಣಿಫಾರಂ ಎಂದು ಇದೆ. ಅದರಲ್ಲಿ ಒಂದು column ಇದೆ; ಅದನ್ನು omit ಮಾಡಿದ್ದಾರೆ. ಅಂತಹ ಅಧಿಕಾರಿಗಳನ್ನು ನೀವು ಇಟ್ಟುಕೊಂಡಿದ್ದೀರಿ. ಅಂತಹ ನಾನಾ ತಪ್ಪುಗಳನ್ನು ಮಾಡಿದ್ದಾರೆ. ಅದಕ್ಕಾಗಿ ಇದೆಲ್ಲವನ್ನೂ enquiry ಮಾಡಿ ಯಾರಾರು ಜಮೀನು ಮಾಡಿದರು ಎನ್ನುವುದನ್ನು ಸೇರಿಸದೆ ಹೋದರೆ ಸರಿಯಾಗಿರುವುದಿಲ್ಲ. ಅಲ್ಲದೆ, ಜಮೀನು ಮಾಡುವವರು ಯಾರು, ಜಮೀನುದಾರರು ಯಾರು ಎಂದು ಇಲ್ಲಿ ಎರಡು ಕಾಲಂಗಳಿವೆ. ಜಮೀನುದಾರರು ಯಾರು ಜಮೀನನ್ನು ಮಾಡದೆ ಇರುವವರು ಯಾರು ಎನ್ನುವುದನು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲವೇನು ? ಅದರಿಂದಾಗಿ ಈಗ ನೀವು ಹೇಳುತ್ತಿರುವ Socialistic Pattern of Society ಎನ್ನುವ ಸಮತಾವಾದ ಸಮಾಜ ಹೇಗೆ ಉಳಿಯುವುದು ? ದೇಶಾಭಿಮಾನಿಗಳಾಗಿರುವವರು ಹೀಗೆ ಹೇಳಿದರೆ ಅದು ಸಮತಾವಾದವೆಂದು ಹೇಳು

ವುದಕ್ಕಾಗುತ್ತದೆಯೇ ? ಅಲ್ಲದೆ ಇನ್ನು ಮುಂದೆ ನಾವು ಇನ್ನೇನನ್ನು ಅನುಭವಿಸಬೇಕೋ ಹೇಳುವುದಕ್ಕಾಗುವುದಿಲ್ಲ. ಪ್ರಳಯಕಾಲದಲ್ಲಿ ಹುಟ್ಟುವ ಬೆಂಕಿ, ಕೆಟ್ಟವರನ್ನು ಮಾತ್ರ ಸುಡುವುದಿಲ್ಲ. ಒಳ್ಳೆಯವರನ್ನೂ ಸುಡುತ್ತದೆ. ಹೀಗೆ ಪಾಪಮಾಡದವರೆಲ್ಲ ಪ್ರಳಯಕಾಲದ ಬೆಂಕಿಗೆ ತುತ್ತಾಗಬೇಕಾಗುತ್ತದೆ. ಇದರಿಂದ ಮನೆಮಂದಿ ಮಕ್ಕಳೆಲ್ಲ ಸಾಯಬೇಕಾದ ಸ್ಥಿತಿ ಬರುತ್ತದೆ. ಹೀಗೆ ಒಳ್ಳೆಯವರಾಗಿ ನೀವು ಈ ಪ್ರಳಯಕಾಲದ ಬೆಂಕಿಗೆ ಯಾರನ್ನು ನೂಕಬೇಕು ಮತ್ತು ಈ ಕೆಲಸವನ್ನು ಯಾರು ಮಾಡಬೇಕು ಎನ್ನುವುದನ್ನು ಈಗ ಆಲೋಚನೆ ಮಾಡಬೇಕು. ನಾನು ತಮ್ಮಲ್ಲಿ ಕೇಳುತ್ತೇನೆ, ನಿಮ್ಮ ಬುಕ್ಕಿನಲ್ಲಿ ಏನೂ ದಾಖಲೆ ಇಲ್ಲವೇ, ಬರೆದಿಲ್ಲವೇ ? ಅದಕ್ಕೆಲ್ಲ ದಾಖಲೆಯಿದೆ, ಕಾಲಂ ಇದೆ. ಆದರೆ ಆ ಬುಕ್ಕಿನಲ್ಲಿ entry ಮಾಡದೆ ಅದನ್ನು ಕೈಬಿಟ್ಟು ಬಿಟ್ಟಿದ್ದರೆ, ಅದನ್ನು ದಾಖಲೆಯಿಲ್ಲ ಬಿಡಿ ಎನ್ನುವುದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಹಿಂದೆ ಆಗಿದ್ದು ಈಗ ಆಗಬೇಕಾಗಿದುದನ್ನು ಮುಂದೆ ಈ ಗೇಣೀಶಾಸನ ಬರುವ ಸಂಭವವಿದೆ ಎನ್ನುವುದನ್ನು ತಿಳಿದುಕೊಂಡು ನಿಮ್ಮ ಸ್ವಜನಪಕ್ಷಪಾತಕ್ಕಾಗಿ ನೀವು ಈ ರೀತಿ ಮಾಡಿದರೆ, ಅದಕ್ಕೆ ನಾನೇನು ಹೇಳಬೇಕಾಗುತ್ತದೆ ?

Sri M. P. PATIL.—Sir, I am not able to follow what the Hon'ble Leader of the Opposition is saying. Who has stated that they are left to their will ? Supposing an entry is not there, those who want it can produce evidence and that evidence will be considered either by the tribunal or the court. The entry is not a conclusive evidence. If there is no entry in the register, we cannot help it, but entries are being made now. I do not know what he is saying.

ಶ್ರೀ ಕೆ ಕೆಂಚಪ್ಪ.—ಅದು topsy turvy ಪ್ರಶ್ನೆಯಾಗುತ್ತದೆ. ಏಕೆಂದರೆ, ಇನ್ನು ಮುಂದೆ ಹೋದರೆ . . . .

Sri M. P. PATIL.—If there is no record, what is to be done ?

Sri K. KENCHAPPA.—It is the duty of the officers to make enquiries as to who was cultivating the land. It is not the duty of the tenant to bring the records and show who was cultivating it. If you are interested in socialistic pattern of society, if you are interested in the wealth of the country being distributed enqually among the people, if you are interested that injustice should be done away with, the officers must find out who was cultivating the land. It is their duty. The tenants must have their due share.

ಆದುದರಿಂದ ಇದನ್ನು ನಾವು ನೋಡಬೇಕಾಗುತ್ತದೆ. ಸುಮ್ಮನೆ ತಾವು ಹೀಗೆ ತೆಗೆದುಕೊಂಡು ಬರುವ ಹಾಗಿಲ್ಲ. ಇದು socialistic pattern ಆಗುವುದಿಲ್ಲ. ಬಂಡವಾಳಶಾಹಿ ಪ್ರಶ್ನೆಯಾಗುತ್ತದೆ. ಅದಕ್ಕಾಗಿ ಇದನ್ನೆಲ್ಲ ಎನ್‌ಕ್ವೈರಿ ಮಾಡಬೇಕೆಂದು ಹೇಳುತ್ತಿರುವುದು. ಇದನ್ನು socialism ಎಂದು ಹೇಳುವುದಕ್ಕಾಗುವುದಿಲ್ಲ. ಇದು dictatorship ಆಗುತ್ತದೆ. Totalitarian ಆಗುತ್ತದೆ. ಇದಕ್ಕಿಂತ ಹೆಚ್ಚಿಗೆ ನಾನು ಇದನ್ನು ಹೇಳಲಾರೆ. ದೇಶಸೇವಕರೆಂದು ಹೇಳಿಕೊಂಡು ಈ ರೀತಿಯಾಗಿ ಮಾಡತಕ್ಕದ್ದು ತತ್ವವನ್ನು ತಲಕೆಳಕುಮಾಡಿದಂತಾಗಿದೆ. ನಾನು ಹೇಳುವುದು ಇಷ್ಟೇ. ಒಂದಕ್ಕೊಂದು ಅಸಂಬದ್ಧವಾಗಿ ಹೇಳುವುದನ್ನು ಬಿಟ್ಟು ನ್ಯಾಯವಾಗಿ ಯಾವ ಮಾರ್ಗದಲ್ಲಿ ಹೋಗಬೇಕೋ ಆ ಮಾರ್ಗದಲ್ಲಿ ಹೋಗಬೇಕು. ಮತ್ತು ಆ ಪರಿಸ್ಥಿತಿಗೆ ಅನುಸಾರವಾಗಿ ಇದನ್ನು ಅನುಸರಿಸಬೇಕು.

ಸ್ವಾಮೀ, ಒಂದು ತತ್ವವನ್ನು ಪ್ರತಿಪಾದನೆ ಮಾಡುವಾಗ ಮೂಲಭೂತವಾಗಿ ವಿಮರ್ಶೆಮಾಡಿ ಅದನ್ನು ಸಮಂಜಸವಾಗಿ ಪರಿಹಾರಮಾಡುವ ಸೌಲಭ್ಯಗಳನ್ನು ಸರಕಾರಿ ನೌಕರರು ಮಾಡಿಕೊಡಬೇಕು. ಪ್ರಜಾಸೇವಕರೆಂದು ಹೇಳಿಕೊಂಡು ಅನ್ಯಾಯವಾಗುವಂತೆ ಮಾಡಿದರೆ ಅದು "ಮಾನಾರ್ಕಿ" ಯಾಗುತ್ತದೆ. ಅದು ಸೋಷಿಯಲಿಸಂ ಆಗುವುದಿಲ್ಲ. ಈ ವಿಚಾರವನ್ನೂ ಸಮಾಜವಾದದ ತತ್ವದ ದೃಷ್ಟಿಯಿಂದ ಪರಿಗಣಿಸಬೇಕಾಗುತ್ತದೆ. ಮತ್ತು ಇನ್ನು ಹೆಚ್ಚಾಗಿ ಹೇಳಲು ನನಗೆ ಸಾಕಷ್ಟು interference ಗಳು ಆಗಿವೆ. ನಿಮ್ಮ ಕೈಗೇ ಬಿಡುತ್ತೇನೆ. ಮತ್ತು sidetrack ತುಂಬ ಆಗಿದೆ. ಮೂಲಭೂತವಾದ ತತ್ವವನ್ನು ಏನೋ ಒಂದು ರೀತಿಯಿಂದ, ಒಂದು ಇಕ್ಕಟ್ಟಿನ ಮನಸ್ಸನ್ನು ಹಿಡಿದುಕೊಂಡು ಇಲ್ಲಿ ಹೇಳಬೇಕಾಗಿದೆ. ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಪಿ. ಪಾಟೀಲ್.—ನಿಜವಾದ ಸಂಗತಿಯನ್ನು ಹೇಳದಿದ್ದರೆ ಕೇಳಲೇಬೇಕಾಗುತ್ತದೆ.

*ಶ್ರೀ ಮಲ್ಲಪ್ಪ ಲಿಂಗಪ್ಪ (ಸೆರಂ).—ಮಾನ್ಯ ಅಧ್ಯಕ್ಷರೇ, ಇವೊತ್ತು ಸರಕಾರದ ಕಡೆಯಿಂದ ಲ್ಯಾಂಡು ರಿಫಾರಂಸ್ ವಿಷಯದಲ್ಲಿ ಬಂದಿರುವ ಈ ಜತ್ತಿ ಸಮಿತಿಯ ವರದಿಯನ್ನು ನೋಡುವಾಗ, ಮೈಸೂರು ಸ್ಟೇಟಿನ ನಾನಾ ಭಾಗದಲ್ಲಿ ಈ ಸಮಿತಿಯವರು ಸಂಚಾರಮಾಡಿ ತಮಗೆ ಸಾಧ್ಯವಾದಷ್ಟು ಅನುಕೂಲವಾಗುವ ಹಾಗೆ ಈ ಭೂಸುಧಾರಣೆ ವಿಷಯದಲ್ಲಿ ಅವರು ಒಂದು ರೀತಿಯಲ್ಲಿ ಒಂದು ವರದಿಯನ್ನು ತಯಾರಿಸಿ ಈ ಸಭೆಯ ಮುಂದೆ ತಂದು ಇಟ್ಟಿದ್ದಾರೆ. ಈ ರಿಪೋರ್ಟನ್ನು ನಾವು ನೋಡುವ ಕಾಲಕ್ಕೆ ಕೆಲವು ವಿಷಯಗಳ ಬಗ್ಗೆ ಅವರು ಯಾವ ವಿಷಯವನ್ನೂ ಸರಿಯಾದ ರೀತಿಯಲ್ಲಿ ನೋಡಿಲ್ಲವೆಂದು ನನಗನಿಸುತ್ತಿದೆ. ಈ ಮೈಸೂರು ಸ್ಟೇಟಿನಲ್ಲಿ ಎಷ್ಟು ಎಕರೆ ಭೂಮಿಯನ್ನು ಹಂಚುವುದಕ್ಕೆ ಸಾಧ್ಯವಿದೆ, ಎಷ್ಟು ಭೂಮಿ ಸರ್‌ಪ್ಲಸ್ ಆಗಿದೆ ಮತ್ತು ಇವನ್ನು ಲ್ಯಾಂಡ್‌ಲೆಸ್ ಆಗಿರುವ ಜನಗಳಿಗೆ ಈಗ ಜಮೀನನ್ನು ಕೊಡುವುದಕ್ಕನುಕೂಲಿಸುವಂತೆ ಒಂದು ಶಾಸನವನ್ನು ಮಾಡತಕ್ಕದ್ದಿದೆ. ಆ ಕಾರಣದಿಂದ ಈಗ ಮೈಸೂರು ಸ್ಟೇಟಿನಲ್ಲಿ ಎಷ್ಟು ಜಮೀನು ಹಂಚಲಿಕ್ಕೆ ಬರುತ್ತದೆ ಎನ್ನುವುದನ್ನು ನೋಡಿ ಅವರು ಸರಿಯಾದ ಕಾರಣಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅದರಿಂದಾಗಿ ಈಗ ಎಷ್ಟು ಎಕರೆ ಭೂಮಿಯಿದೆ, ಎಷ್ಟು ಎಕರೆಗಳಲ್ಲಿ ಲ್ಯಾಂಡ್ ಲೆಸ್ಸು ಇವೆ ಎನ್ನುವುದನ್ನು ನಾವು ತೆಗೆದುಕೊಂಡು ಈ ಭೂಮಿಯನ್ನು ಹಂಚಲಿಕ್ಕೆ ಬರುತ್ತದೆ. ಇದು ಅಷ್ಟು ಹಸನಾದ ಕೆಲಸವಲ್ಲ.

1955, 1956 ಮತ್ತು 1957ನೆಯ ಇಸ್ವಿಗಳಲ್ಲಿ ಎಷ್ಟು ಭೂಮಿಯನ್ನು ಇದುವರೆಗೆ ಲ್ಯಾಂಡ್‌ಲಾರ್ಡ್ಸ್ ತಮ್ಮ ಹೆಸರಿನಿಂದ ತಮ್ಮ ಅಣ್ಣತಮ್ಮಂದಿರ ಹೆಸರಿಗೆ

(ಶ್ರೀ ಮಲ್ಲಪ್ಪ ಲಿಂಗಪ್ಪ)

ಹಂಚಿಬಿಟ್ಟಿದ್ದಾರೋ ಎನ್ನುವುದು ಸಹ ಸರ್ಕಾರಕ್ಕೆ ಹೇಳುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಅಂದ ಮೇಲೆ ಎಷ್ಟು ಭೂಮಿ ಹಂಚುವೆವು ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಎರಡನೆಯದು ಟೆನೆಂಟ್ ವಿಷಯ. ಟೆನೆಂಟ್ ವಿಷಯದಲ್ಲಿ ಸಹ ಎಷ್ಟು ಸಾವಿರ ಜನ ಟೆನೆಂಟ್ಸ್‌ಗಳು ಇದ್ದಾರೆ, ownership right ಅವರಿಗೆ ಸಿಕ್ಕುತ್ತದೆಯೋ ಎಂದು ಹೇಳಲು ಅವರಿಗೆ ಸಾಧ್ಯವಾಗಿಲ್ಲ. ಸೀಲಿಂಗ್ ರೆಂಟ್ ಮತ್ತು ಖಾತೆ ಹೇಗೆ ಮಾಡಬೇಕು ಎಂದು ಕೆಲವು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಸೀಲಿಂಗ್ ವಿಷಯದಲ್ಲಿ ಕಮಿಟಿಯವರು ಬಹಳ ಉಪಕಾರ ಮಾಡಿದ್ದಾರೆ. ಇದೇ ಮೈಸೂರು ಸ್ಟೇಟಿನ ಭಾಗದಲ್ಲಿ ಒಂದು ಸೀಲಿಂಗ್ ಇತ್ತು. ಲ್ಯಾಂಡ್ ರಿಫಾರ್ಮ್ ಆದನಂತರ ಏನು ಕುಂದುಕೊರತೆಗಳು ಬಂದಿವೆಯೋ ಅವನ್ನು ರೆಕ್ಟಿಫೈ ಮಾಡುವುದಕ್ಕೆ ಅವಶ್ಯಕತೆ ಇದೆ. ಇವತ್ತು ಅಲ್ಲಿ ಸೀಲಿಂಗ್ ಇದೆ. ಯಾವ ದೃಷ್ಟಿಯಿಂದ ಸರ್ಕಾರದವರು ಹಾಕಬೇಕಾಗಿತ್ತೋ, ಆ ದೃಷ್ಟಿಯಿಂದ ಹಾಕಿಲ್ಲ. ಕಮಿಟಿಯವರು ಸ್ವಲ್ಪ ಆ ಭಾಗಕ್ಕೆ ಹೋಗಿದ್ದರೆ ಬೆಳಕು ಸಿಕ್ಕುತ್ತಿತ್ತು. ಇವತ್ತು ಅಲ್ಲಿ ಸೀಲಿಂಗ್ ಇದೆ. ಡಿಕ್ಲರೇಷನ್ ಆಗಿದೆ. ಟೆನೆಂಟ್ಸ್ ಓನರ್‌ಷಿಪ್ ರೈಟ್ ಡಿಕ್ಲೇರ್ ಮಾಡಿದ್ದಾರೆ. ಆ ಭಾಗಕ್ಕೆ ಹೋಗಿದ್ದರೆ ಈ ಕಮಿಟಿಯವರಿಗೆ ಬೆಳಕು ಸಿಕ್ಕುತ್ತಿತ್ತು. ದುರ್ದೈವವಶಾತ್ ಆ ಬೆಳಕು ಅವರಿಗೆ ಸಿಕ್ಕಿಲ್ಲ. ಗುಲ್ಬರ್ಗ ಡಿಸ್ಟ್ರಿಕ್ಟಿಗೆ ಹೋಗಿದ್ದರೆ ಅಲ್ಲಿ ಹೇಗೆ ರೆಕಾರ್ಡ್ ತಯಾರು ಮಾಡಿ ಸರ್ಟಿಫಿಕೇಟ್ ತಯಾರು ಮಾಡಿ ಆಫೀಸಿನಲ್ಲಿ ಇಟ್ಟಿದ್ದಾರೆ, ಎಷ್ಟು ಟೆನೆಂಟ್ಸ್‌ಗಳ ಅಪ್ಲಿಕೇಷನ್ಸ್ ಇವೆ, ಎಷ್ಟು ಜನರಿಗೆ ಈ ಟೆನೆನ್ಸಿ ಬಿಡಿಸಿದ್ದಾರೆ ಎನ್ನುವ ಪ್ರತಿಯೊಂದು ವಿಷಯವನ್ನೂ ತಿಳಿಯುವುದಕ್ಕೆ ಸಾಧ್ಯವಾಗುತ್ತಿತ್ತು. ಹಿಂದೆ ಹೈದರಾಬಾದ್ ಸರ್ಕಾರದ ಭಾಗವಾಗಿದ್ದು, ಯಾದಗಿರಿ ಡಿವಿಜನ್‌ನಲ್ಲಿ ಟೆನೆನ್ಸಿ ಆಕ್ಟ್ ಪ್ರಕಾರ ಡಿಕ್ಲರೇಷನ್ ಆಗಿದೆ. ಸಮಿತಿಯವರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗಿಲ್ಲ. ಆ ಭಾಗದಲ್ಲಿ ಹಿಂದೆ ಇದ್ದ ಹೈದರಾಬಾದು ಗೌರ್ನಮೆಂಟ್ ಆ ಕಾಲಕ್ಕೆ ಎಷ್ಟು ಸೀಲಿಂಗ್ ಇರಬೇಕು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. 800 ರೂಪಾಯಿ ಖರ್ಚು ಸಲುವಾಗಿ ಇಟ್ಟಿದ್ದಾರೆ. 800 ರೂಪಾಯಿ ಖರ್ಚು ಬರುತ್ತದೆ ಎಂದಲ್ಲ. ಸ್ವಂತ ಲೇಬರ್ ಎಷ್ಟು ಆಗುತ್ತದೆ ಎಂದು ತಿಳಿದುಕೊಂಡು ಹಾಗೆ ಮಾಡಿದ್ದಾರೆ. 400 ರೂಪಾಯಿ ಇತರ ಖರ್ಚು ಹಾಕಿ ಒಟ್ಟಿಗೆ 1,200 ರೂಪಾಯಿ actual ಆಗಿ ಒಬ್ಬ ಟೆನೆಂಟಿಗೆ ಫ್ಯಾಮಿಲಿ ಹೋಲ್ಡಿಂಗಿಗೆ ಇನ್‌ಕಮ್ ಆಗುತ್ತದೆ. ಹೀಗೆ 1,200 ರೂಪಾಯಿ ಗ್ರಾಸ್ ಸೀಲಿಂಗ್ ಇರಬೇಕು ಎಂದು ಮಾಡಿದ್ದಾರೆ. ಹೈದರಾಬಾದಿನಲ್ಲಿ ಇದು ಡಿಸ್‌ಕಷನ್ ಆಯಿತು. ಪ್ಲಾನಿಂಗ್ ಕಮಿಷನ್ನಿಗೆ ಹೋಯಿತು, ಪ್ಲಾನಿಂಗ್ ಕಮಿಷನ್ ಮೆಂಬರ್ಸ್ ಅಲ್ಲಿಗೆ ಬಂದರು. ನಾವು ಕಾಂಗ್ರೆಸ್ ಪಾರ್ಟಿಯಲ್ಲಿ ವಿಚಾರಮಾಡಿ ಒಂದು ತೀರ್ಮಾನಕ್ಕೆ ಬಂದೆವು. ಒಂದು ಫ್ಯಾಮಿಲಿಗೆ 1,600 ರೂಪಾಯಿ ಗ್ರಾಸ್ ಇನ್‌ಕಂ ಮತ್ತು ಅದರ ಅರ್ಧ ಎಂದರೆ 800 ರೂಪಾಯಿ ನೆಟ್ ಇನ್‌ಕಂ ಇರಬೇಕೆಂದು ಮಾಡಿದ್ದೇವೆ. ಆದರೆ ಈ ಸಮಿತಿಯವರು ಕೆಲವು ಕಡೆ 2,400 ಮತ್ತು 3,600 ಸಹ ಇಟ್ಟಿದ್ದಾರೆ. ಆದ್ದರಿಂದ ಸೀಲಿಂಗ್ ಹಾಕುವಾಗ 3,600 ರೂಪಾಯಿ ಒಂದು ಫ್ಯಾಮಿಲಿಗೆ ಬೇಕು ಎಂದು ಹೇಳುತ್ತಾರೆ. 3,600 ರೂಪಾಯಿ ಕೊಟ್ಟರೆ ಎಷ್ಟು ಸೀಲಿಂಗ್ ಆಗುತ್ತದೆ? ಪ್ರಸೆಂಟ್ ಲ್ಯಾಂಡ್‌ಲಾರ್ಡ್ಸ್ ಡಿಸ್ಟರ್ಬ್ ಮಾಡಬೇಕಾದರೆ ನಾಲ್ಕೂವರೆ ಟೈಮ್ಸ್ ಸೀಲಿಂಗ್ ಬೇಕು ಎಂದು ಹೇಳಿದ್ದಾರೆ. ಎಂದರೆ 16,200 ರೂಪಾಯಿಗಳು ಗ್ರಾಸ್ ಇನ್‌ಕಂ ಒಂದು ವರ್ಷದಲ್ಲಿ ಆಗುತ್ತದೆ. ಐದು ಮಂದಿ ಇರುವ ಒಂದು ಫ್ಯಾಮಿಲಿಗೆ ಅಷ್ಟಾದರೆ, ಐದು ಜನಗಳಿಗಿಂತ ಜಾಸ್ತಿ ಇದ್ದರೆ ಅದರ ಡಬ್ಬಲ್ ಸೀಲಿಂಗ್ ಎಂದು ಹೇಳಿದ್ದಾರೆ. 16,200 ರೂಪಾಯಿಗಳಿಗೆ 16,200 ರೂಪಾಯಿಗಳನ್ನು ಸೇರಿಸಿದರೆ 32,400; ಆರು ಮಂದಿ ಇರುವ ಫ್ಯಾಮಿಲಿಗೆ ಒಂದು ವರ್ಷಕ್ಕೆ ನಮ್ಮ ದೇಶದ ಸೀಲಿಂಗ್ 3600 ಇದೆ. 1,200+1,200 ಗ್ರಾಸ್ ಇನ್‌ಕಂ 2,400 ಎಂದು ಹೇಳಿದ್ದಾರೆ. ಅದರ ನಾಲ್ಕೂವರೆ ಟೈಮ್ಸ್ ಎಂದರೆ 10,800 ರೂಪಾಯಿಗಳು ಆಗುತ್ತದೆ. ಫ್ಯಾಮಿಲಿಯಲ್ಲಿ ಆರು ಮಂದಿ ಇದ್ದರೆ 21,600 ರೂಪಾಯಿ ಆಗುತ್ತದೆ. ಈರೀತಿ 21,600 ರೂಪಾಯಿ ಅಥವಾ 32,400 ರೂಪಾಯಿ ಸೀಲಿಂಗ್ ಆದರೆ ಇಷ್ಟು ಉತ್ಪನ್ನ ಆಗತಕ್ಕ ಭೂಮಿಯನ್ನು ಅವರಿಗೆ ನಾವು ಕೊಡಬೇಕಾಗುತ್ತದೆ.

4-30 P.M.

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಒಂದು ಕುಟುಂಬದ ಹಿಡುವಳಿಯನ್ನು ಗೊತ್ತುಮಾಡುವಾಗ 7,200 ರೂಪಾಯಿ ಉತ್ಪತ್ತಿ ಇರಬೇಕೆಂದು ಮಾಡಿದೆ. ಇಷ್ಟು ಉತ್ಪತ್ತಿಯ ಪ್ರಮಾಣಕ್ಕೆ 45 ಎಕರೆ ನೀರಾವರಿ ಭೂಮಿ, 140 ಎಕರೆ ನೀರಾವರಿ ಇಲ್ಲದ ಭೂಮಿ ಸಮಾನವಾದುದು ಎಂದು ಗೊತ್ತುಮಾಡಿದ್ದಾರೆ. ಇದು ಹೈದ್ರಾಬಾದ್ ಭೂ ಸಾಗುವಳಿ ಕಾನೂನಿನ 38ನೇ ಸೆಕ್ಷನ್ನಿನಲ್ಲಿ ಇದೆ. ಈ ಕಾನೂನು ಗುಲ್‌ಬರ್ಗಾದ ಯಾದಗಿರಿ ಡಿವಿಜನ್ನಿನಲ್ಲಿ ಜಾರಿಯಲ್ಲಿ ಇದೆ. ಆದರೆ ಜತ್ತಿ ಸಮಿತಿಯವರು ಹಿಡುವಳಿಯ ಪ್ರಮಾಣವನ್ನು ಏರಿಸಿದ್ದಾರೆ. ಜತ್ತಿ ಸಮಿತಿ ವರದಿಯ ಶಿಫಾರಸುಗಳಿಗೆ ಅನುಸಾರವಾಗಿ ಮಾಡುವುದಾದರೆ ಹೊಸದಾಗಿ ಒಂದು ಎಕರೆ ಭೂಮಿಯನ್ನು ಸಹ ಹಂಚುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲು ಎಷ್ಟು ಲಕ್ಷ ಎಕರೆ ಭೂಮಿಯನ್ನು ಹಂಚಬೇಕಾಗುವುದು ಎಂಬುದನ್ನು ಹೇಳಬೇಕು. ಭೂಸುಧಾರಣೆಯ ಕಾನೂನುಗಳಿಂದ ದೇಶಕ್ಕೆ ಎಷ್ಟು ಉಪಯೋಗವಾಗಬೇಕೋ ಅಷ್ಟು ಉಪಯೋಗವಾಗುತ್ತಿಲ್ಲ. ಹೈದ್ರಾಬಾದ್ ಪ್ರದೇಶದಲ್ಲಿ ಭೂ ಸುಧಾರಣೆ ಕಾನೂನಿನಲ್ಲಿ ಎಷ್ಟು ಹಿಡುವಳಿಯ ಪ್ರಮಾಣವನ್ನು ಗೊತ್ತು ಮಾಡಿದ್ದಾರೆಯೋ ಅಷ್ಟನ್ನು ಒಪ್ಪಿಕೊಳ್ಳಬೇಕೆಂದು ನಾನು ಸೂಚಿಸ ಬಯಸುತ್ತೇನೆ. ಹೈದ್ರಾಬಾದ್ ಕರ್ನಾಟಕದ ಪ್ರದೇಶದಲ್ಲಿ ಭೂ ಸುಧಾರಣೆಯ ಕಾನೂನು ಯಾವ ರೀತಿಯಾಗಿ ಜಾರಿಯಲ್ಲಿ ಇದೆಯೋ ಅದೇ ರೀತಿಯಾಗಿ ಉಳಿದ ಭಾಗದಲ್ಲಿ ಜಾರಿಗೆ ತರಬೇಕೆಂದು ನನ್ನ ಪ್ರಾರ್ಥನೆ ಇದೆ.

ಇನ್ನು ಪರಿಹಾರದ ವಿಷಯ. ಭೂ ಒಡೆಯರಿಗೆ ಪರಿಹಾರದ ಹಣ ಕೊಡುವ ಜವಾಬ್ದಾರಿಯನ್ನು ಸರಕಾರ ವಹಿಸಿಕೊಳ್ಳಬೇಕೆಂದು ಹೇಳಲಾಗಿದೆ. ಲಕ್ಷಾಂತರ ಎಕರೆ ಭೂಮಿ ಇರುವುದರಿಂದ ಕೋಟ್ಯಾವಧಿ ರೂಪಾಯಿಗಳ ಭಾರ ಸರಕಾರದ ಮೇಲೆ ಬೀಳುತ್ತದೆ. ಆದರೆ ಈ ಜವಾಬ್ದಾರಿಯನ್ನು ಸರಕಾರ ವಹಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಭೂ ಮಾಲಕರಿಗೆ ರೈತನು ನೇರವಾಗಿ ಎಂಟು ಹತ್ತು ವರ್ಷಗಳಲ್ಲಿ ಹಣವನ್ನು ಕೊಡಬಹುದು. ಉಳಿದ ಬೇರೆ ರೀತಿಯಿಂದ ಈ ವ್ಯವಹಾರದಲ್ಲಿ ಸರಕಾರ ಬೇಕಾದರೆ ಸಹಾಯ ಮಾಡಬಹುದು. ಸದ್ಯಕ್ಕೆ ಖೋತಾ ಬಡ್ಜೆಟ್ ಇರುವ ಪರಿಸ್ಥಿತಿಯಲ್ಲಿ ಸರಕಾರ ಜವಾಬ್ದಾರಿಯನ್ನು ತೆಗೆದು

ಕೊಳ್ಳುವುದು ಸಮಂಜಸವಾದುದಲ್ಲವೆಂದು ನನ್ನ ಅಭಿಪ್ರಾಯ. ಬೊಂಬಾಯಿ ಶಾಸನವನ್ನು ಆಧಾರವಾಗಿ ಇಟ್ಟುಕೊಂಡು ಭೂ ಸುಧಾರಣೆಯ ಕಾನೂನು ಮಾಡಬೇಕೆಂದು ನಾನು ಸೂಚಿಸುತ್ತೇನೆ.

ನಾನು ಕಳಕಳಿಯಿಂದ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ. ಅವರು ಸರಿಯಾಗಿ ವಿಚಾರ ಮಾಡಬೇಕು. ಈ ರೀತಿ ಬಿಡುವುದರಿಂದ ಒಂದು ತಪ್ಪು ತಿಳಿವಳಿಕೆ ಇವತ್ತು ಜನರಲ್ಲಿ ಬರುತ್ತಿದೆ. ಇವತ್ತು ಕಾಂಗ್ರೆಸ್ ಸರ್ಕಾರ ಇದೆ. ಕಾಂಗ್ರೆಸ್ ಸಂಸ್ಥೆಗೆ ವಿರೋಧ ಬೆಳೆಸುವ ರೀತಿಯಲ್ಲಿ ಲ್ಯಾಂಡ್ ರಿಫಾರಮ್ಸ್ ಆಗಿದೆ. ಮೈಸೂರು ಸ್ಟೇಟ್ ರೀಆಕ್ಷನರಿ ಸ್ಟೇಟ್ ಇದೆ. ಅದು ಬಾರದೆ ಪ್ರೋಗ್ರೆಸಿವ್ ಲೆಜಿಸ್ಲೇಷನ್ ಹೇಗೆ ಆಗುತ್ತದೆ? ಬಡಜನಗಳಿಗೆ ತೊಂದರೆಯಾಗುವ ಹಾಗೆ ಈ ಕಾಯಿದೆಗಳನ್ನು ಲ್ಯಾಂಡ್‌ಲಾರ್ಡ್ ಕೈಯಲ್ಲಿಡುತ್ತಿದ್ದಾರೆಂದು ತಪ್ಪು ಕಲ್ಪನೆ ಇದೆ. ಉತ್ತರ ಕರ್ಣಾಟಕದಲ್ಲಿ ಏಪ್ರಿಲ್ 1ನೇ ತಾರೀಖಿನಿಂದ ಓನರ್‌ಷಿಪ್ ಹೋಗಿವೆ. ಇವತ್ತು ಕಾಂಗ್ರೆಸ್ಸಿನವರು ಆ ಓನರ್‌ಷಿಪ್ಪನ್ನು ಕಸಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಂತಹ ಅವಕಾಶವನ್ನು ಕಲ್ಪಿಸಿಕೊಡಲು ಹೊರಟಿದ್ದಾರೆ ಎನ್ನುವ ತಪ್ಪು ತಿಳಿವಳಿಕೆ, ತಪ್ಪು ಅಭಿಪ್ರಾಯವಿದೆಯೆಂದು ಹೇಳಬೇಕು. ನಮ್ಮ ಪಾರ್ಟಿಯ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳಬಲ್ಲೆ. ಈ ಲೆಜಿಸ್ಲೇಷನ್ ವಿಷಯದಲ್ಲಿ ಅವರಿಗಿಂತ ಯಾರೂ ಕಡಿಮೆಯಾಗಿ ಈ ಭಾಗದಲ್ಲಿ ಇಲ್ಲ. ನಾವು ಪರೀಕ್ಷೆ ಮಾಡುವ ಕಾಲವಿದು. ನಾವು ನಿಜವಾಗಿಯೂ ಇವತ್ತು ನಮ್ಮನ್ನು ತೋರಿಸಿ ಕೊಡುವ ಕಾಲವಿದು. ಯಾವುದೇ ಒಂದು ದೃಷ್ಟಿಯಿಂದ, ದೇಶ ಯಾವ ರೀತಿ ಹೋರಾಡಿದೆ, ಇವತ್ತು ದೇಶದ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ನೋಡಿ ಪ್ರಜಾ ಸೋಷಿಯಲಿಸ್ಟ್ ಪಕ್ಷದವರು, ಕಮ್ಯೂನಿಸ್ಟ್ ಪಕ್ಷದವರು, ರಾಷ್ಟ್ರಪತಿಯವರು, ಪ್ರೈಮ್ ಮಿನಿಸ್ಟರ್ ಅವರು ಒಂದು ಕಡೆ ಕುಳಿತು ಒಂದು ಅಭಿಪ್ರಾಯಕ್ಕೆ ಬರುತ್ತಿದ್ದಾರೆ. ಅದಕ್ಕನುಸಾರವಾಗಿ ನಾವೂ ಸಹ ನಮ್ಮ ದೇಶದಲ್ಲಿ ನಮ್ಮ ಮೇಲೆ ಏನೇನು ಜವಾಬ್ದಾರಿ ಇದೆಯೋ ಅಷ್ಟನ್ನು ತೀವ್ರವಾಗಿ ಯೋಚಿಸಿ ತೀವ್ರತೆಯಿಂದ ಲೆಜಿಸ್ಲೇಷನ್ ಮಾಡಬೇಕು. ಅದನ್ನು ಸರ್ಕಾರದವರು ಆ ದೃಷ್ಟಿಯಿಂದ ಇಂಪ್ಲಿಮೆಂಟ್ ಮಾಡಬೇಕು. ಟಿಲ್ಲರ್ಸಿಗೆ ಬೊಂಬಾಯಿಯಲ್ಲಿನ ಆಕ್ಟಿನಲ್ಲಿರುವಂತೆ ಇಲ್ಲಿ ಎಲ್ಲ ಕಡೆಗಳಲ್ಲೂ ಜಾರಿಗೆ ತರುವಂತೆ ಏರ್ಪಾಡು ಮಾಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಪಿ. ಪಾಟೀಲ್.—ಈ ಪ್ರಶ್ನೆಯ ಬಗ್ಗೆ ಬೊಂಬಾಯಿ ಆಕ್ಟಿನೊಳಗೆ ನಮಗಿಂತಲೂ ಪ್ರೋಗ್ರೆಸ್ ಇದೆಯೆಂದು ನಾನು ಹೇಳುವುದಕ್ಕೆ ಇಷ್ಟವುಳ್ಳವನಾಗಿದ್ದೇನೆ. ಆ ಮಾತನ್ನು ಇಲ್ಲಿ ಈಗ ತಿಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಶ್ರೀ ವಿನೋಬಾ ಭಾವೆಯವರು ಇಡೀ ಹಿಂದೂಸ್ಥಾನದಲ್ಲಿ ಭೂ ಸಮಸ್ಯೆಯನ್ನು ಎಷ್ಟರಮಟ್ಟಿಗೆ ಪರಿಹಾರ ಮಾಡುತ್ತಿದ್ದಾರೆಂಬುದನ್ನು ತಾವು ಸ್ವಲ್ಪ ಹೇಳುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ನಾನು ಹೇಳುವುದು ಏನು? ಆ ವಿಷಯ ಎಲ್ಲರಿಗೂ ಗೊತ್ತಿದೆ. ನಾನು ಮೊದಲೇ ತಮಗೆ ಅರಿಕೆ ಮಾಡಿದ್ದೇನೆ. ಹೈದರಾಬಾದಿನಲ್ಲಿ ಸೀಲಿಂಗ್ ಉಂಟು, ಬೊಂಬಾಯಿ ಏರಿಯಾದಲ್ಲಿ ಪರ್ಸನಲ್ ಕಲ್ಟಿವೇಷನ್ನಿಗೆ ಸೀಲಿಂಗ್ ಇಲ್ಲ. ಬೊಂಬಾಯಿನಲ್ಲಿ ನಮಗಿಂತಲೂ ಚೆನ್ನಾಗಿದೆ, ಅಲ್ಲಿ ಪ್ರೋಗ್ರೆಸ್ ಆಗಿದೆ. ತಮಗೆಲ್ಲರಿಗೂ ಯಾವುದು ಪ್ರೋಗ್ರೆಸ್ ಲೆಜಿಸ್ಲೇಷನ್ ಎಂದು ಅನ್ನಿಸುತ್ತದೋ ಅದನ್ನು ಮಾಡಬೇಕು ಎಂದು ತಮ್ಮೆಲ್ಲರನ್ನೂ ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಎ. ಆರ್. ಪಂಚಗವಿ (ಗೋಕಾಕ್-II).—ಅಧ್ಯಕ್ಷ ಮಹಾಶಯರೇ, ಇವತ್ತು ಒಂದು ಮಹತ್ವದ ವಿಷಯವನ್ನು ವಿಚಾರಮಾಡುವುದಕ್ಕೆ ನಾವು ಕುಳಿತಿದ್ದೇವೆ. ಮೈಸೂರು ರಾಜ್ಯವು ಹೊಸದಾಗಿ ಸ್ಥಾಪನೆಯಾದಮೇಲೆ ಐದು ಭಾಗಗಳಿಂದ ಬಂದ ಎಲ್ಲಾ ಜನಗಳಿಗೂ ಅನ್ವಯವಾಗುವಂತೆ ಭೂಸುಧಾರಣಾ ಕಾರ್ಯವನ್ನು ಆದಷ್ಟು ತ್ವರಿತವಾಗಿ ಮಾಡಬೇಕು. ನಮ್ಮ ಹೊಸರಾಜ್ಯದಲ್ಲಿ ಆದಷ್ಟುಬೇಗ ತೀವ್ರದೃಷ್ಟಿಯಿಂದ ಜತ್ತಿ ಸಮಿತಿಯನ್ನು ಸರ್ಕಾರದವರು ನೇಮಿಸಿದರು. ಅವರ ವರದಿ ನಮ್ಮ ಮುಂದಿದೆ. ಈ ಸಮಿತಿಯ ಅಧ್ಯಕ್ಷರು ಮುಂಬೈ ರಾಜ್ಯದಿಂದ ಬಂದವರು. ಮುಂಬೈ ರಾಜ್ಯದಲ್ಲಿ ಅತ್ಯಂತ ಪ್ರೋಗ್ರೆಸ್ಸಿವ್ ಲೆಜಿಸ್ಲೇಷನ್ ಇದೆಯೆಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಈಗ ಅವರು ಕೊಟ್ಟವರದಿಯನ್ನು ನೋಡಿದರೆ ನನಗೆ ಅತ್ಯಂತ ವಿಷಾದವಾಗಿದೆ. ಮೂಲಭೂತವಾಗಿ ಕೆಲವು ವಿಚಾರಗಳಲ್ಲಿ ಮೂಲಭೂತವಾದ ತತ್ವಗಳನ್ನು ತಪ್ಪಾಗಿ ಈ ಸಮಿತಿ ತಿಳಿದುಕೊಂಡಿದೆ. ಮೊದಲನೆಯದಾಗಿ ಸೀಲಿಂಗ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸೀಲಿಂಗ್ ಬಗ್ಗೆ ವಿಚಾರ ಮಾಡುವಾಗ ಜತ್ತಿ ಸಮಿತಿಯವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಉತ್ಪತ್ತಿಯ ಅರ್ಧದಷ್ಟು ಖರ್ಚು ತರಿ ಸಾಗುವಳಿಗೆ ಬೇಕಾಗುತ್ತದೆ ಮತ್ತು ತರಿ ಬಿಟ್ಟು ಡ್ರೈಲ್ಯಾಂಡ್ಸ್‌ಗೆ $66\frac{3}{4}$ರಷ್ಟು ಖರ್ಚಾಗುತ್ತಿದೆ ಎನ್ನುವ ಆಧಾರವನ್ನು ಹೇಳಿದ್ದಾರೆ. ಇದನ್ನು ಎಲ್ಲಿಂದ ತಂದರೋ ತಿಳಿಯದು. ಯಾವೊಬ್ಬ ಅನುಭವವುಳ್ಳ ಒಕ್ಕಲಿಗರೂ ಇದನ್ನು ಒಪ್ಪುವುದಿಲ್ಲ. ಸಾಧಾರಣವಾಗಿ ಮಳೆ ಕಡಿಮೆ ಇರುವ ಭಾಗದಲ್ಲಿ ಗೊಬ್ಬರ ಹಾಕುವುದು ಕಡಿಮೆ, ಎರಡು ಬೆಳೆಯಾದರೆ ಬಹಳ ಕಷ್ಟವಾಗುತ್ತದೆ. ಈ ಪ್ರಕಾರ ಬೇಸಾಯಮಾಡುವವರಲ್ಲಿ ತರೀ ಬೆಳೆಗೆ ಖರ್ಚು ಎಷ್ಟು ಬೀಳುತ್ತದೆ, ಬಾಗಾಯಿತು ಜಮೀನು ಮಾಡುವುದರಲ್ಲಿ ಖರ್ಚು ಎಷ್ಟಾಗುತ್ತದೆಂಬುದನ್ನು ಒಕ್ಕಲಿಗರು ಹೇಳಬಹುದು. ಒಕ್ಕಲಿಗರ ಮನೆಯಲ್ಲಿ ಒಬ್ಬ ಚಿಕ್ಕಹುಡುಗ ಹೇಳಬಹುದು. ಸಾಧಾರಣವಾಗಿ ನಮ್ಮ ಅನುಭವದ ಪ್ರಕಾರ ಬಾಗಾಯಿತು ಜಮೀನಿನಲ್ಲಿ ಅರ್ಧದಷ್ಟು ಖರ್ಚು ಬರುತ್ತದೆ ಒಣತರೀಯಲ್ಲಿ ಅಷ್ಟು ಖರ್ಚು ಯಾವಾಗಲೂ ಬರುವುದಿಲ್ಲ. ಆ ಮಾತನ್ನು ನಾವು ಮರೆಯುವ ಹಾಗಿಲ್ಲ. ಅಲ್ಲಿ ಖರ್ಚು ಕಾಲುವೀಸ, ಉಳಿತಾಯ ಮುಕ್ಕಾಲುವೀಸ. ಇದನ್ನು ಬಹಳ ದೂರ ನಾವು ಹೋಗಿ ವಿಚಾರ ಮಾಡಿದರೆ ಇದಕ್ಕೆ ಮೂಲಭೂತವಾದ ಮತ್ತು ಆಧಾರ ಭೂತವಾದ ಮಾತುಗಳು ಇವೆ. ಇದು ಅನುಭವದಿಂದ ಹೇಳಲು ಸಾಧ್ಯ. ಪ್ರತ್ಯಕ್ಷವಾಗಿ ಒಕ್ಕಲಿಗರ ಮಾತುಗಳಲ್ಲಿನ ಮೂಲಭೂತವಾದ ತತ್ವಗಳನ್ನು ತಿಳಿದು ನೋಡಬೇಕು. ಇದನ್ನೇ ಆಧಾರವಾಗಿಟ್ಟುಕೊಂಡು ಮುಂದಿನ ಹೆಜ್ಜೆಯನ್ನಿಟ್ಟಿದಾರೆ. ಒಕ್ಕಲುತನದ ಖರ್ಚು ಬಾಗಾಯಿತು ಜಮೀನಿನಲ್ಲಿ ಅರ್ಧದಷ್ಟಾದರೆ ನಿವ್ವಳ ಉತ್ಪನ್ನ ಸಾಧಾರಣವಾಗಿ 1,200 ರೂಪಾಯಿಗಳು; ಅದು ಒಂದು ಕುಟುಂಬಕ್ಕೆ ಪ್ಯಾಮಿಲಿ ಹೋಲ್ಡಿಂಗ್ಸ್ ಎಂದು ತಿಳಿಯತಕ್ಕದ್ದು. ಅಷ್ಟು ಒಂದು ಕುಟುಂಬಕ್ಕೆ ಸಾಧಾರಣವಾಗಿ ಜಮೀನು ಉಳಿಯತಕ್ಕದ್ದು ಎಂದು ಹೇಳಿ, ಪರಮಾವಧಿಯನ್ನು ಎರಡು ವಿಧವಾಗಿಟ್ಟಿದಾರೆ. ಯಾರು ಒಕ್ಕಲುತನ ಭೂಮಿಯನ್ನು ಸಾಗುಮಾಡುತ್ತಾರೋ, ಅಂತಹ ರೈತರಿಗೆ ವ್ಯವಸಾಯ ದೃಷ್ಟಿಯಿಂದ ಒಂದು ಸೀಲಿಂಗನ್ನು ಇಟ್ಟಿದ್ದಾರೆ. ಯಾರ ಮೊದಲಿನಿಂದಲೂ ಒಕ್ಕಲು

(ಶ್ರೀ ಎ. ಆರ್. ಪಂಚಗವಿ)

ತನ ಮಾಡುತ್ತಿದ್ದಾರೋ, ಅವರಿಗೆ 4ಕ್ಕೆಯಷ್ಟು ಸೀಲಿಂಗ್ ಇಡಬೇಕೆಂಬ ಭೇದಭಾವನೆಯನ್ನು ಇಟ್ಟಿದ್ದಾರೆ. ಆ ಭೇದಭಾವನೆ ನನ್ನ ದೃಷ್ಟಿಯಿಂದ ಯೋಗ್ಯವಲ್ಲ. ಆದರೆ ಮೊದಲಿನಿಂದಲೂ ಮನೆಯವರೇ ಬೇಸಾಯ ಮಾಡುತ್ತಿದ್ದರೆ ಅವರಿಗೆ ಒಂದು ತರಹ ಇಟ್ಟರೆ ಏನೂ ಅಡ್ಡಿ ಇಲ್ಲ. ಇದರಲ್ಲಿ ಕೆಲವು ಮೂಲಭೂತವಾದ ಮಾತುಗಳನ್ನು ಹೇಳುವಾಗ ಇದರ ಬಗ್ಗೆ ಲೆಖ್ಖಹಾಕಿ ಹೈದರಾಬಾದ್‌ನವರ ಪರಿಸ್ಥಿತಿ ಏನಾಗಬಹುದೆಂದು ಶ್ರೀ ಕೊಲ್ಲೂರು ಮಲ್ಲಪ್ಪನವರು ಹೇಳಿದ್ದಾರೆ. ಇದರಿಂದ ಒಕ್ಕಲಿಗರಿಗೆ ಮತ್ತು ಪ್ರತ್ಯಕ್ಷ ಬೇಸಾಯಗಾರರಿಗೆ ಒಂದು ಎಕರೆ ಭೂಮಿಯೂ ಅಲ್ಲಿ ದೊರೆಯುವ ಹಾಗಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಆ ಮಾತನ್ನು ಅತ್ಯಂತ ದುಃಖದಿಂದ ಹೇಳಿದ್ದಾರೆ. ಹೀಗಾಗಿ ಮೊದಲಿನಿಂದಲೂ ಯಾರು ಸಾಗು ಮಾಡುತ್ತಿದ್ದಾರೋ ಅವರಿಗೆ ಭೂಮಿ ಸಿಕ್ಕುವುದು ಕಷ್ಟವಿದೆಯೆಂದು ದುಃಖದಿಂದ ಹೇಳಬೇಕಾಗಿದೆ. ಸಾಧಾರಣವಾಗಿ ಈಗ ತಾವು ಒಂದು ಸಂಸಾರಕ್ಕೆ ಬಿಡತಕ್ಕ ಜಮೀನಿನ ವಾರ್ಷಿಕ ಉತ್ಪನ್ನ 1,200 ರೂಪಾಯಿಗಿಂತ ಹೆಚ್ಚಾಗಿರಬಾರದೆಂದು ತಿಳಿಸಲಾಗಿದೆ. ಹೀಗೆ ಹೇಳುತ್ತಾ ಒಟ್ಟು ಬದುಕಿನಲ್ಲಿ ಒಣ ಬೇಸಾಯಕ್ಕೆ ಆದರೆ 3,600 ರೂಪಾಯಿಗಳಿರಬಹುದೆಂದೂ, ಅಷ್ಯೂರ್ಡ್ ಇರಿಗೇಷನ್ನಿನ ಸಂಬಂಧದಲ್ಲಿ ವಾರ್ಷಿಕ ಒಟ್ಟು ಉತ್ಪನ್ನ 2,400 ರೂಪಾಯಿಗಳಿರಬಹುದೆಂದೂ ತಿಳಿಸಿದ್ದಾರೆ. ಈರೀತಿಯ ಉತ್ಪನ್ನ ಬರಬೇಕಾದರೆ ಹೊಸದಾಗಿ ವ್ಯವಸಾಯಕ್ಕೆ ಪ್ರಾರಂಭಿಸುವ ಜಮೀನಿನ ವಿಸ್ತೀರ್ಣ ಈ ಪರಿಮಿತಿಯ ಮೂರುಪಟ್ಟು ಮತ್ತು ನಾಲ್ಕುವರೆ ಪಟ್ಟಿನಾದರೂ ಇರಬೇಕೆಂದು ಭೂಮಿ ಸೀಲಿಂಗನ್ನು ನಿರ್ಧರಿಸಬೇಕಾಗುವುದು. ಇದಾದರೂ ಕೇವಲ ಐದು ಜನರಿರುವಂಥ ಒಂದು ಸಂಸಾರಕ್ಕೆ ಅನ್ವಯಿಸುವ ವಿಷಯ. ಒಂದು ವೇಳೆ ಆರು ಜನರಿರುವ ಸಂಸಾರಕ್ಕಾದರೆ ಆಗ ಇದರ ಎರಡು ಪಟ್ಟು ಜಮೀನನ್ನು ಬಿಟ್ಟುಕೊಡಬೇಕಾಗುತ್ತದೆ. ಐದು ಜನರಿರುವ ಒಂದು ಕುಟುಂಬದ ವಾರ್ಷಿಕ ಉತ್ಪನ್ನ 3,600 ರೂಪಾಯಿಗಳಿರಬೇಕೆಂದು ಹೇಳಿರುವಾಗ ಈ ಆರು ಜನಗಳಿರುವ ಕುಟುಂಬದ ಉತ್ಪನ್ನ 33,000 ರೂಪಾಯಿಗಳಿಗೆ ಏರುತ್ತದೆ. ಆಗ ಇಷ್ಟು ಉತ್ಪನ್ನ ಬರಲು ಅವರಿಗೆಷ್ಟು ಜಮೀನು ಬಿಡಬೇಕಾಗುತ್ತದೆ? ಹೀಗಾದರೆ ಜಮೀನಿಲ್ಲದ ವ್ಯವಸಾಯಗಾರರಿಗೆ ಉಳಲು ಜಮೀನು ದೊರೆಯಲು ಸಾಧ್ಯವಿದೆಯೇ?

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚೆನ್ನಪಟ್ಟಣ).—33,000 ರೂಪಾಯಿಗಳೆಂದು ತಾವು ಹೇಗೆ ಲೆಕ್ಕ ಹಾಕಿ ಹೇಳಿದಿರಿ?

ಶ್ರೀ ಎ. ಆರ್. ಪಂಚಗವಿ.—ನನ್ನ ಅಂದಾಜಿನ ಪ್ರಕಾರ ಅಷ್ಟಾಗುತ್ತದೆ. ಒಂದು ಫ್ಯಾಮಿಲಿ ಹೋಲ್ಡಿಂಗಿನ ಒಟ್ಟು ವಾರ್ಷಿಕ ಉತ್ಪನ್ನ 3,600 ರೂಪಾಯಿಗಳಾದರೂ ಇರಬೇಕೆಂದು ಹೇಳಿದ್ದಾರೆ. ಈ ಮೊಬಲಗಿನಲ್ಲಿ ಇತರ ಎಲ್ಲ ಖರ್ಚುಗಳು ಕಳೆದು ಉಳಿತಕ್ಕವರಿಗೆ 1,200 ರೂಪಾಯಿಗಳು ಉತ್ಪನ್ನ ಬರಬೇಕೆಂದು ಹೇಳಿದ್ದಾರೆ. ಅಂದರೆ ಒಟ್ಟು ಉತ್ಪತ್ತಿಯಲ್ಲಿ ಮೂರನೇ ಎರಡಂಶವನ್ನು ಖರ್ಚುವೆಚ್ಚಗಳಿಗಾಗಿ ಕಳೆದ ನಂತರ ಉಳಿಯುವ ಮೂರನೇ ಒಂದಂಶಕ್ಕೆ 1,200 ರೂಪಾಯಿ ಆಗುತ್ತದೆ. ಅಂತೂ ಜಮೀನಿನಲ್ಲಿ ಒಟ್ಟು 3,600 ರೂಪಾಯಿಗಳ ಉತ್ಪನ್ನ ಕೊಡುವ ಪೀಕು ಬರಬೇಕು. ಹೀಗೆ ಐದು ಜನರಿರುವ ಒಂದು ಸಂಸಾರಕ್ಕೆ ಈಗ ಹೇಳಿರತಕ್ಕ ಸೀಲಿಂಗ್ ಲಿಮಿಟ್ ಪ್ರಕಾರ ಲೆಕ್ಕಾಚಾರ ಹಾಕಿದರೆ ಐದಕಿಂತ ಹೆಚ್ಚು ಮಂದಿ ಇರುವ ಸಂಸಾರಕ್ಕೆ ಇದರ ಒಂಬತ್ತು ಪಟ್ಟು ಜಮೀನನ್ನು ಸೀಲಿಂಗ್‌ಲಿಮಿಟ್‌ನಲ್ಲಿ ಅಡಕಮಾಡಬೇಕಾಗುತ್ತದೆ. ಅಂದರೆ ಆ ಸೀಲಿಂಗ್‌ಲಿಮಿಟ್ಟಿನ ಉತ್ಪನ್ನ 33,000 ರೂಪಾಯಿಗಳಿಗೆ ಬರುತ್ತದೆ. ಅದನ್ನೆ ಕರಾರುವಾಕ್ಕಾಗಿ ಹೇಳುವುದಾದರೆ 32,400 ರೂಪಾಯಿಗಳಾಗುತ್ತದೆ. ಇಷ್ಟು ಪೀಕು ಬರಬೇಕಾದರೆ ಆ ಸಂಸಾರಕ್ಕೆ ಎಷ್ಟು ಜಮೀನು ಬಿಡಬೇಕು? ಹಾಗೆ ಒಂದೊಂದು ಸಂಸಾರಕ್ಕೆ ಅಷ್ಟೊಂದು ಜಮೀನನ್ನು ಬಿಟ್ಟು ಕೊಟ್ಟರೆ ಬಾಕಿ ಉಳಿತಕ್ಕವರಿಗೆ ಇನ್ನು ಜಮೀನೆಲ್ಲಿ ಸಿಕ್ಕುತ್ತದೆ? ಹೀಗಾದರೆ ಯಾರಿಗೂ ಜಮೀನು ಉಳಿಯುವುದೇ ಇಲ್ಲ. ಈಗ ಹಾಲಿ ಇರತಕ್ಕ ಮತ್ತು ಮುಂದಿನ ಅಕ್ವಿಜಿಷನ್ ಆಫ್ ಲ್ಯಾಂಡಿನ ಬಗ್ಗೆ ಸೀಲಿಂಗ್‌ಲಿಮಿಟ್ ಪರಿಮಿತಿಯನ್ನು ಹೇಳುತ್ತಾ ಬೊಂಬಾಯಿ ಪ್ರಾಂತಕ್ಕೆ ಒಣಬೇಸಾಯದ ಬಗ್ಗೆ 48 ಎಕರೆ ಭೂಮಿ ಎಂತಲೂ, ಭಾಗಾಯ್ತು ಜಮೀನಾದರೆ 12 ಎಕರೆ ಇರಬೇಕೆಂತಲೂ ಸೂಚನೆ ಮಾಡಿದ್ದಾರೆ. ಮೊದಲಿನ ಬೊಂಬಾಯಿ ಶಾಸನದಲ್ಲಿ ಈ ಸೀಲಿಂಗ್ ಲಿಮಿಟ್ ಈಗಿನ ಅರ್ಧದಷ್ಟಿತ್ತು. 24 ಎಕರೆಗಳೆಂದು ನಿಗದಿಮಾಡಲಾಗಿತ್ತು. ಹಾಗೆ 24 ಎಕರೆಗಳ ಸೀಲಿಂಗ್ ಲಿಮಿಟ್ ಇದ್ದಾಗಲೇ ಅಲ್ಲಿಯ ಗೇಣಿದಾರರಿಗೆ ಜಮೀನು ಸಿಕ್ಕುವುದು ಬಹಳದುರ್ಲಭವಾಗಿತ್ತು. ಇನ್ನು ಈಗ ಈ ಸೀಲಿಂಗ್ ಲಿಮಿಟ್‌ನ್ನು ಒಂದಕ್ಕೆ ಎರಡರಷ್ಟು ಹೆಚ್ಚಿಸಿದಾಗ ಆ ಜನರಿಗೆ ಜಮೀನು ಸಿಕ್ಕಲು ಸಾಧ್ಯವೇ ಇಲ್ಲ. ಹೋಗಲಿ ಇಂಥ ಒಂದು ಪ್ರಾವಿಜನ್ನನ್ನು ಈಗ ಯಾರ ಸಂಬಂಧವಾಗಿ ಮಾಡಿದ್ದಾರೆ ಈ ದಿವಸ ಅನ್ನುವುದನ್ನು ನೋಡಿದರೆ ಯಾರು ಹೆಚ್ಚು ಒಕ್ಕಲುಗಳನಿಟ್ಟುಕೊಂಡಿದ್ದಾರೋ ಅಂಥವರಿಗೆ ಮಾತ್ರ ಅನ್ವಯಿಸುತ್ತದೆಂದು ಹೇಳಿದ್ದರೆ ಅದೊಂದು ಬಹಳ ಸಂತೋಷದ ಸಂಗತಿ ಆಗುತ್ತಿತ್ತು. ಈ ದಿವಸ ಮುಂಬೈ ಪ್ರಾಂತ್ಯದಲ್ಲಿ ಇರತಕ್ಕ ಜಮೀನನ್ನೆಲ್ಲಾ ಅಲ್ಲಿಯ ಜಮೀನು ಮಾಲೀಕರು ತಮ್ಮ ತಮ್ಮ ಕುಟುಂಬದಲ್ಲೆ ಗಂಡ, ಹೆಂಡತಿ ಮಕ್ಕಳು ಇತ್ಯಾದಿಯವರ ಹೆಸರುಗಳಲ್ಲಿ ಮನೆಸಹಿತ ಎಲ್ಲಾ ಆಸ್ತಿಗಳನ್ನೂ ಭಾಗಮಾಡಿಕೊಂಡಿದ್ದಾರೆ. ಹೀಗಾಗಿ ಅಲ್ಲಿ ಈದಿವಸ ಯಾರೊಬ್ಬರಲ್ಲೂ ಈಗ ನಿರ್ಧರ ಮಾಡಬೇಕೆಂದು ಸೂಚಿಸಿರುವ 48 ಎಕರೆ ಜಮೀನು ಇರುವುದಿಲ್ಲ. ತಾವು ಈ ರೀತಿ ಲೆಕ್ಕಹಾಕಿ ನೋಡುವುದಾದರೆ ಈಗಲೇ ಆ ಮುಂಬೈ ಪ್ರಾಂತದಲ್ಲಿ ಯಾರಿಗೂ ಜಮೀನು ಸಿಕ್ಕಲಾರದೆಂದು ಕಂಡುಬರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಇನ್ನುಮುಂದೆ ಅಲ್ಲಿ ಯಾರೊಬ್ಬರಿಗೂ ಜಮೀನು ಖಂಡಿತ ಸಿಕ್ಕುವುದಿಲ್ಲವೆಂದು ಹೇಳುತ್ತೇನೆ. ಈ ಕಾರಣದಿಂದ ಈಗ ಈ ಸಮಿತಿಯವರು ಒಪ್ಪಿಸಿರುವ ರಿಪೋರ್ಟ್ ಅಲ್ಲಿಯ ಪರಿಸ್ಥಿತಿಗೆ ಪೂರ್ಣವಿರುದ್ಧವಾಗಿದೆ ಎಂದು ಹೇಳುತ್ತೇನೆ. ಆ ಸಮಿತಿಯವರು ಈ ಬಗ್ಗೆ ತಮ್ಮ ವರದಿಯಲ್ಲಿ ಏನು ಹೇಳಿದ್ದಾರೆಂಬುದರ ಬಗ್ಗೆ ಅವರ ಕೆಲವು ಮಾತುಗಳನ್ನೇ ನಾನೀಗ ಹೇಳಿರುತ್ತೇನೆ. ಈ ಬಗ್ಗೆ ನನ್ನ ಸೂಚನೆ ಏನಿದೆಯೆಂದರೆ ಈಗ ಈ ಸಮಿತಿಯವರು ತಮ್ಮ ವರದಿಯಲ್ಲಿ ಏನು ಈ 48 ಎಕರೆಗಳ ಒಂದು ಫ್ಯಾಮಿಲಿ ಹೋಲ್ಡಿಂಗ್ ಲಿಮಿಟ್ಟನ್ನು ಹೇಳಿದ್ದಾರೋ ಇದು ಸರಿಯಾದುದಲ್ಲ. ಮೊದಲು ಮುಂಬೈ ಪ್ರಾಂತ್ಯದಲ್ಲಿ ಏನೊಂದು ಫ್ಯಾಮಿಲಿ ಲಿಮಿಟ್ ಹಾಕಿದ್ದಿರೋ ಅದೇ ಯೋಗ್ಯವಾಗಿದೆ ಎಂದು ಹೇಳುತ್ತೇನೆ. ಆ ಪರಿಮಿತಿಯೇನೆಂದರೆ ಅಷ್ಯೂರ್ಡ್ ವಾಟರ್ ಸಪ್ಲೈ ಇರತಕ್ಕ ಜಮೀನಾದರೆ 4 ಎಕರೆಗಳಿರಬೇಕೆಂದೂ, ಸೀಜನಲ್ ಕಲ್ಟಿವೇಟೆಡ್ ಜಮೀನಾದರೆ ಎಂಟು ಎಕರೆಗಳಿರಬೇಕೆಂದೂ, ಒಣ ಬೇಸಾಯದ

ಜಮೀನಾದರೆ 16 ಎಕರೆಗಳಿರಬೇಕೆಂದೂ ನಿಗದಿ ಮಾಡಲಾಗಿತ್ತು. ಈ ಪರಮಾವಧಿಗಿಂತಲೂ ಜಾಸ್ತಿ ಜಮೀನು ಯಾರಿಗೂ ಇರಬಾರದೆಂದು ಹೇಳುತ್ತೇನೆ. ಇದಕ್ಕಿಂತಲೂ ಹೆಚ್ಚಿನ ಪರಿಮಿತಿಯಲ್ಲಿ ಈ ಸೀಲಿಂಗ್ ಲಿಮಿಟ್ಟನ್ನಿಟ್ಟರೆ ಆ ಮುಂಬೈ ರಾಜ್ಯದಲ್ಲಿ ಯಾರಿಗೂ ಒಂದು ಹಿಡಿ ಜಮೀನು ಸಹ ಸಿಕ್ಕುವುದಿಲ್ಲ. ಆ ಮುಂಬೈ ರಾಜ್ಯದಲ್ಲಿ ಈ ಸ್ವಂತ ಬೇಸಾಯಗಾರರಾಗಿ ಇರತಕ್ಕ ಜಮೀನ್ದಾರರ ಬಗ್ಗೆ ಕೆಲವು ಕಂಡೀಷನ್‌ಗಳನ್ನು ಹಾಕಿ ಇತ್ತಾರೆ. ಗೇಣೀದಾರರಿಂದ ಜಮೀನನ್ನು ಬಿಡಿಸಿಕೊಳ್ಳಬೇಕಾಗಿದ್ದರೆ ಮಾಲೀಕರಿಗೆ ಅದೇ ಅವನ ಜೀವನಾಧಾರ ವಸ್ತುವಾಗಿರಬೇಕೆಂದು ಹೇಳಿದ್ದಾರೆ. ಇದು ಸರಿಯಲ್ಲ. ಇದನ್ನು ತೆಗೆಯಬೇಕು. ಸ್ವಂತ ಬೇಸಾಯಮಾಡತಕ್ಕ ಜನರು ಆ ಬೇಸಾಯ ಮಾಡತಕ್ಕ ಜಮೀನು ಯಾವ ಗ್ರಾಮದಲ್ಲಿರುತ್ತದೋ ಆ ಗ್ರಾಮದಲ್ಲೇ ಅವರು ಇರಬೇಕು. ಹಾಗೆ ವ್ಯವಸಾಯ ಮಾಡುವ ಜಮೀನು ವಾಸಮಾಡತಕ್ಕ ಹಳ್ಳಿಗೆ ಎಂಟು ಮೈಲಿ ಫಾಸಲೆಯೊಳಗಿದ್ದರೆ ಫ್ಯಾಮಿಲಿ ಸೀಲಿಂಗ್ ಲಿಮಿಟ್‌ನ ಎರಡರಷ್ಟು ಭೂಮಿಯನ್ನು ಇಟ್ಟುಕೊಳ್ಳಬಹುದೆಂದು ತಿಳಿಸಿದೆ. ಹೀಗೆಯೇ ಆ ಜಮೀನು ಎಷ್ಟು ದೂರ ಇದ್ದರೆ ಅಷ್ಟು ಸೀಲಿಂಗ್ ಲಿಮಿಟ್ಟಿನಲ್ಲಿ ಕಡಮೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ಬೇರೆ ಬೇರೆ ಪ್ರದೇಶಗಳಿಗೆ ಮತ್ತು ಭಾಗಗಳಿಗೆ ಅಲ್ಲಿನ ಜಮೀನುಗಳ ಫಲವತ್ತು ಹೇಗಿರುತ್ತದೋ ಅದಕ್ಕನುಗುಣವಾಗಿ ಆಯಾಯ ಭಾಗಗಳಿಗೆ ಬೇರೆ ಬೇರೆ ರೀತಿಯ ಸೀಲಿಂಗ್ ಪರಿಮಿತಿಯನ್ನು ಇಡಬೇಕಾದದ್ದು ಅಗತ್ಯ. ಈಗ ಉದಾಹರಣೆಗೆ ಹೇಳುವುದಾದರೆ, ಚಿಕ್ಕೋಡಿ ಪ್ರಾಂತ್ಯದಲ್ಲಿರತಕ್ಕ ಜಮೀನು ಬಹಳ ಫಲವತ್ತಾದದು. ಆ ಜಮೀನು ಬಹಳ ಉತ್ತಮವಾದುದರಿಂದ ಅಲ್ಲಿ ಜನರಿಗೆ ಜಮೀನು ಸಿಕ್ಕುವುದೇ ಬಹಳ ದುರ್ಲಭ. ಅಲ್ಲಿ ವರ್ಷಕ್ಕೆ ಎಕರೆಯಲ್ಲಿ ನಾಲ್ಕು ಸಾವಿರ ರೂಪಾಯಿಗಳ ಪೀಕನ್ನು ತೆಗೆದುಕೊಳ್ಳಲು ಬರುತ್ತದೆ. ಅಂದರೆ ಅಲ್ಲಿ ಎಕರೆಗೆ 2,000 ರೂಪಾಗಳ ನಿವ್ವಳ ಆದಾಯ ಬರುತ್ತದೆ. ಅಂಥ ಪ್ರದೇಶದಲ್ಲಿ ಈ ಸೀಲಿಂಗ್‌ಲಿಮಿಟ್ಟನ್ನು 48 ಎಕರೆ ಮಾಡುವುದೆಂದರೆ ಬಹಳ ಜಾಸ್ತಿ ಆಯಿತು. ಅಂಥ ಪ್ರದೇಶದಲ್ಲಿ ಈ ಪರಿಮಿತಿಯನ್ನು ಕಡಮೆ ಮಾಡಬೇಕು. ಕಾರಣ ಏನೆಂದರೆ ಆ ಭಾಗದಲ್ಲಿ ಜಮೀನಿನಲ್ಲಿ ಬರತಕ್ಕಂಥ ಹೆಚ್ಚಿನ ಉತ್ಪತ್ತಿಯ ಭಾಗದಿಂದ ಅಲ್ಲಿ ಈ ಪ್ರಮಾಣವನ್ನು ಕಡಮೆಮಾಡಬೇಕು. ಅದೇ ರೀತಿ ಇನ್ನು ದುಷ್ಕಾಲ ಪ್ರದೇಶಗಳಲ್ಲಿರತಕ್ಕ ಭಾಗದಲ್ಲಿ ಎಂದರೆ ವಿಜಾಪುರ—ಬೆಳಗಾಂ ಭಾಗಗಳನ್ನು ತೆಗೆದುಕೊಂಡರೆ ಅಲ್ಲಿಗೆ ಈಗ ಆ ಬೊಂಬಾಯಿ ಪ್ರಾಂತ್ಯದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿರುವ ಸೀಲಿಂಗ್ ಲಿಮಿಟ್‌ನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇನ್ನು ಈ ಜತ್ತಿ ಕಮಿಟಿಯವರು ಜಮೀನಿನ ಮಾಲೀಕನ ದೃಷ್ಟಿಯಿಂದ ವಿಚಾರ ಮಾಡುವಾಗ ಒಕ್ಕಲಿಗನಿಂದ ಜಮೀನನ್ನು ಏಕೆ ಹಿಂದಕ್ಕೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಹೀಗೆ ಹೇಳಿದಾರೆ:

ಈ ಸಮಿತಿಯ ವರದಿಯಲ್ಲಿ ಪುಟ 73ರಲ್ಲಿ:

> "The level of ceiling should be such as to enable persons from the better agricultural families to get the benefits of higher education to make them fit for other avocations."

ಎಂದು ಇದೆ. ಇದರಲ್ಲಿ ಉತ್ತಮವಾಗಿ ಬೇಸಾಯಮಾಡುವವರಿಗೆ ಮತ್ತು ಆ ಒಕ್ಕಲಿಗರಲ್ಲಿ ಉನ್ನತ ವ್ಯಾಸಂಗ ಮಾಡಬೇಕಾದವರಿಗೆ ಹೆಚ್ಚು ಜಮೀನು ಬಿಡಬೇಕೆಂದು ಈ ಸಮಿತಿಯು ವರದಿಯಲ್ಲಿ ಸೂಚಿಲಾಗಿದೆ. ಇದರಲ್ಲಿರುವ ಉದ್ದೇಶ ಹೊಲವನ್ನು ಇಟ್ಟುಕೊಂಡಿರುವ ಒಕ್ಕಲಿಗನು ಅದರಿಂದ ಉತ್ಪನ್ನವನ್ನು ತೆಗೆಯಬೇಕೆನ್ನುವಾಗ ಎರಡನೆಯ ಉದ್ಯಮಕ್ಕೆ ಅತನಿಗೆ ಅವಕಾಶವಿಲ್ಲದಂತೆ ಮಾಡುವುದು ಈ ಸಮಿತಿಯ ಮನೋಭಾವನೆಯೋ ಅಥವಾ ಅದನ್ನು ಬೇರೆ ಉದ್ಯಮಕ್ಕೆ ತಿರುಗಿಸಬೇಕೆಂಬ ಭಾವನೆಯೋ ಯಾವ ತರಹದ್ದು ಎನ್ನುವುದು ವಿಚಿತ್ರವಾಗಿದೆ. ಒಕ್ಕಲಿಗರು ಒಕ್ಕಲುತನ ವಿನಾ ಬೇರೆ ಉದ್ಯಮವನ್ನು ಮಾಡಬಾರದು ಎನ್ನುವುದು ನನ್ನ ಅಭಿಪ್ರಾಯವಲ್ಲ. ಆದರೆ, ಯಾರೇ ಒಕ್ಕಲು ಮಾಡಿದರೂ ಅವರ ಒಕ್ಕಲುತನ ಆಧಾರಿಸಬೇಕಾದರೆ ವೃತ್ತಿಶಿಕ್ಷಣವನ್ನು ಎರಡನೆಯ ಉದ್ಯಮವನ್ನಾಗಿ ಅವರು ತೆಗೆದುಕೊಳ್ಳಬಹುದು. ಆದರೆ ಇದಕ್ಕಾಗಿ ಹೆಚ್ಚಿಗೆ ಜಮೀನನ್ನು ಉಳಿಸಿಕೊಳ್ಳಬೇಕು ಎಂದು ಇಲ್ಲಿ ಹೇಳಿರುವುದು ಸರಿಯಾಗಿ ಕಾಣುವುದಿಲ್ಲ. ಈಗ ತಾವು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುವಂತೆ ಮಾಡಬೇಕೆಂದು ಹೇಳುತ್ತಿದ್ದೀರಿ. ಇದರ ಮುಖ್ಯ ಗುರಿ, ಸಮತಾವಾದ. ಈ ಸಮತಾವಾದದಲ್ಲಿ ಎಲ್ಲರಿಗೂ ಸಮಾನವಾದ ಅವಕಾಶ ಸಿಕ್ಕಬೇಕು ಎನ್ನುವುದಾಗಿದೆ. ವೃತ್ತಿಶಿಕ್ಷಣದ ಎರಡನೆಯ ಉದ್ದೇಶ. ಈ ರೀತಿ ವೃತ್ತಿಶಿಕ್ಷಣವನ್ನು ಮಾಡಿಕೊಂಡ ಯಾವ ಒಕ್ಕಲಿಗನೇ ಆಗಲಿ ಒಕ್ಕಲುತನವನ್ನು ಬಿಡುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಸೀಲಿಂಗನ್ನು ಹಾಕಬೇಕು.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಸಾಧಾರಣವಾಗಿ ಜಮೀನು ಹೆಚ್ಚಾಗಿರುವುದರಿಂದ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ರೈತರಿಗೆ ಈ ಜತ್ತಿ ಸಮಿತಿಯವರ ವರದಿಯಲ್ಲಿ ಹೆಚ್ಚು ಜಮೀನು ಬಿಡಬೇಕೆಂದು ಬರೆದಿದ್ದಾರೆ. ಹಾಗೆ ಮಾಡಕೂಡದೆಂದು ತಮ್ಮ ಅಭಿಪ್ರಾಯವೇ?

ಶ್ರೀ ಎ. ಆರ್. ಪಂಚಗವಿ.—ಅದನ್ನೆಲ್ಲ ತಾವೇ ಓದಿದರೆ ತಮಗೇ ಗೊತ್ತಾಗುತ್ತದೆ. ಇದರಲ್ಲಿ "fit for other avocations" ಎಂದಿದೆ. ಅದರ ವಿಷಯವಾಗಿ ತಮಗೆ ಒಪ್ಪಿಗೆಯಿದ್ದರೆ ಆ ಮಾತು ಬೇರೆ. ಒಕ್ಕಲುತನ ಮಾಡುವ ಒಕ್ಕಲಿಗನಿಗೆ ಆಹಾರದ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕಾಗಿ ಶಿಕ್ಷಣದ ಸಹಾಯ ಸಿಗಬಾರದು ಎನ್ನುವ ಉದ್ದೇಶವಲ್ಲ. ಈ ರೀತಿಯಾದ ವೃತ್ತಿಶಿಕ್ಷಣವನ್ನು ಕೊಡುವುದಕ್ಕಾಗಿ ಜಮೀನು ಕೊಡಬೇಕು ಎಂದು ಹೇಳುವುದು ಸರಿಯಾಗಿರುವುದಿಲ್ಲ. ಸಾಧ್ಯವಾದಮಟ್ಟಿಗೂ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ದೇಶದಲ್ಲಿ ಎಲ್ಲರಿಗೂ ಒಂದೇ ಆಗಿರಬೇಕು. ದೇಶದಲ್ಲೆಲ್ಲ ಎಷ್ಟು ಜಮೀನಿರಬಹುದು ಎನ್ನುವ ಒಂದು ಪಟ್ಟಿ ಮಾಡಬೇಕು. ಕೆಲವು ಕಡೆ ಸಾವಿರಾರು ಎಕರೆಗಳಷ್ಟು ಜಮೀನಿದ್ದರೂ ನೂರು ಎಕರೆ ಕೂಡ ಸಾಗು ಮಾಡುತ್ತಿಲ್ಲ ಎನ್ನುವುದನ್ನು ಲಕ್ಷದಲ್ಲಿಟ್ಟುಕೊಳ್ಳಬೇಕು. ಈ ceiling ವಿಚಾರವಾಗಿ ಇನ್ನೊಂದು ವಿಷಯವನ್ನು ಇಲ್ಲಿ ಹೇಳಿದ್ದಾರೆ:

> 'Stridhana should not be included in the ceiling.''

ಪ್ರತಿಯೊಂದು ಕುಟುಂಬದಲ್ಲಿಯೂ ಬೇರೆ ಬೇರೆ ಹೆಸರಿನವರು ಇದ್ದಾರೆ. ಇವರೆಲ್ಲರೂ ಸೇರಿ ಒಂದು Joint familyಯಾಗುತ್ತದೆ. ಇಲ್ಲಿ "ಸ್ತ್ರೀಧನ"ದ ವಿಷಯವಾಗಿ ಹೇಳುತ್ತಾ ಇದರ ಮೇಲೆ ceiling ಇರಬಾರದೆಂದು ಸೂಚಿಸಿದ್ದಾರೆ. ಗಂಡಹೆಂಡತಿಯರ

(ಶ್ರೀ ಎ. ಆರ್. ಪಂಚಗವಿ)

ಆಸ್ತಿಯೆಲ್ಲ ಒಂದೇ ಆಗಿದೆ. ಆದಕಾರಣ "ಸ್ತ್ರೀಧನ" ವನ್ನು ಸೇರಿಸಿ ಕುಟುಂಬದ ಮಿತಿ ಕಲ್ಪಿಸಬೇಕು. ಇಲ್ಲದೇ ಹೋದರೆ ಇದರಿಂದ ಜಮೀನಿನ ಮಾಲೀಕರು ಅವರಲ್ಲಿರುವ ಜಮೀನನ್ನು ಅವರವರ ಹೆಂಡತಿಯರು, ಹೆಣ್ಣು ಮಕ್ಕಳ ಹೆಸರಿನಲ್ಲಿ ಬರೆದುಬಿಡುವ ಸಂಭವವಿದೆ. ಹೆಸರು ಬೇರೆ ಬೇರೆಯಾಗಿರುವುದಾದರೂ ಒಂದೇ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಆದುದರಿಂದ ಸ್ತ್ರೀಧನವನ್ನು ಬೇರೆಯಾಗಿ ಭಾವಿಸುವುದು ಸರಿಯಾಗಿ ಕಾಣುವುದಿಲ್ಲ; ಹೀಗೆ ಮಾಡುವುದರಿಂದ ಜಮೀನು ಉಳಿಯುವುದಿಲ್ಲ. ಮತ್ತು ಇದರಲ್ಲಿ ceiling ಪ್ರಶ್ನೆಯೇ ಬರುವುದಿಲ್ಲ. ಇದನ್ನು ಅವರು ಅರ್ಥಮಾಡಿಕೊಳ್ಳಬೇಕಾಗಿದೆ.

ಇನ್ನೊಂದು ಮಾತನ್ನು ಈ ceilingನ ವಿಷಯದಲ್ಲಿ ಈ ಜತ್ತಿ ಸಮಿತಿಯವರು ಹೇಳಬೇಕಾಗಿತ್ತು. ಕಳೆದ ಆರು ವರ್ಷಗಳಲ್ಲಿ ಯಾರು ಜಮೀನನ್ನು ಒತ್ತಾಯದಿಂದ ಬಿಡಿಸಿಕೊಂಡಿರುವರೋ ಅಂಥಹವರಿಗೆ ಈ ಜಮೀನು ಪುನಃ ಸಿಕ್ಕುವುದರಲ್ಲಿ ಅಡ್ಡಿಯಿಲ್ಲ. ಆದರೆ ಆ ರೀತಿ ರೈತರಿಗೆ ಜಮೀನು ಸಿಕ್ಕುವಂತೆ ಮಾಡಲು ಈ ವರದಿಯಲ್ಲಿ ಏನೂ ಹೇಳಿಲ್ಲ. ಇದರಲ್ಲಿ ಎರಡು ಕೋರ್ಟಿನ ವಿಷಯವಾಗಿ ಹೇಳಿದ್ದಾರೆ. ಒಂದು Tenancy Court ಮತ್ತು ಇನ್ನೊಂದು Civil Court. ಈ ಕೋರ್ಟುಗಳಿಗೆ ಹೋದ ರೈತರಿಗೆ ಎಷ್ಟು ಮಂದಿಗೆ ಆರುವರ್ಷದ ಹಿಂದೆ ಒತ್ತಾಯದಿಂದ ಜಮೀನು ಕಸಿದುಕೊಂಡಿದ್ದರೆ ಅವರಿಗೆ ಅದನ್ನು ವಾಪಸು ಕೊಡಲಿಕ್ಕೆ ಸಹಾಯ ಮಾಡುತ್ತಾರೆಂದು ಕೇಳಬೇಕಾಗಿದೆ. ರೈತರಿಗೆ ಸುಲಭವಾಗಿ ಜಮೀನು ಸಿಕ್ಕುವುದಕ್ಕೆ ಸಹಾಯ ಮಾಡಬೇಕು.

ಇದರಲ್ಲಿ ಇನ್ನೊಂದು ವಿಚಾರವನ್ನು ಮರೆತಿದ್ದಾರೆ. ಮುಂಬಯಿ ರಾಜ್ಯದ ಪರಿಸ್ಥಿತಿ ಜತ್ತಿ ಸಮಿತಿಯವರಿಗೆ ಗೊತ್ತಿರಬಹುದು. ಜಮೀನು ಮಾಲೀಕರು ಕೆಲವು ಕಡೆ ನಾಲ್ಕಾರು ವರ್ಷಗಳಿಂದ ರೈತರು ಜಮೀನು ಮಾಡುತ್ತಿದ್ದರೂ ಅದರ ಮೇಲೆ (pressure) ಒತ್ತಾಯವನ್ನು ತಂದು ಅಂತಹ ರೈತರಿಂದ ಜಮೀನನ್ನು ಕಸಿದುಕೊಂಡಿದ್ದಾರೆ. ಈ ರೀತಿಯಾಗಿ ಜಮೀನು ಮಾಲೀಕರಿಂದ ಅನೇಕ ರೀತಿಯಾದ ಕಟ್ಟುಪಾಡುಗಳಿಗೆ ಒಳಗಾಗಿ ರೈತರಿಗೆ ಬಹಳ ಕಷ್ಟವಾಗುತ್ತದೆ. ಜಮೀನು ಮಾಲೀಕರಿಂದ ಅನೇಕ ರೀತಿಯಾದ ಒತ್ತಾಯ, ದಬ್ಬಾಳಿಕೆಗಳು ಹೆಚ್ಚಾಗಿ ಅನೇಕ ಕಡೆ ರಾಜೀನಾಮೆ ತೆಗೆದುಕೊಳ್ಳುವುದೂ ಆಗಿದೆ. ಕೆಲವು ಕಡೆಗಳಲ್ಲಿ ಈ ಜತ್ತಿ ಸಮಿತಿಯವರು ಹೋದಾಗ ಆಯಾ ತಾಲ್ಲೂಕಿನಲ್ಲಿರುವ ಅಮಲ್ದಾರರವರಿಂದ ಅಲ್ಲಲ್ಲಿಯ ಪರಿಸ್ಥಿತಿಯನ್ನು ವಿಚಾರಮಾಡಬೇಕಾಗಿತ್ತು. ಅದನ್ನು ವಿಚಾರಮಾಡಿಲ್ಲ. ಮೊದಲು ಯಾರು ಗುತ್ತೇದಾರರಿಂದ ಒತ್ತಾಯವಾಗಿ ಭೂಮಿಯನ್ನು ಕಸಿದುಕೊಂಡಿದ್ದಾರೆನ್ನುವುದನ್ನು ವಿಚಾರಮಾಡಬೇಕು. ಕಳೆದ ಆರು ವರ್ಷಗಳಿಂದ ಮಾಲೀಕರು ಯಾವುದಾದರೂ ಜಮೀನನ್ನು ಒತ್ತಾಯವಾಗಿ ರೈತರಿಂದ ಬಿಡಿಸಿಕೊಂಡಿದ್ದಾರೆ ಮತ್ತು ರಾಜೀನಾಮೆಯಾಗಿದೆ ಎಂಬುದನ್ನೆಲ್ಲ ಈ ಜತ್ತಿ ಸಮಿತಿಯವರು ವಿಚಾರಮಾಡಬೇಕಾಗಿತ್ತು ಇದನ್ನು ಮಾಡಿಲ್ಲ.

ಇನ್ನು ಉಳಿದ ಕೆಲವು ಮಾತುಗಳನ್ನು ನಾನು ಹೇಳುತ್ತೇನೆ. ಈ ವರದಿಯ 46ನೇ ಪೇಜಿನಲ್ಲಿ ಒಂದು ವಿಚಾರವನ್ನು ಈ ಸಮಿತಿಯವರು ಹೇಳಿದ್ದಾರೆ. ಅದು Small Holder ವಿಚಾರ.

"This is specially true of the small holders with less than a family holding as the income from land cannot give them any satisfactory standard of living. These persons may not think of migration at all if they are to be compelled to part with their land before leaving the village. If leases are permitted in such cases there will be less instance on the part of the small holder to try his hand at avocations other than agriculture."

ಈ Small Holder ಎಂದರೆ ಸಣ್ಣ ಜಮೀನಿದ್ದವರು ಕೊಂಡುಕೊಳ್ಳುವುದಕ್ಕಾಗಲಿ, ಅವರ ಜಮೀನನ್ನು ಮಾರಾಟಮಾಡುವುದಕ್ಕಾಗಲಿ ಅನುಕೂಲವಾಗುವಂತೆ ಒಂದು ವಿಚಾರವನ್ನು ಇಲ್ಲಿ ಇಟ್ಟಿದ್ದಾರೆ. ಇದರಲ್ಲಿ ಒಂದನೆಯದು, ಹೆಣ್ಣು ಮಕ್ಕಳು ಮದುವೆ ಆಗಿಲ್ಲದಿರುವವರು ಅಥವಾ ಮದುವೆಯಾಗಿ ಗಂಡನಿಲ್ಲದೆ ಇರುವಂತಹವರಿಗೆ ಲಾವಣಿಗೆ ಕೊಡಲು ಅನುಕೂಲವನ್ನು ಕೊಡಲು ಮತ್ತು ಮುಂದೆ ಸಾಗುಮಾಡಲು ಅವರಿಗೆ ಜಮೀನು ಸಿಕ್ಕದೆ ಇದ್ದಲ್ಲಿ ಅನುಕೂಲಮಾಡುವುದಕ್ಕಾಗಿ ಈ ಸಮಿತಿಯವರು ಒಂದು ಸೂಚನೆಯನ್ನಿಟ್ಟಿದ್ದಾರೆ. ಅವರಲ್ಲಿ ಎಂಟು-ಹತ್ತು ಎಕರೆ ಜಮೀನು ಇದ್ದರೂ ಅದನ್ನು ಸಾಗುವಳಿಮಾಡಬಹುದು. ಎರಡನೆಯದು, ಈರೀತಿ ಜಮೀನನ್ನು ಸಾಗುಮಾಡಲು ಅವರ ಮನೆಯವರೆಲ್ಲ ಸೇರಿ ಮಾಡಿದರೆ ಸಾವಿರಾರು ರೂಪಾಯಿಗಳ ಖರ್ಚು ಆದರೂ ಅದು ಕೂಡ ಉಳಿಯಬಹುದು. ಇದರಿಂದ ಅವರಿಗೂ ಪ್ರಯೋಜನವಾಗುತ್ತದೆ. ಅಲ್ಲದೆ ಲಿಮಿಟ್ಟನ್ನು 1,200 ರೂಪಾಯಿಗಳೆಂದು ಬೇರೆ ಇಟ್ಟಿದೆ. ಅಷ್ಟಾದರೂ ಕೂಡ ಲಾವಣಿ ಲೆಕ್ಕಹಾಕಿದರೆ 1,200 ರೂಪಾಯಿಗಳಷ್ಟು ಜಮೀನಿನಿಂದ ಉಳಿಯಬೇಕು, ಮುಂದೆ ಸಾಗುವಳಿಗೆ ತಕ್ಕಂತೆ ಮಿತವ್ಯಯ ತೋರಿಸಬಹುದು.

ಒಕ್ಕಲಿಗರು ಸ್ವಂತ ಜಮೀನಿದ್ದವರು ಸ್ವಂತ ಜಮೀನು ಬಿಟ್ಟು ಹೋಗಬಾರದು, ಸಾಗು ಮಾಡದಿದ್ದರೆ ಎರಡನೆಯವನಿಗೆ ಅಬಾದು ಮಾಡಲು ಕೊಡಬಹುದು ಎಂದು ಜತ್ತಿಯವರು ಹೇಳಿದರು. ಜಮೀನು ಇಲ್ಲದೆ, ಉದ್ಯೋಗವೂ ಇಲ್ಲದೆ ಹೊಟ್ಟೆಗೆ, ಬಟ್ಟೆಗೆ ಇಲ್ಲದವರು ಎರಡನೆಯ ಉದ್ಯೋಗ ದೊರಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈಗ ಹೇಗಿದೆ ಎಂದರೆ: ಜಮೀನು ಇರಬೇಕು, ಉದ್ಯೋಗ ಸಿಕ್ಕಬೇಕು. ಜಮೀನೂ ಹಾಗೆಯೇ ಇರಬೇಕು, ನೌಕರಿಯೂ ಇರಬೇಕು. ಇದನ್ನು ಪೂರ್ಣವಾಗಿ ವಿಚಾರ ಮಾಡಬೇಕು. ಒಕ್ಕಲಿಗರು ಜಮೀನು ಬಿಟ್ಟುಹೋಗುವುದಿಲ್ಲ ಎಂದು ಮತ್ತೆ ಹೇಳುತ್ತೇನೆ. ಹೆಚ್ಚು ಲಾಭ ಇದ್ದರೆ ಬಿಟ್ಟುಹೋಗುತ್ತಾರೆಯೇ ಹೊರತಾಗಿ ಲಾಭ ಇಲ್ಲದೆ ಹೋಗುವುದಿಲ್ಲ. ಒಕ್ಕಲಿಗರು ಸಣ್ಣ ಸಣ್ಣ ಹಿಡುವಳಿದಾರರು ಭೂಮಿ ಬಿಟ್ಟು ಹೋಗುವುದಿಲ್ಲ. ಶಹರದಲ್ಲಿ ಕೆಲಸ ಮಾಡಿದರೆ ನಾಲ್ಕು ಆಣೆ, ಎಂಟು ಆಣೆ ಕೂಲಿ ಜಾಸ್ತಿ ಸಿಕ್ಕುತ್ತದೆಂದು ಅಂಥವರು ಪಟ್ಟಣಕ್ಕೆ ಹೋಗುತ್ತಾರೆ. ಆದರೆ ಒಕ್ಕಲಿಗರು ಜಮೀನು ಬಿಟ್ಟುಹೋಗುವುದಿಲ್ಲ. ಅಂಥವರಿಗೆ ಜಮೀನು ಕೊಡಬಾರದು ಎನ್ನುವುದು ತತ್ವಕ್ಕೆ ವಿರೋಧವಾದುದು ಎಂದು ಹೇಳುತ್ತೇನೆ. ಕೂಲಿಗಾರರು ಮತ್ತು ಜಮೀನು ಇಲ್ಲದವರಿಗೆ ಮೊದಲನೆಯ ಪ್ರಿಫರೆನ್ಸ್ ಕೊಟ್ಟು ಒಕ್ಕಲುತನ ಮಾಡುವವರಿಗೆ ಗೇಣಿದಾರರಿಗೆ ಎರಡನೆಯ ಪ್ರಿಫರೆನ್ಸ್ ಕೊಡಲು ಹೊರಟಿದ್ದಾರೆ. ಅದು ತಪ್ಪು. ಅದನ್ನು ತೆಗೆದುಹಾಕಬೇಕು. ಸರ್ಕಾರದವರು

ಇದನ್ನು ಆಲೋಚನೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮುಂಬೈ ರಾಜ್ಯದಲ್ಲಿ 1957 ನೆಯ ಏಪ್ರಿಲ್ ಒಂದನೆಯ ತಾರೀಖು ಜಮೀನು ಯಾವ ರೈತರು ಮಾಡುತ್ತಾರೋ ಅವರಲ್ಲೇ ಐಕ್ಯವಾಗಬೇಕು ಎಂದು ಹೇಳಿದ್ದಾರೆ, ಅದು ಯೋಗ್ಯವಲ್ಲ ಎಂದು ಜತ್ತಿ ಸಮಿತಿಯವರು ಹೇಳಿದ್ದಾರೆ. ಅದು ಅಷ್ಟು ಸಮಂಜಸವಲ್ಲ ಎಂದು ನೋಡಿದರೆ ಗೊತ್ತಾಗುತ್ತದೆ ವರದಿಯ 47ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ:

"It would not be correct to declare all tenants holding land on a specified date as owners. Some of the lessors may belong to the categories of owners who could lease out lands even in future."

ಅಂಥವರ ಬಗ್ಗೆ ಆಪಾದನೆ ಮಾಡಿದ್ದಾರೆ. ಅವರ ಪ್ರಶ್ನೆ ಬರುವುದಿಲ್ಲ. ಹೆಣ್ಣುಮಕ್ಕಳು, ವಿಧವೆಯರು ಮುಂದೆ ಭೂಮಿ ಸಾಗುವಳಿ ಮಾಡಬಹುದು ಎಂದು ಮುಂಬೈ ರಾಜ್ಯದಲ್ಲಿದೆ. ಮುಂದಕ್ಕೆ ಈ ರೀತಿ ಹೇಳಿದ್ದಾರೆ :

"Also some of the tenants may be in possession of large extents either as owners or as tenants or as both and the limit to holdings would have to apply in such cases."

ಇದು ನಿಜವಾಗಿದೆ. ಬಹಳ ರೈತರ ಹತ್ತಿರ ಬಹಳ ಜಮೀನು ಇದೆ. ಅವರಿಗೆ ಲಿಮಿಟ್ ಹಚ್ಚುವುದು ನ್ಯಾಯವಾಗಿದೆ. 48 ಎಕರೆಗಳಿಗಿಂತ ಜಾಸ್ತಿ ಇರ ಕೂಡದು ಎಂದು ಮುಂಬೈ ರಾಜ್ಯದಲ್ಲಿ ಲಿಮಿಟ್ ಹಚ್ಚಿದ್ದಾರೆ. ಇದನ್ನು ಜತ್ತಿಸಮಿತಿಯವರು ಮರೆಯಬಾರದಾಗಿತ್ತು.

"Further, it may not be equitable to deprive the owners who leased out their lands when there was no restriction on leases of an opportunity to take up personal cultivation within a reasonable time."

ಯಾರು ಪರ್ಸನಲ್ ಕಲ್ಟಿವೇಷನ್ ಮಾಡುತ್ತಾರೆ ಅಂಥವರಿಗೆ ಜಮೀನು ಬಿಡಿಸಿಕೊಳ್ಳುವುದಕ್ಕೆ ಮುಂಬೈ ಶಾಸನದಲ್ಲಿ ಅವಕಾಶ ಮಾಡಿದ್ದಾರೆ. ಇಂಥ ಕಡೆಗಳಲ್ಲಿಯೂ ಗೇಣಿದಾರರು ಯಾರಾದರೂ ಇದ್ದರೆ ಅವರಿಗೆ ಮಾಲೀಕತ್ವ ಪ್ರಾಪ್ತವಾಗುವುದು ಯೋಗ್ಯ. ಅಲ್ಲಲ್ಲಿ ಅಲ್ಪಸ್ವಲ್ಪ ದೋಷಗಳು ಇರಬಹುದು. ಅದನ್ನು ಪಾಸು ಮಾಡಿದವರಲ್ಲಿ ಮಾನ್ಯ ಜತ್ತಿಯವರು ಒಬ್ಬರು. ಅದನ್ನು ಪೂರ್ಣವಾಗಿ ವಿಚಾರ ಮಾಡಬಹುದಾಗಿತ್ತು. ಇನ್ನು ಮತ್ತೊಂದು ವಿಷಯ 52ನೇ ಪೇಜಿನಲ್ಲಿ ಬೊಂಬಾಯಿ ತತ್ವ ಒಪ್ಪುತ್ತಾರೆ.

"The right of resumption should further be qualified as in the Bombay Act by the condition that the income from the land to be resumed should be the main source of the landlord's income for his maintenance."

ಇದನ್ನು ಮುಂಬಯಿಯಲ್ಲಿ ವಿರೋಧ ಮಾಡಿದ್ದಾರೆ. ಆದರೂ ಕೂಡ ಕಾಯಿದೆಯಲ್ಲಿ ಪಾಸು ಆಗಿ ಬಂದಿದೆ. ಅದು ಆಗಬಾರದು ಎಂದು ನನ್ನ ಉದ್ದೇಶ. ಜಮೀನ್ದಾರ, ಒಕ್ಕಲಿಗರ ದೃಷ್ಟಿಯಿಂದ ಹೇಳುತ್ತೇನೆ. Personal cultivation ಮಾಡುವಾಗ ಎಲ್ಲರಿಗೂ ಪ್ರಯೋಜನ ಸಿಕ್ಕಬೇಕು. ಒಕ್ಕಲಿಗರಿಂದ ಜಮೀನು ತಾವು ಬಿಡಿಸಿಕೊಡಬೇಕೆಂದು ಹೇಳುವಾಗ ಈ ತರಹ ರಿಸ್ಟ್ರಿಕ್ಷನ್ ಹಾಕುವಾಗ ಯಾವ ಜಮೀನು ಬಿಡಿಸಿಕೊಳ್ಳುತ್ತಾರೋ ಅದು ಮೆಯಿನ್ ಸೋರ್ಸ್ ಸ್ ಆಫ್ ಇನ್‌ಕಂ ಆಗಬೇಕು ಎನ್ನುವುದು ಎಷ್ಟುಮಟ್ಟಿಗೆ ಅಡ್ಡಿ ಬರುತ್ತದೆ ಎನ್ನುವುದನ್ನು ಸಮಿತಿಯವರು ಲೆಖ್ಖ ಹಾಕಬೇಕಾಗಿತ್ತು. ಈಗ ಫ್ಯಾಮಿಲಿ ಹೋಲ್ಡಿಂಗ್ಸ್ 1,200 ರೂಪಾಯಿ ಹಾಕಿದ್ದಾರೆ. ಒಕ್ಕಲಿಗನು 100 ರೂಪಾಯಿ ಉತ್ಪನ್ನ ಬರುವ ಜಮೀನು ಮಾಡುತ್ತಾನೆ ಎಂದು ಇಟ್ಟುಕೊಳ್ಳೋಣ. ಆಗ 200 ರೂಪಾಯಿ ಉತ್ಪನ್ನ ಬರುವ ಜಮೀನನ್ನು ಬಿಡಿಸಿಕೊಳ್ಳಬೇಕಾದರೆ ಈ ಕ್ಲಾಸ್ ಪೂರ್ಣವಾಗಿ ವಿಚಾರ ಮಾಡಿದರೆ ಬರುವುದಿಲ್ಲ. ಅದು ಮೈನ್ ಸೋರ್ಸ್ ಆಫ್ ಇನ್‌ಕಂ ಆಗುವುದಿಲ್ಲ. ಅದು ಅವನಿಗೆ ಸಿಕ್ಕಲಾರದು ಎನ್ನುವ ಕೋರ್ಟಿನ ನಿರ್ಣಯ ಮುಂಬೈನಲ್ಲಿ ಅನೇಕ ಸಲ ಆಗಿದೆ. ಇದನ್ನು ಜತ್ತಿಸಮಿತಿಯವರು ಪೂರ್ಣ ವಿಚಾರ ಮಾಡಬೇಕಾಗಿತ್ತು. ಇದನ್ನು ಮಾಡಲಿಲ್ಲ. ಮುಂಬೈನವರು ಅಕ್ಷರಶಃ ಒಪ್ಪಿದ್ದಾರೆ. ಇದು ತಪ್ಪು. ನಿಜವಾಗಿ ಒಕ್ಕಲುತನದಿಂದ ಜಮೀನು ತೆಗೆದುಕೊಂಡರೆ ಒಕ್ಕಲಿಗರಿಗೆ ಜಮೀನು ಸಿಕ್ಕುವುದಿಲ್ಲ. ಎನ್ನುವುದನ್ನು ಮಾಲೀಕರು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು. ರಿಸ್ಟ್ರಿಕ್ಷನ್ ಹಾಕಬಾರದು. ಇದಕ್ಕೆ ನನ್ನ ಒಪ್ಪಿಗೆ ಇದೆ.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೇಬಿಹಾಳ್).—ಮುಂಬೈ ಹೈಕೋರ್ಟಿನಲ್ಲಿ ಫುಲ್‌ಬೆಂಚ್‌ನಲ್ಲಿ ಮೈನ್ ಸೋರ್ಸ್ ಆಫ್ ಇನ್‌ಕಂ ಅರ್ಥ ಮಾಡಿದ್ದಾರೆ. ಎರಡು ಸಾರಿ ಅರ್ಥ ಮಾಡಿದ್ದಾರೆ. ಮೈನ್ ಸೋರ್ಸ್ಸ್ ಆಫ್ ಇನ್‌ಕಂ ಫಾರ್ ಮೈನ್‌ಟೆನೆನ್ಸ್ ಉತ್ಪನ್ನ ಜಾಸ್ತಿ ಇದ್ದರೆ ಜಮೀನು ತೆಗೆದುಕೊಳ್ಳಬಹುದು. ಇಲ್ಲದಿದ್ದರೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಎರಡನೆಯದು ಜಮೀನು ಏನು ತೆಗೆದುಕೊಳ್ಳುತ್ತಾರೆ ಅದನ್ನು ಸ್ವಂತ ಉಪಯೋಗಕ್ಕೆ ಸಾಗಿಗೆ ತೆಗೆದುಕೊಳ್ಳಬಹುದು. ಸ್ವಂತ ಸಾಗುವಳಿಗೆ ಮಾತ್ರ ಜಮೀನು ತೆಗೆದುಕೊಳ್ಳಬಹುದು ಎಂದು ಅರ್ಥ ಮಾಡಿದ್ದಾರೆ. ಸ್ವಂತ ಜಮೀನು ಮಾಡುವವರು ಸಹ ಬೇರೆ ಜಮೀನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಎ. ಆರ್. ಪಂಚಗವಿ.—ನನ್ನ ಅಭಿಪ್ರಾಯ ಸ್ವಚ್ಛವಾಗಿ ಹೇಳಿದ್ದೇನೆ. ಯಾವ ಮನುಷ್ಯ ಒಕ್ಕಲುತನ ಮಾಡುತ್ತಾನೋ ಅಂಥವನಿಗೆ ಸಾಧಾರಣವಾಗಿ ಮಿನಿಮಮ್ ಎಷ್ಟು ಜೀವನಕ್ಕೆ ಬೇಕೋ ಅಷ್ಟು ಅವನಿಗೆ ಫ್ಯಾಮಿಲಿ ಹೋಲ್ಡಿಂಗ್ಸ್ ಪೂರ್ಣವಾಗಿ ಸಿಕ್ಕಬೇಕು. ಇದು ನನ್ನ ಸ್ವಚ್ಛ ಅಭಿಪ್ರಾಯ. ಅದಕ್ಕೆ ಯಾವುದೇ ಕಂಡೀಷನ್ ಹಾಕಬಾರದು. ಇದು ನನ್ನ ಸ್ವಚ್ಛ ಅಭಿಪ್ರಾಯ. ಒಕ್ಕಲಿಗರು ನಿಜವಾಗಿ ಒಕ್ಕಲುತನದಲ್ಲಿ ಇರಬೇಕಾದರೆ ಅವರಿಗೆ ಮಿನಿಮಮ್ ಉತ್ಪನ್ನ ಇರಬೇಕು. ಫ್ಯಾಮಿಲಿ ಹೋಲ್ಡಿಂಗ್ ಪೂರ್ಣ ಅಡ್ಡಿ ಇಲ್ಲದೆ ಸಿಕ್ಕಬೇಕು. ಇದು ನನ್ನ ಸ್ವಚ್ಛ ಅಭಿಪ್ರಾಯ. ಜತ್ತಿಸಮಿತಿ ವರದಿಯಲ್ಲಿ ಸ್ವಂತ ಸಾಗುವಳಿ ಮಾಡುವದಕ್ಕೆ ಭೂಮಿಯನ್ನು ತೆಗೆದುಕೊಳ್ಳುವಾಗ

(ಶ್ರೀ ಎ. ಆರ್. ಪಂಚಗಾವಿ)

personal labour ಇರಬೇಕೆಂಬ ವಿಚಾರದಲ್ಲಿ ಈ ರೀತಿಯಾಗಿ ಹೇಳಿದೆ:—

> "We are of opinion that there is no need to insist on personal labour so long as the entire risk of cultivation is borne by the owner and personal supervision is exercised by the owner or a member of his family residing during the greater part of the cultivation season in the village where the land is situated or in a nearby place."

ಆದರೆ personal labour ಸ್ವಲ್ಪಮಟ್ಟಿಗಾದರೂ ಇರಬೇಕು. ದುಡಿಯಲಾರದವರು ಮೇಲ್ವಿಚಾರಣೆ ಮಾತ್ರ ಮಾಡಬಹುದು. Personal labour ಇರಬೇಕೆಂದು ಕಾನೂನದಲ್ಲಿ ಹಾಕಬೇಕು. ಯಾಕೆಂದರೆ ಸ್ವಂತ ಸಾಗುವಳಿ ಮಾಡಿದರೆ ಜಮೀನು ಸುಧಾರಿಸುತ್ತದೆ. ಬೆಳೆ ಚೆನ್ನಾಗಿ ಬರುತ್ತದೆ. ಇದರಿಂದ ದೇಶಕ್ಕೆ ಲಾಭವಾಗುತ್ತದೆ. ಸ್ವಂತ ಸಾಗುವಳಿ ಮಾಡುವದಕ್ಕೆ ಜಮೀನು ಹತ್ತು ಮೈಲಿ ಅಂತರದಲ್ಲಿ ಇರಬೇಕೆಂದು ವರದಿಯಲ್ಲಿ ಹೇಳಿದೆ. ಅದರೆ ಇಷ್ಟು ಅಂತರ ಇರುವುದು ಸರಿಯಾದುದಲ್ಲವೆಂದು ನನಗೆ ಅನಿಸುತ್ತದೆ. ಇದು ನಮ್ಮ ಸಮಾಜ ರಚನೆಗೆ ವಿರುದ್ಧವಾದದ್ದು. ರೈತರ ಹೆಣ್ಣುಮಕ್ಕಳಿಗೆ ಭೂಮಿಯಲ್ಲಿ ಪಾಲು ದೊರೆಯುತ್ತದೆ. ಹೆಣ್ಣುಮಕ್ಕಳು ಮದುವೆ ಮಾಡಿಕೊಂಡು ಹತ್ತು ಮೈಲು ಆಚೆಗೆ ಇರುವ ಹಳ್ಳಿಗೆ ಇರಲು ಹೋದರೆ ಅವರು ಏನು ಮಾಡಬೇಕು ? ಹತ್ತು ಮೈಲು ಅಂತರದೊಳಗೆ ಇರುವ ಹಳ್ಳಿಗೆ ಲಗ್ನಮಾಡಿಕೊಂಡು ಹೋಗಬೇಕು ಎಂದ ಹಾಗೆ ಆಗುತ್ತದೆ. ಆದುದರಿಂದ ಹತ್ತು ಮೈಲು ಅಂತರದ ನಿರ್ಬಂಧ ಹಾಕಬಾರದೆಂದು ನನ್ನ ಅಭಿಪ್ರಾಯವಾಗಿದೆ. ವಂಶಪಾರಂಪರ್ಯವಾಗಿ ಒಕ್ಕಲತನ ಮಾಡುವವರಿಗೆ ಇದರಿಂದ ಅನ್ಯಾಯವಾಗುತ್ತದೆ. ಒಕ್ಕಲಿಗರ ಹೆಚ್ಚು ಮಕ್ಕಳಿಗೆ ಪಾಲು ದೊರೆಯಲು ಈ ನಿರ್ಬಂಧದಿಂದ ತೊಂದರೆಯಾಗುತ್ತದೆ. ಆದಕಾರಣ ಈ ಹತ್ತು ಮೈಲು ನಿರ್ಬಂಧ ಹಾಕಬಾರದು.

ಇನ್ನು personal labour ಎಂದರೆ ಏನು ಎಂಬುದು ಎಲ್ಲರಿಗೂ ಗೊತ್ತಿದೆ ಭೂಮಿಯಲ್ಲಿ ಸ್ವತಃ ದುಡಿಯಬೇಕು. ಆಳುಗಳನ್ನು ಹಚ್ಚಿ ಕೂಲಿಯಿಂದ ಕೆಲಸ ಮಾಡಿಸುವುದು ಮತ್ತು ಸ್ವತಃ ದೂರ ವಿದ್ದು ನೋಡುವುದು ಸ್ವಂತ ಸಾಗುವಳಿ ಆಗುವದಿಲ್ಲ. ಗೇಣಿಯ ಪ್ರಮಾಣವು ಇಷ್ಟೇ ಎಂದು ನಿರ್ಧರಿಸಬೇಕು. ಗೇಣಿಯ ಪ್ರಮಾಣ ಇಂತಿಷ್ಟು ಎಂದು ಜಾಹೀರ ಮಾಡಿದ್ದು ಒಮ್ಮೊಮ್ಮೆ ರೈತನಿಗೆ ಗೊತ್ತಾಗುವುದಿಲ್ಲ. ಇದರ ಲಾಭ ಮಾಲೀಕನು ತೆಗೆದುಕೊಳ್ಳುತ್ತಾನೆ. ಮೊದಲಿನಿಂದಲೂ ಕೊಡುತ್ತ ಬಂದಿರುವ ಗೇಣಿಯನ್ನೇ ರೈತನು ಕೊಡುತ್ತ ಹೋಗುತ್ತಾನೆ. ಗೇಣಿಯ ಪ್ರಮಾಣವನ್ನು ಇಳಿಸಿದ್ದು ವರದಿಯಲ್ಲಿ ಕಂಡುಬರುವದಿಲ್ಲ. ಗೇಣಿಯ ಪ್ರಮಾಣವು ಧಾನ್ಯ ರೂಪದಲ್ಲಿ ಪಾಲು ಇರದೆ ಇಂತಿಷ್ಟು ರಕಮು ಎಂದು ಇರಬೇಕು. ಹಣದ ರೂಪದಲ್ಲಿ ಗೇಣಿಯ ಪ್ರಮಾಣವನ್ನು ನಿಶ್ಚಿತಗೊಳಿಸಬೇಕು. ನಮ್ಮ ಪ್ರದೇಶದಲ್ಲಿ ರಿವಿಜನ್ ಸೆಟಲಮೆಂಟು ಆಗಿಲ್ಲವೆಂಬುದು ನಿಜ. ಕಂದಾಯ ಕಡಿಮೆ ಇದೆ, ಲ್ಯಾಂಡ್ ಅಸೆಸ್‌ಮೆಂಟನ್ನು ಪುನಃ ವಿಮರ್ಶಿಸಬೇಕು. ಜಮೀನಿನ ಕಂದಾಯದ ಎರಡರಿಂದ ಐದರಷ್ಟು ಮಾತ್ರ ಗೇಣಿದಾರನು ಮಾಲೀಕನಿಗೆ ಕೊಡಬೇಕೆಂದು ಮುಂಬಯಿ ಶಾಸನದಲ್ಲಿ ನಿಗದಿ ಮಾಡಿದ್ದುದು ಸೂಕ್ತವಾಗಿದೆ. ಗೇಣಿ ಎಷ್ಟು ಎಂಬದನ್ನು ಹಣರೂಪದಲ್ಲಿ ನಿಖರವಾಗಿ ಗೊತ್ತುಮಾಡಬೇಕು. ಇಲ್ಲವಾದರೆ ರೈತ ದಿನಂಪ್ರತಿ ಕೋರ್ಟಿಗೆ ಅಲೆಯಬೇಕಾಗುವುದು. ಅದಕ್ಕೆ ಈ ದೃಷ್ಟಿಯಿಂದ ಒಂದು ನಿಶ್ಚಿತ ಮೊತ್ತವನ್ನು ಗೇಣಿದಾರರಿಗೆ ನಿರ್ದಿಷ್ಟವಾಗಿ ಕೊಡದ ಹೊರತು ರೈತರಿಗೆ ತೊಂದರೆ ತಪ್ಪಿದ್ದಿಲ್ಲವೆಂದು ಹೇಳುತ್ತೇನೆ. ಈ ಟೆನೆನ್ಸಿ ಕಾಯಿದೆ ಜಾರಿಗೆ ತರುವುದರಲ್ಲಿ ಮತ್ತು ಕಾರ್ಯಾಚರಣೆ ಮಾಡುವುದರಲ್ಲಿ ಅನೇಕ ತೊಂದರೆಗಳು ಬಂದಿರುವುದು ನಮ್ಮ ಅನುಭವದಲ್ಲಿ ಗೊತ್ತಾಗಿದೆ. ಮುಂಬೈಯಲ್ಲಿ ಈ ಕಾನೂನನ್ನು ಜಾರಿಗೆ ತರುವ ಕೆಲಸವನ್ನು ಅಧಿಕಾರಿಗಳ ಕೈಗೆ ಕೊಟ್ಟಿರುವುದರಿಂದ ಈ ಗೇಣಿದಾರರ ಕಾಯಿದೆಯನ್ನು ಜಾರಿಗೆ ತರುವಾಗ ಕರಪ್ಷನ್ ಹೆಚ್ಚಾಗಿ ಇರುತ್ತದೆ. ಆದ್ದರಿಂದ ರೆವಿನ್ಯೂ ಅಧಿಕಾರಿಗಳ ಕೈಗೆ ಈ ಕಾನೂನನ್ನು ಕೊಡಬಾರದೆಂದು ಒಂದು ಮಾತನ್ನು ಹೇಳುತ್ತೇನೆ. ಜತ್ತಿಸಮಿತಿಯವರು ಇದನ್ನು ಪೂರ್ಣವಾಗಿ ವಿಚಾರ ಮಾಡಿಲ್ಲ. ಇದು ಪುನಃ ರೆವಿನ್ಯೂ ಅಧಿಕಾರಿಗಳ ಕಡೆಗೇ ಉಳಿಯುತ್ತದೆ. ಇದನ್ನು ಕಾರ್ಯಾಚರಣೆಗೆ ತರುವಾಗ ದಿವಾನೀ ಕೋರ್ಟಿಗೆ ಒಪ್ಪಿಸಿದ್ದರೆ ಬಹಳ ಚೆನ್ನಾಗಿತ್ತು. ಇದನ್ನು ಪೂರ್ಣ ವಿಚಾರಮಾಡಿ ತರಬೇಕಾಗಿತ್ತು. ಇದನ್ನು ಸಿವಿಲ್ ಕೋರ್ಟಿಗೆ ಒಪ್ಪಿಸಿದ್ದರೆ ಬಹಳ ನೆಟ್ಟಗಾಗುತ್ತಿತ್ತು ಎಂದು ನನ್ನ ನಿಶ್ಚಿತ ಅಭಿಪ್ರಾಯ. ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ನಮ್ಮ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ಈ ಜತ್ತೀ ಸಮಿತಿ ವರದಿ ಇಂಗ್ಲೀಷಿನಲ್ಲಿದೆ. ಇದನ್ನು ಓದಿ ಅರ್ಥಮಾಡಿಕೊಳ್ಳುವುದಕ್ಕೆ ನಮಗಾಗಲಿಲ್ಲ. ಸ್ವಲ್ಪ ನಿಧಾನವಾದರೂ ಕನ್ನಡ ಭಾಷೆಯಲ್ಲಿ ಈ ವರದಿಯನ್ನು ತಯಾರುಮಾಡಿಕೊಡಿ. ಇಲ್ಲಿ ಆಡುವುದನ್ನು ನೋಡಿದರೆ ನನಗೆ ಅರ್ಥವಾಗುವುದಿಲ್ಲ. ಬಡ್ಜೆಟ್ ಇಂಗ್ಲೀಷಿನಲ್ಲಿ ಮಾಡುವುದರಿಂದ ಅದಕ್ಕೆ ದುಡ್ಡು ಖರ್ಚಾಗುವುದಿಲ್ಲವೇ ? ಕನ್ನಡದಲ್ಲಿ ಮಾಡಿಸಿ ನಮಗೆಲ್ಲರಿಗೂ ಕನ್ನಡದ ಕಾಪಿಗಳನ್ನು ಒದಗಿಸಬೇಕೆಂದು ಅನೇಕ ಸಾರಿ ಹೇಳಿದ್ದೇವೆ. ಅನೇಕ ಮಹನೀಯರು ಇದುವರೆಗೂ ಎಷ್ಟೋಸಾರಿ ಹೇಳಿದರೂ ಕೂಡ ಸರ್ಕಾರದವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ಜತ್ತಿ ಸಮಿತಿ ವರದಿಯನ್ನು ಕನ್ನಡದಲ್ಲಿ ಅಚ್ಚುಹಾಕಿಸಿ ಎಲ್ಲಾ ಸದಸ್ಯರಿಗೂ ಒದಗಿಸಬೇಕಾಗಿದೆ. ಮುಖ್ಯವಾಗಿ ಈ ವಿಚಾರದಲ್ಲಿ ಚರ್ಚೆ ಮಾಡಬೇಕಾದುದು ಇದೆ. ಅದಕ್ಕೋಸ್ಕರ ನಾನು ಏನು ಮಾತನಾಡಬೇಕೆಂಬುದೇ ನಮಗೆ ಗೊತ್ತಾಗಲಿಲ್ಲ. ಇನ್ನು ಮುಂದೆ ಈ ಇಂಗ್ಲೀಷ್ ಅರ್ಥವನ್ನು ತಿಳಿಯಲು ಒಬ್ಬ ಲಾಯರಿಗೆ ಫೀಜ್‌ಕೊಟ್ಟು ಇಟ್ಟುಕೊಳ್ಳಬೇಕಾಗಿದೆ.

ಉಪಾಧ್ಯಕ್ಷರು.—ಕನ್ನಡ ಕಾಪಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಇದರ ಚರ್ಚೆ ಇನ್ನೆರಡು ದಿವಸಗಳಲ್ಲಿ ಮುಗಿಯುತ್ತದೆ. ಇನ್ನೂ ಕನ್ನಡ ಕಾಪಿಗಳನ್ನು ಒದಗಿಸದೆ ಇರುವುದು ಬಹಳ ವಿಷಾದಕರ. ಅದನ್ನು ಬಹಳ ಜಾಗ್ರತ ಒದಗಿಸಬೇಕು.

[SRI N. O. SAMAJI *spoke in Marathi.*]

*ಶ್ರೀ ಎಚ್. ಎ. ಕರಿಲಿಂಗಣ್ಣ (ಗೋಕಾಕ್).—ಸ್ವಾಮಿ, ಜತ್ತಿಸಮಿತಿಯವರ ವರದಿ ಏನಿದೆ ಅದು ಯಾವುದೇ ಒಬ್ಬ ರೈತನಿಗೆ ಅನುಕೂಲ ಸಿಕ್ಕದಂಥ ವರದಿ ಆಗಿದೆ. ಕಾಂಗ್ರೆಸ್ ಸಂಸ್ಥೆಯವರು ಬ್ರಿಟಿಷರನ್ನು ಹೊಡೆದೋಡಿಸಿದ ಮೇಲೆ ಏನೋ ಒಂದು ಸುಖೀರಾಜ್ಯ ಕಟ್ಟುತ್ತೇವೆ. ರೈತರ ರಾಜ್ಯ ಕಟ್ಟುತ್ತೇವೆಂದು ಅವರಲ್ಲಿ ಜಾಗೃತಿ ಹುಟ್ಟಿಸಿದರು. ಮುಂಬೈನಲ್ಲಿ ''ಉಳುವವನೇ ಭೂಮಿಯ ಒಡೆಯ'' ಎಂಬ ಕಾಯಿದೆ ಇದೆ. ಹೈದರಾಬಾದಿನಲ್ಲಿ ಸ್ವಲ್ಪ ಮಟ್ಟಿಗೆ ಅದೇರೀತಿ ಕಾಯಿದೆಮಾಡಿದ್ದಾರೆ. ಜತ್ತಿಸಮಿತಿಯ ವರದಿಯನ್ನು ನೋಡಿದರೆ ಈ ತತ್ವ ಅದರಿಂದ ಬಹಳ ದೂರ ಹಿಂದೆ ಸರಿದಂತೆ ಕಾಣುತ್ತಿದೆ. ಮುಂಬೈ ಕರ್ಣಾಟಕ ಮತ್ತು ಹೈದ್ರಾಬಾದ್ ಕರ್ಣಾಟಕದಲ್ಲಿ ಹಿಂದೆ ಏನು ಜಮೀನುಗಳು ಸಿಗುತ್ತಿದ್ದವೋ, ಅದುಕೂಡ ಜತ್ತಿಸಮಿತಿಯ ವರದಿಯಿಂದ ಸಿಕ್ಕುವುದಿಲ್ಲ. ಇದರಿಂದ ರೈತರ ಹತ್ತಿರ ಹೋಗಿ ನಾವು ಏನು ಹೇಳಬೇಕೋ ನಮಗೆ ಗೊತ್ತಿಲ್ಲ. ಹೇಳದೆಇದ್ದಂಥ, ಮಾಡದೇಇದ್ದಂಥ ತರಹದಲ್ಲಿ ಕಾಯಿದೆಗಳನ್ನು ಈ ವರದಿಯಲ್ಲಿ ಮಾಡಿರುವುದರಿಂದ ಜನರಲ್ಲಿ ಅವಿಶ್ವಾಸ ಉದ್ಭವವಾಗಿ, ಇದರಿಂದ ಸರ್ಕಾರಕ್ಕಿರುವ ಮತ್ತು ನಮ್ಮಲ್ಲಿರುವ ರೈತರ ವಿಶ್ವಾಸ ಹೋಗುತ್ತದೆ. ರೈತನೇ ಜಗತ್ತನ್ನು ಕಾಪಾಡುವವನು. ಅವನಿಗೆ ಹೆಚ್ಚು ಪ್ರಾಧಾನ್ಯ ಕೊಡುವುದನ್ನು ಬಿಟ್ಟು ಜಮೀನ್‌ದಾರರನ್ನು ಪ್ರಾಧಾನ್ಯವಾಗಿ ಇಟ್ಟು ಕೊಂಡು ಹೋದರೆ ಪ್ರಯೋಜನವಾಗುವುದಿಲ್ಲ. ಮುಂಬೈಯಲ್ಲಿ ಕಾನೂನುಗಳನ್ನು ಯಾವರೀತಿ ಮಾಡಿದ್ದಾರೋ ಆರೀತಿ ಇಲ್ಲಿ ಜಾರಿಗೆತರಬೇಕು. ''ಉಳುವವನೇ ಭೂಮಿಯ ಒಡೆಯ'' ಎಂಬ ತತ್ವಕ್ಕನುಸಾರವಾಗಿ ರೈತನನ್ನು ಒಡೆಯನನ್ನಾಗಿಮಾಡಬೇಕು. ಸೀಲಿಂಗ್ ಲಿಮಿಟ್ಟನ್ನು ನಾಲ್ಕೂವರೆ ಪಟ್ಟಿನಂತೆ ಹಾಕಬಾರದು. ಕೊಡಗಿನಲ್ಲಿ ಹಾಕಿರುವಂತೆ ಮೂರು ಪಟ್ಟು ಹಾಕಬೇಕು. ಆಗ ಉತ್ಪಾದನಾ ಶಕ್ತಿ ಹೆಚ್ಚಾಗುತ್ತದೆ. ಬೆಳಗಾಂನಲ್ಲಿ ಒಬ್ಬೊಬ್ಬ ರೈತನಿಗೆ ಸಾಮಾನ್ಯವಾಗಿ 44 ಎಕರೆ ಭೂಮಿ ಇದ್ದರೂ, ಕೇವಲ ಐದು ಎಕರೆ ಭೂಮಿಯನ್ನು ಮಾತ್ರ ಉತ್ತಮ ರೀತಿಯಿಂದ ವ್ಯವಸಾಯಮಾಡುತ್ತಾನೆ. ಜತ್ತೀಸಮಿತಿಯ ವರದಿಯಲ್ಲಿ ಹೇಳಿರುವ ಹಾಗೆ ಒಬ್ಬೊಬ್ಬ ರೈತನಿಗೆ ಸಾಮಾನ್ಯವಾಗಿ 48 ಎಕರೆಯಿಂದ 200 ಎಕರೆಯವರೆಗೆ ಜಮೀನು ಇರುವುದಾದರೆ, ಅವನು ಯಾವರೀತಿ ಜಮೀನುಮಾಡುತ್ತಾನೆ ? ಜಮೀನು ಅವನಿಗೆ ಯಾವರೀತಿ ಸಿಕ್ಕಬೇಕು ? 40 ಎಕರೆ 50 ಎಕರೆ ಜಮೀನು ಎಂದರೆ ಅವನೇ ದೊಡ್ಡ ಶ್ರೀಮಂತ. ಅವನು ನಿಜವಾಗಿಯೂ ಉತ್ತಮ ತರಹದಲ್ಲಿ ಜಮೀನು ಸಾಗುವಳಿ ಮಾಡುತ್ತಾನೆಯೋ? ಜತ್ತೀಸಮಿತಿ ವರದಿಯ ಮೇರೆಗೆ 36 ನೂರು ರೂಪಾಯಿಗಳ ಉತ್ಪನ್ನ ಬರಬೇಕಾದರೆ ಒಂದು ಟ್ರೆಜರಿಯನ್ನು ನಿರ್ಮಾಣ ಮಾಡಬೇಕಾಗಿದೆ. ರೈತರಿಗೆ ಒಂದು ಕುಂಟೆ ಜಮೀನೂ ಸಿಕ್ಕುವುದಿಲ್ಲ. ಉತ್ಪಾದನೆಯಮೇಲೆ ಮಾಡುವುದಕ್ಕಿಂತಲೂ ಎಕರೆ, ಕುಂಟೆಮೇಲೆ ನಿರ್ಧಾರ ಮಾಡಬೇಕು. ನಾನು ಹೇಳುವುದೇನೆಂದರೆ ರೈತರಿಗೆ ಜಮೀನು ಸಿಕ್ಕಬೇಕು. ಇದನ್ನು ಸರ್ಕಾರ ಗುರಿಯಾಗಿಟ್ಟುಕೊಂಡು ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕು. ರೈತನನ್ನೇ ಭೂಮಿಯ ಒಡೆಯನನ್ನಾಗಿ ಮಾಡಬೇಕು. ಶಕ್ಯವಾದಷ್ಟುಮಟ್ಟಿಗೆ ರೈತರಿಗೆ ಜಮೀನು ಸಿಕ್ಕುವಹಾಗೆ ತಕ್ಕ ವ್ಯವಸ್ಥೆಯನ್ನುಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಸಿ. ಪಾಟೀಲ್ (ಷಿಗ್ಗಾಂವ್).—ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಸ್ನೇಹಿತರು ಇವತ್ತಿನ ದಿವಸ ಹೇಳಿದ ಅಂಶಗಳನ್ನು ನಾವೆಲ್ಲರೂ ಗಮನಕ್ಕೆ ತೆಗೆದುಕೊಂಡಿದ್ದೇವೆ. ಇದು ಬಡವರಿಗೆ ಮಹತ್ವವಾದ ವಿಷಯ. ಎಲ್ಲದಕ್ಕಿಂತಲೂ, ಭೂಮಿ ಸಾಗುವಳಿ ಮಾಡುವವರಿಗೆ ಬಹಳ ಮುಖ್ಯವಾದ ವಿಷಯ. ಅದರಲ್ಲಿಯೂ ಮುಖ್ಯವಾಗಿ ನಮ್ಮ ದೇಶದಲ್ಲಿ ಕಾಲಕಾಲಕ್ಕೆ ಏನು ನಾವು ಘೋಷಣೆಮಾಡುತ್ತಾ ಬಂದೆವೋ, ಎಂದರೆ ''ಉಳುವವನೇ ಭೂಮಿಯ ಮಾಲೀಕ''ಎಂದು ಏನು ಹೇಳಿದೆವೋ ಅದೇ ನಮ್ಮ ರಾಜ್ಯಾಂಗದ ಮುಖ್ಯ ತತ್ವ. ಸಮಾಜವಾದಿ ಸಮಾಜ ರಚನೆಮಾಡುವುದು ಸರ್ಕಾರದ ಮುಖ್ಯ ಕರ್ತವ್ಯ. ಈ ಉದ್ದೇಶವನ್ನು ಸಾಧಿಸುವುದಕ್ಕೆ ಈಗ ಅನೇಕ ಪ್ರಾಂತಗಳಲ್ಲಿ ಕಾಯಿದೆಗಳನ್ನು ಮಾಡುತ್ತಿದ್ದಾರೆ. ನಮ್ಮ ಜತ್ತೀಸಮಿತಿಯವರು ವಿಸ್ತಾರವಾಗಿ ಎಲ್ಲಾ ಭಾಗಗಳಲ್ಲಿಯೂ ಸಂಚಾರಮಾಡಿ ನಮಗಾಗಿ ಮಾಹಿತಿಯನ್ನು ಕೊಟ್ಟಿದ್ದು ನೋಡಿ ನಾನು ಅವರಿಗೆ ಬಹಳ ಚಿರಋಣಿಯಾಗಿದ್ದೇನೆ. ಇದರಲ್ಲಿ ಕೆಲವು ಜನರ ಪ್ರಭಾವಕ್ಕೆ ಒಳಗಾಗಿ ಕೆಲವು ತತ್ವಗಳನ್ನು ಮಾಡುವಾಗ ಒಕ್ಕಲಿಗ ಮತದವರಿಗೆ ನಷ್ಟವಾಗಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ಏನು ತತ್ವಗಳನ್ನು ಇಟ್ಟಿದ್ದಾರೋ ಅವನ್ನು ತೆಗೆದುಹಾಕಬೇಕು. ಈ ಕಾಯಿದೆಯಿಂದ ಕೋರ್ಟುಕಚೇರಿಗೆ ಕೆಲಸ ಹೆಚ್ಚಾಗುತ್ತದೆಂದು ನಾನು ತೋರಿಸಿಕೊಡುತ್ತೇನೆ.

ಈಗತಾನೇ ಮಾತನಾಡಿದ ಮಾನ್ಯ ಸದಸ್ಯರು ಕೆಲವು ಕಡೆ ಎಕರೆವಾರದ ಮೇಲೂ ಮತ್ತೆ ಕೆಲವು ಕಡೆ ಹಪ್ತೆ ಮೇಲೂ ಕೆಲವು ವಾಕರಣೆಗಳನ್ನು ಮಾಡಬೇಕೆಂದು ಹೇಳಿದರು. ಆದರೆ ಅದೊಂದೂ ಶಾಸ್ತ್ರೋಕ್ತವಾಗಿರುವುದಿಲ್ಲ. ಕೆಲವು ಕಡೆ ಭೂಮಿಗೆ ಎಕರೆಗೆ ಎಂಟು ಆಣೆ ಕಂದಾಯವಿದೆ. ಇನ್ನು ಕೆಲವು ಕಡೆ ಸರಾಸರಿ ಎಕರೆಗೆ ಒಂದು ರೂಪಾಯಿ ಕಂದಾಯ ಬಿದ್ದಿದೆ. ಕೆಲವು ಕಡೆ ಎಕರೆಯಲ್ಲಿ ಒಂದೆರಡು ಸಾವಿರ ಒಟ್ಟು ಉತ್ಪತ್ತಿ ಬಂದರೆ ಅದು ತೀರಾ ಹೆಚ್ಚಾಯಿತು. ಹೀಗೆ ಇರುವಾಗ ದೇಶದಲ್ಲಿ ಒಂದೊಂದು ಭಾಗಕ್ಕೆ ಒಂದೊಂದು ಕಾನೂನುಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಒಂದು ತಾಲ್ಲೂಕಿಗೇ ಒಂದು ಕಾನೂನುಮಾಡಿ ಎಂದರೆ ಅದು ಸಾಧ್ಯವಿಲ್ಲವೆಂದು ನಾನು ತಮ್ಮಲ್ಲಿ ನಿವೇದನೆಮಾಡಿಕೊಳ್ಳುತ್ತೇನೆ. ಆದರೆ ಈಗ ಶ್ರೀ ಜತ್ತಿಸಮಿತಿಯವರು ಜಮೀನು ಹುಟ್ಟುವಳಿಯಮೇಲೆ ಕುಟುಂಬ ಹಿಡುವಳಿಯನ್ನು ನಿಗದಿಮಾಡಬೇಕೆಂದು ಹೇಳಿರತಕ್ಕದ್ದು ಶಾಸ್ತ್ರೋಕ್ತವಾಗಿದೆ. ಮೊದಲು ಈ ಭೂಕಂದಾಯ ಜಮೀನು ಉತ್ಪತ್ತಿಯ ಮೂರರ ಒಂದಂಶವಿತ್ತು. ಈಗ ಅದನ್ನು ಆರರೊಂದಂಶವೆಂದು ಮಾಡಿದ್ದಾರೆ. ಜಮೀನಿನ ಉತ್ತಮ ಸ್ಥಿತಿಯನ್ನು ನಿಗದಿಮಾಡುವಾಗ ಅದರ ಉತ್ಪತ್ತಿ, ಅದರಿಂದ ಬರಬಹುದಾದ ಹುಟ್ಟುವಳಿ ಮತ್ತು ಲಾವಣಿ ಎಷ್ಟಾಗುತ್ತದೆಂಬುದನ್ನು ಗಣನೆಗೆ ತೆಗೆದುಕೊಂಡರೆ ಇದನ್ನು ಸುಲಭವಾಗಿ ಬಗೆಹರಿಸಬಹುದು. ಹಾಗಿಲ್ಲದೆ ಕೇವಲ ಲಾವಣಿಯೊಂದರ ಮೇಲೆ ಇದನ್ನು ಬಗೆಹರಿಸಬೇಕಾದರೆ ಕಷ್ಟವಾಗುತ್ತದೆ. ಆದರೆ ಪ್ರತಿಯೊಂದು ಭೂಮಿಗೂ ಹೀಗೆ ಮಾಡಲಿಕ್ಕಾಗದಿದ್ದರೂ ಒಂದೊಂದು ಭಾಗಕ್ಕಾದರೂ ಮಾಡಲು ಸಾಧ್ಯವಿದೆ. ಆದರೆ ಕೆಲವು ಭಾಗಗಳಲ್ಲಿ ಈಗ ಹಪ್ತೆ ಇನ್ನೂ ಸಿದ್ಧವಾಗಿಲ್ಲ. ಆದರೆ ಕೆಲವು ಸದಸ್ಯರು ಅಂಥ ಕಡೆ ನಾಲ್ಕು ಸಾವಿರದವರೆಗೂ ಉತ್ಪತ್ತಿ ತೆಗೆದುಕೊಳ್ಳುತ್ತಿದ್ದಾರೆಂದು ಆಗಲೇ ಹೇಳಿದರು. ಅಂಥ ಕಡೆ ಎಕರೆಗೆ ಒಂದೆರಡು ರೂಪಾಯಿಗಳ ಕಂದಾಯ ಬಿದ್ದಿದೆ.

(ಶ್ರೀ ಆರ್. ಸಿ. ಪಾಟೀಲ್)

ಆದ್ದರಿಂದ ಈಗ ನಮ್ಮ ಜತ್ತಿ ಕಮಿಟಿಯವರು ಈ ವಿಚಾರದಲ್ಲಿ ಉತ್ಪತ್ತಿಯ ಮೇಲೆ ನಿಗದಿಮಾಡ ಬೇಕೆಂದು ಹೇಳಿರತಕ್ಕದ್ದು ಬಹಳ ಶಾಸ್ತ್ರೋಕ್ತ ವಾಗಿದೆ. ನಾವು ಕಾನೂನುಮಾಡುವಾಗ ಎಲ್ಲರ ಹಿತವನ್ನೂ ಕಾಯಬೇಕು. ಇಲ್ಲದಿದ್ದರೆ ಕಾನೂನು ಹಿಡಿತದಿಂದ ಕೆಲವರು ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಇಂಥ ಕಾನೂನುಮಾಡುವುದರಿಂದ ಅಷ್ಟೇನೂ ಅನುಕೂಲವಾಗುವುದಿಲ್ಲ. ಎಲ್ಲರಿಗೂ ಸರಿ ಸಮನಾಗಿ ಅನ್ವಯಿಸುವಂಥ ಕಾನೂನುಮಾಡದೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಅನುಕೂಲ ಕಲ್ಪಿಸಲು ಹೋದರೆ ಹಳ್ಳಿಗಳಲ್ಲಿ ಬಹಳ ತೊಂದರೆ ಗಳುಂಟಾಗುತ್ತವೆ. ಮೇಲಾಗಿ ಈ ಬದಲಾವಣೆ ಗಳಿಂದ ರೈತ ಹೆಚ್ಚು ಧಾನ್ಯ ಬೆಳೆಯುವುದಕ್ಕೂ ಸಾಧ್ಯ ವಿರುವುದಿಲ್ಲ. ಕೇವಲ ಜಮೀನು ಮಾಲಿಕನ ಹಿತ ಒಂದಕ್ಕೆ ಹೆಚ್ಚು ಗಮನ ಕೊಟ್ಟರೆ ರೈತ ಮತ್ತು ಕೂಲಿಗಾರರಲ್ಲಿ ಯಾವತ್ತೂ ನಮ್ಮದಿಯಿರುವುದಿಲ್ಲ. ಇದರಿಂದ ಜನರಿಗೆ ಹೆಚ್ಚಾಗಿ ಕೋರ್ಟುಕಛೇರಿ ಗಳಿಗೆ ಓಡಾಡಲು ಅವಕಾಶಮಾಡಿಕೊಟ್ಟಂತಾಗು ತ್ತದೆಯೋ ಹೊರತು ರೈತ ಕೂಲಿಗಾರರ ಹಿತ ಸಾಧನೆ ಮಾಡಿದಂತಾಗುವುದಿಲ್ಲ. ಈಗಾಗಲೆ ರೈತಾಪಿ ಜನರ ಲಕ್ಷ್ಯ ಹೆಚ್ಚಾಗಿ ಕೋರ್ಟು ಕಛೇರಿಗಳ ಕಡೆ ಹೋಗಿದೆ. ಈಗ ನಾವು ಈ ತೊಂದರೆಗಳನ್ನೆಲ್ಲಾ ತಪ್ಪಿಸಿದರೆ ನಮ್ಮ ಮುಂದಿನ ಪೀಳಿಗೆಗೆ ತುಂಬ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಮೊದಲು ಒಕ್ಕಲುತನದ ವರ್ಗಕ್ಕೆ ಅನುಕೂಲ ಕಲ್ಪಿಸಿದರೆ ಅನಂತರ ತಾನಾಗಿಯೇ ರೈತಾಪಿವರ್ಗಕ್ಕೂ ಮತ್ತು ಮಾಲಿಕ, ಕೂಲಿಗಾರರ ವರ್ಗಕ್ಕೆಲ್ಲಾ ಅನುಕೂಲವಾಗುತ್ತದೆಂದು ನಾನು ಈ ಸಲಹೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈ ಎಲ್ಲ ದೃಷ್ಟಿಗಳಿಂದಲೂ ಈಗ ನಮ್ಮ ಜತ್ತಿ ಸಮಿತಿ ಯವರು ಮಾಡಿರತಕ್ಕ ವರದಿ ಬಹಳ ಶಾಸ್ತ್ರೋಕ್ತ ವಾಗಿದೆ. ಅಷ್ಟೇ ಅಲ್ಲದೆ ಈ ಜಮೀನುಗಳನ್ನು ವಶ ಪಡಿಸಿಕೊಳ್ಳುವ ವಿಚಾರದಲ್ಲಿ ಈ ಸಮಿತಿಯವರು ಆಯಾ ಭೂಮಿಯ ಕಿಮ್ಮತ್ತನ್ನು ನಿರ್ಧರಿಸತಕ್ಕ ವಿಚಾರವನ್ನು ಪ್ರಸ್ತಾಪಿಸುತ್ತ ಆಯಾಯ ಜಮೀನಿನ ಲಾವಣಿ ಏನಿದೆಯೋ ಅದರ 15 ಪಟ್ಟು ಅದರ ಬೆಲೆ ಯನ್ನು ನಿಗದಿಮಾಡಬಹುದೆಂದು ಹೇಳಿರತಕ್ಕದ್ದು ಯೋಗ್ಯವಾಗಿದೆ. ಆದರೆ ರೈತನಾದವನಿಗೆ ಈ ಪರಿ ಹಾರವನ್ನು ಏಕಕಾಲಕ್ಕೇ ಕೊಟ್ಟು ಕೊಳ್ಳಲು ಕಷ್ಟ ವಿದೆ ಎಂದು ಹೇಳಿ ರೈತನ ಮತ್ತು ಜಮೀನ್ದಾರರ ಇಬ್ಬರ ಯೋಗಕ್ಷೇಮವನ್ನೂ ಸರ್ಕಾರ ಗಮನಕ್ಕೆ ತೆಗೆದುಕೊಂಡು ಪರಿಹಾರದ ಮೊಬಲಗನ್ನು ಸರ್ಕಾರ ದವರೇ ಮೊದಲು ಜಮೀನ್ದಾರರಿಗೆ ಪಾವತಿಮಾಡಿ, ಅನಂತರ ಆ ಹಣವನ್ನು ರೈತನಿಂದ 15 ಕಂತುಗಳಲ್ಲಿ ಲಾವಣಿ ರೂಪದಲ್ಲಿ ವಸೂಲ್ಮಾಡಿಕೊಳ್ಳಬಹುದೆಂದು ತಿಳಿಸಲಾಗಿದೆ. ಇದರಲ್ಲೇನೂ ಅನ್ಯಾಯವಿಲ್ಲ.

ಅದೇ ಪ್ರಕಾರ ಇದರೊಳಗೆ ಸ್ವಲ್ಪ ಹೆಚ್ಚು ಕಡಮೆ ಇರಬಹುದು. ಲೋಪ ದೋಷಗಳು ಇರಬಹುದು. ಇದ್ದರೂ ಕೂಡ ಅದೆಲ್ಲವನ್ನು ಕೂಲಂಕಷವಾಗಿ ವಿಚಾರ ಮಾಡಿ ಇಲ್ಲಿ ಕಾಯದೆ ಮಾಡಿದ್ದಾರೆ. ಇಲ್ಲಿರ ತಕ್ಕ ಅನೇಕ ನನ್ನ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿ ಕೊಳ್ಳುವುದು ಏನೆಂದರೆ, ಅನೇಕ ವಿಧವಾದ ಸೂಚನೆ ಸಲಹೆಗಳನ್ನು ಈಗಾಗಲೇ ಕೊಟ್ಟಿದ್ದಾರೆ, ಅವೆಲ್ಲ ವನ್ನೂ ಸರಿಯಾಗಿ ಪರಿಶೀಲಿಸಬೇಕೆಂದು ಹೇಳಿ, ಈ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಾವು ಈ ಭೂ ಸುಧಾರಣೆ ಈ ಸಮಿತಿಯ ವರದಿಯ ವಿಷಯದಲ್ಲಿ ಮಾತನಾಡು ತ್ತಿದ್ದೇವೆ. ಆದರೆ ನೀವು ಈ ಭೂಮಿಯ ಸುಧಾ ರಣೆಯ ವರದಿಯಲ್ಲಿ ಒಂದು ನಿರ್ಬಂಧವಾದ ಕಾರ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹಿಂದೆ ಮಹಾಜ ನರು ಹೇಳುತ್ತಿದ್ದಂತೆ "ಉಳುವವನೇ ಒಡೆಯನಾ ಗುತ್ತಾನೆ. ದೇಶದ ಬೆನ್ನು ಮೂಳೆ ಎನ್ನತಕ್ಕ ರೈತನಾ ದವನ್ನು ಜಮೀನಿನ ಮಾಲೀಕನಾಗುತ್ತಾನೆ" ಎಂದು ಹೇಳಿದಂತಹ ಮಾತು ಈ ಸಾರಿ ನೆರವೇರುವುದೋ ಏನೋ ಎಂದು ನಾನು ತಿಳಿದು ಕೊಂಡಿದ್ದೇನೆ. ನಮ್ಮ ಸ್ನೇಹಿತರನೇಕರು ಜನರು ಇದೇ ವಿಷಯದ ಮೇಲೆ ಅವಲಂಬಿಸಿಕೊಂಡಿದ್ದಾರೆ ಎನ್ನುವುದನ್ನು ಹೋದ ಸಾರಿ ಎಲೆಕ್ಷನ್ನಿಗೆ ಹೋದ ಸಂದರ್ಭದಲ್ಲಿ ಹೇಳಿದರು. ರೈತನೇ ದೇಶದ ಬೆನ್ನುಮೂಳೆ, ಅವನಿಗೆ ಹೆಚ್ಚಿನ ಸಹಾಯವನ್ನು ನಾವು ಪ್ರತಿಯೊಬ್ಬರೂ ಕೊಡಬೇ ಕಾದುದು ಅಗತ್ಯ ಮತ್ತು ಬೆಂಬಲವನ್ನು ಕೊಡಬೇಕು ಎಂದು ಏನು ಹೇಳುತ್ತಿದ್ದರೋ ಆ ಒಂದು ನುಡಿ ಈಸಾರಿ ನಿಜವಾಗಿ ನೆರವೇರುತ್ತದೆ ಎಂದು ಅವರು ಚಕೋರ ಪಕ್ಷಿಯಂತೆ ಬಾಯಿಯನ್ನು ತೆರೆದುಕೊಂಡಿ ರುವಂತೆ ಇದ್ದಾರೆ ಎಂದು ನಾನು ತಿಳಿದುಕೊಂ ಡಿದ್ದೇನೆ. ಅದರಂತೆ ನಾನೂ ಕೂಡ ಇದೇ ವಿಷಯ ವನ್ನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಹೇಳಬೇಕಾಗಿದೆ, ಇಂತಹ ಮುಖ್ಯವಾದ ವಿಷಯವನ್ನು ನಮ್ಮ ಮುಂದೆ ಇಡಬೇಕಾದರೆ, ನಾವು ಕೇವಲ ಕನ್ನಡಿಗರು, ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದವರು ಕನ್ನಡ ನಾಡಿನ ವರು ಎಂದು ಕನ್ನಡವನ್ನು ತಿಳಿದುಕೊಂಡವರು ಇಲ್ಲಿ ಕೆಲವರಿದ್ದಾರೆ. ಆದರೆ ನಮ್ಮ ಕನ್ನಡಿಗರ ಕಣ್ಣನ್ನು ಕಟ್ಟಿದಂತೆ ಈ ವರದಿಯನ್ನು ಕನ್ನಡದಲ್ಲಿ ತರದೆ ಇರತಕ್ಕ ದನ್ನು ನೋಡಿ ನಾನು ವಿಷಾದಪಡಬೇಕಾಗಿದೆ. ಏಕೆಂ ದರೆ ನಮ್ಮ ಕನ್ನಡಿಗರಿಗೆ ತಿಳಿಯದೆ ಇರುವಂತೆ ಈ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ...... ಈ ವರದಿ ಕೂಡ ನಮಗೆ ತಿಳಿಯದೆ ಇರುವಂತೆ ಇಂಗ್ಲಿಷಿನಲ್ಲಿ ಇಲ್ಲಿ ಬಂದಿರುವುದರಿಂದ ನಾನು ವಿಷಾದ ಪಡಬೇಕಾ ಗಿದೆ. ಅದರೂ ಕೆಲವು ವಿಷಯಗಳನ್ನು ತಿಳಿದಮಟ್ಟಿಗೆ ಈ ವರದಿಯ ವಿಚಾರದಲ್ಲಿ ನಾನು ತಮ್ಮ ಮುಂದೆ ಇಡ ಬೇಕು ಎಂದು ನಾನು ಇಲ್ಲಿ ನಿಂತಿದ್ದೇನೆ.

ಇದರಲ್ಲಿ ಈ ಭೂಮಿಯ ಹಂಚುವಿಕೆ ವಿಚಾರದಲ್ಲಿ ನಮ್ಮ ಮಾನ್ಯ ಜತ್ತಿ ಸಮಿತಿಯವರು ಅವರು ಮೊದಲು ಬಾಂಬೆ ಪ್ರಾಂತದಿಂದ ಬಂದಿರುವವರಾಗಿದ್ದಾರೆ. ಅಲ್ಲಿ ಭೂಮಿಯ ವಿಚಾರದಲ್ಲಿ ಬಹು ದಿವಸದಿಂದಲೂ ಪರಿಶೀಲನೆ ನಡೆದು ಕೊನೆಯದಾಗಿ ಅಲ್ಲಿ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಗೊಂಡಿ ದ್ದಾರೆ. ಆ ಕಾರ್ಯಕ್ರಮವನ್ನು ಕೈಗೊಳ್ಳಬೇಕಾದರೆ ಇಂತಹ ಮಾನ್ಯ ಸದಸ್ಯರು ಸೇರಿಕೊಂಡು ಬಹಳವಾಗಿ ಪರಿಶೀಲಿಸಿ ಏನೇನು ಕಷ್ಟವಿದೆ ಮತ್ತು ಭೂಮಿಯ ವಿವರಗಳನ್ನೆಲ್ಲ ಪರಿಶೀಲಿಸಿ ಮಾಡಿದ್ದಾರೆ. ಅದರಲ್ಲಿ ಅವರು ಕೂಡ ಒಬ್ಬರು ಇದ್ದು ಸಾಗುವಳಿ ಮಾಡುವ ಒಬ್ಬ ರೈತನಿಗೆ ಎಷ್ಟು ಭೂಮಿ ಯೋಗ್ಯವಾಗಿದೆ ಎನ್ನು ವುದನ್ನೆಲ್ಲ ಪರಿಶೀಲಿಸಿದ್ದಾರೆ. ಆದರೆ ನಮ್ಮ ಈ ನವ ಕರ್ನಾಟಕದಲ್ಲಿ ಅದು ಇನ್ನೊಂದು ರೂಪವನ್ನು ತಾಳಿ ಮಾಡಿರುವುದನ್ನು ನೋಡಿ ನನಗೇನೋ ಆಶ್ಚರ್ಯವಾ ಗುತ್ತಿದೆ. ಇಲ್ಲಿ ಗೇಣಿಯ ಪರಮಾವಧಿಯು ಉತ್ಪನ್ನದ ಐದು ಪಟ್ಟು ಇರಬೇಕು ಎಂದು ಹೇಳಿದ್ದಾರೆ. ಆದರೆ ಅನೇಕ ಜನ ರೈತರ ಬಾಂಧವರು ದೇಶ ಪುನರ್ವಿಂ ಗಡನೆಯಾದ ಅನಂತರ ಮೂರನೆಯ ಒಂದು ಭಾಗ ಮತ್ತು ನಾಲ್ಕನೆಯ ಒಂದು ಭಾಗ ಇವೆಲ್ಲವೂ ವಜಾ

ಆಗಿ ಹಾಲಿ ಹೆಚ್ಚಿಗೆ ಸುಧಾರಿಸಿರುವ ಬೊಂಬಾಯಿ ಕಾನೂನು ಜಾರಿಗೆ ಬರಬಹುದೆಂದು ರೈತಬಾಂಧವರು ಕಾತರರಾಗಿದ್ದಾರೆ. ನಾವೂ ಕೂಡ ಅದೇ ಕಾನೂನು ಇಲ್ಲಿಗೆ ಜಾರಿಗೆ ಬರಬಹುದು ಮತ್ತು ಆ ರೀತಿ ಜಾರಿಗೆ ಬಂದನಂತರ ನಾವೂ ಕೂಡ ಅದರ ಅನುಕೂಲವನ್ನು ಪಡೆದುಕೊಳ್ಳಬಹುದು ಎನ್ನುವ ಆಸೆ ಬಹುದಿವಸಗಳಿಂದ ಇದ್ದದ್ದು ಈಗ ಅದು ಭಗ್ನವಾಗಿದೆ. ಅಲ್ಲದೆ ಈ ವರದಿಯಲ್ಲಿ ಕುಟುಂಬದ ಹಿಡುವಳಿ ನಿಗದಿಮಾಡಿದ್ದಾರೆ. 12 ಎಕರೆ ಜಮೀನು ಒಂದು ಕುಟುಂಬದ ಹಿಡುವಳಿಯಲ್ಲಿ ಇರಬೇಕು ಎಂದು ವಿವರಿಸಿದ್ದಾರೆ—ಆದರೆ ಒಬ್ಬ ಮನುಷ್ಯ 12 ಎಕರೆ ಸಾಗುವಳಿ ಮಾಡುವುದು ಬಹಳ ಕಷ್ಟವಾಗುತ್ತದೆ. ಇನ್ನೊಂದು ವಿಚಾರ ಈ ಸಭೆಯಲ್ಲಿ ಹೇಳಬಯಸುತ್ತೇನೆ. ಪರಮಾವಧಿಯ ಕುಟುಂಬ ಹಿಡುವಳಿಯು ನಾಲ್ಕುವರೆಯಷ್ಟು ಇರಬೇಕು ಎಂದರೆ ಸಾಧಾರಣವಾಗಿ ನಾವೆಲ್ಲ ಉತ್ಪನ್ನ ಮಾಡುವುದು ಎಕರೆಗೆ ಹತ್ತು ಪಲ್ಲ. ಅದರಂತೆ ಬೆಲೆ 10,800 ರೂಪಾಯಿಗಳ ಆದಾಯ ಬರುವ ಜಮೀನು ಪರಮಾವಧಿ ಇರಬೇಕಾದರೆ 54 ಎಕರೆ ಪರಮಾವಧಿ ಜಮೀನು ಇರಬೇಕು ಎಂದು ಅರ್ಥವಾಗುತ್ತದೆ. ಈ ರೀತಿ ಪರಮಾವಧಿ ಮಾಡಿ ಈ ಭೂಸುಧಾರಣೆಯನ್ನು ದೇಶದಲ್ಲಿ ಏತಕ್ಕೆ ತರುತ್ತಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು. ಪ್ರತಿಯೊಬ್ಬ ಮನುಷ್ಯನು ಭೂಮಿಯಲ್ಲಿ ದುಡಿದು ಶ್ರಮವಹಿಸಿ ದೇಶದ ಉತ್ಪಾದನೆಯನ್ನು ಹೆಚ್ಚು ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಭೂಸುಧಾರಣೆಯನ್ನು ಜಾರಿಗೆ ತರಬೇಕು. ಸರ್ಕಾರದವರು ಸಮಿತಿಯೊಂದು ಮಾಡಿದರು. ಏತಕ್ಕೆಂದರೆ ಒಬ್ಬನ ಕೈಯಲ್ಲಿ ಸಾವಿರಾರು ಎಕರೆ ಜಮೀನು ಇಟ್ಟುಕೊಂಡು ಸಾವಿರಾರು ಜನಗಳನ್ನು ದುಡಿಸಿ ಅವರು ದುಡಿದಿರತಕ್ಕ ಪ್ರತಿಫಲವನ್ನು ಒಬ್ಬ ಸ್ವೀಕರಿಸುವುದು ಸರಿಯಲ್ಲ. ಈಗ ಇರತಕ್ಕ ನೀತಿ ಒಳ್ಳೆಯದಲ್ಲ, ಆದ್ದರಿಂದ ಪ್ರತಿಯೊಬ್ಬನೂ ದುಡಿಯಬೇಕು, ಪ್ರತಿಯೊಬ್ಬನೂ ಊಟಮಾಡಬೇಕು ಎನ್ನುವುದನ್ನು ಅನುಷ್ಠಾನಕ್ಕೆ ತರಲು ಸಮಿತಿಯನ್ನು ಮಾಡಿದ್ದಾರೆ ಆದರೆ ಇವರು ಹೇಳತಕ್ಕ ನೀತಿಯಲ್ಲಿ ಆ ರೀತಿ ಆಗುವುದಕ್ಕೆ ಅವಕಾಶ ಇಲ್ಲದೆ ಹೋಯಿತು. ಎಲ್ಲರೂ ಕಷ್ಟಪಟ್ಟು ದುಡಿಯತಕ್ಕ ನೀತಿ ಇದರಲ್ಲಿ ಕಾಣುತ್ತಾ ಇಲ್ಲ. ಪ್ರತಿಯೊಬ್ಬ ಮನುಷ್ಯನೂ ದುಡಿಯಬೇಕು. ಯಾರಿಗೆ ದುಡಿಯುವುದಕ್ಕೆ ಸಾಧ್ಯವಿದೆಯೋ ಅವರಿಗೆ ಜಮೀನು ಇರುವುದಕ್ಕೆ ಯಾವ ನಿರ್ಬಂಧವೂ ಇರಬಾರದು. ಪ್ರತಿಯೊಬ್ಬನೂ ದುಡಿಯಬೇಕು. ಅವನಿಗೆ ದುಡಿಯುವುದಕ್ಕೆ ಸಾಕಷ್ಟು ಜಮೀನು ಇರಬೇಕಾದ್ದು ಅವಶ್ಯಕ. ಇನ್ನೊಂದು ವಿಚಾರ ಭೂಮಿಯನ್ನು ಉಳುವವನು ಗೇಣೀ ರೈತನು ಜಮೀನುದಾರನಿಗೆ ಗೇಣೀ ಮಾಡತಕ್ಕ ಸಂದರ್ಭದಲ್ಲಿ ಅದಕ್ಕೆ ಒಂದು ನಿರ್ದಿಷ್ಟವಾದ ನಿಯಮವಿರಬೇಕು. ಅದನ್ನು ಯಾವ ಮಟ್ಟದಲ್ಲಿ ಕೊಡಬೇಕು ಎಂದರೆ ಉತ್ಪನ್ನದ ಐದನೆಯ ಒಂದು ಭಾಗ ಗೇಣೀ ಕೊಡಬೇಕು ಎಂದು ಹೇಳಿದ್ದಾರೆ. ಎಂದರೆ ಹತ್ತು ಪಲ್ಲ ಉತ್ಪನ್ನಬೆಳೆಯ ತಕ್ಕ ಜಮೀನಿಗೆ ಎರಡು ಪಲ್ಲ ಗೇಣೆಯನ್ನು ಒಡೆಯನಿಗೆ ಕೊಡಬೇಕು ಎಂದ ಹಾಗಾಯಿತು. ಆದರೆ, ಸದರಿ ಜಮೀನಿಗೆ ಪರಿಹಾರ ಕೊಡತಕ್ಕ ಸಂದರ್ಭದಲ್ಲಿ ನಾವು ಲೆಕ್ಕಹಾಕುವುದಾದರೆ ಎರಡು ಪಲ್ಲ ಒಂದು ವರ್ಷಕ್ಕೆ ಉತ್ಪನ್ನ ಬರತಕ್ಕ ಜಮೀನಿಗೆ ಈಗ 300 ರೂಪಾಯಿಗೆ ಹೆಚ್ಚಿಗೆ ಬೆಲೆ ಇಲ್ಲದೆ ಎಷ್ಟು ಜಮೀನು ಬೇಕಾದರೂ ಈ ಸಂದರ್ಭದಲ್ಲಿ ದೊರೆಯುತ್ತದೆ. ಏತಕ್ಕೆಂದರೆ ಜಮೀನ್ದಾರ ಇರುವುದು ಒಂದು ಕಡೆ. ಜಮೀನು ಒಂದು ಕಡೆ ಇರುವುದರಿಂದ ಎಡರು ತೊಡರುಗಳು ಬರುವ ದೃಷ್ಟಿಯಿಂದ ಜಮೀನು ಕೊಡುತ್ತಿದ್ದಾರೆ. ಈಗ 200 ರೂಪಾಯಿ ಕೊಡತಕ್ಕ ಜಮೀನು ಹಿಂದೆ 30-40 ರೂಪಾಯಿಗೆ ಸಿಕ್ಕುವ ಜಮೀನಾಗಿದೆ. ನೂರಾರು ವರ್ಷಗಳಿಂದ ರೈತರು ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಸ್ವಂತ ಸಾಗುವಳಿಗೆ ಜಮೀನನ್ನು ರೈತನಿಂದ ಬಿಡಿಸಿಕೊಂಡರೆ ರೈತನ ಹಿತರಕ್ಷಣೆಗೆ ಧಕ್ಕೆಬರುತ್ತದೆ. ರೈತನ ಹಿತ ರಕ್ಷಣೆಯಾಗುವಂತೆ ಮಾಡಬೇಕು.

ಇನ್ನೊಂದು ವಿಚಾರ, ಸ್ವಂತ ಸಾಗುವಳಿ ಮಾಡುವುದಕ್ಕೆ ಜಮೀನು ಹತ್ತು ಮೈಲಿ ಅಂತರದಲ್ಲಿ ಇರಬೇಕೆಂದು ಹೇಳಿದೆ. ಹತ್ತು ಮೈಲಿ ದೂರ ಇರುವ ಭೂಮಿಯನ್ನು ಸಾಗುಮಾಡಲು ರೈತನಿಗೆ ಸಾಧ್ಯವಿದೆಯೋ ಎಂಬುದನ್ನು ವಿಚಾರ ಮಾಡಬೇಕು. ಒಬ್ಬನೆ ವ್ಯಕ್ತಿ ಭೂಮಿಯನ್ನು ಸಾಗುಮಾಡುವುದಿಲ್ಲ. ರೈತನ ಮನೆಯಲ್ಲಿ ಇರತಕ್ಕ ಹೆಂಗಸರು ಚಿಕ್ಕಮಕ್ಕಳು ಎಲ್ಲರೂ ಭಾಗವಹಿಸಿ ಶ್ರಮ ಪಡಬೇಕಾಗುತ್ತದೆ. ಒಕ್ಕಲತನಕ್ಕೆ ಬೇಕಾಗುವ ಸಲಕರಣೆಗಳನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಆದುದರಿಂದ ಹತ್ತು ಮೈಲಿ ದೂರ ಇರುವ ಜಮೀನಿನಲ್ಲಿ ಸಾಗುವಳಿ ಮಾಡುವುದು ಸಾಧ್ಯವಿಲ್ಲ, ಸ್ವತಃ ಬೇಸಾಯಕ್ಕೆ ವಾಸಸ್ಥಳದಿಂದ ಹತ್ತು ಮೈಲಿ ದೂರದಲ್ಲಿದ್ದರೂ ಜಮೀನು ಇರಬಹುದು ಎಂಬ ಅವಕಾಶ ಮಾಡಿಕೊಟ್ಟಿರುವುದು ಸೂಕ್ತವಲ್ಲ. ಆದುದರಿಂದ ಒಂದು ಮೈಲಿ ದೂರದಲ್ಲಿರುವ ಜಮೀನು ಎಂದು ಗೊತ್ತುಮಾಡಬೇಕು. ಆ ಮೇಲೆ ಈ ಜಮೀನನ್ನು ಮರಳಿ ಪಡೆಯುವುದಕ್ಕೆ ಮತ್ತು ಸಾಗುವಳಿಯಿಂದ ಬಿಡಿಸುವುದಕ್ಕೆ ಬೇಕಾದಷ್ಟು ಅವಕಾಶವಿರಬೇಕು. ಜಮೀನನ್ನು ಬಿಟ್ಟುಕೊಟ್ಟವನ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ತಾವು ನೋಡಬೇಕಾದುದು ಬಹಳ ಮುಖ್ಯ. ಜಮೀನಿನ ಹಕ್ಕು ಹೋಗಿ ನಿರಾಶ್ರಿತನಾಗುತ್ತಾನೆ. ಜಮೀನು ಸಾಗುವಳಿ ಮಾಡುವವನನ್ನು ಬಿಡಿಸಿದರೆ ಅವನೂ ನಿರಾಶ್ರಿತನಾಗುತ್ತಾನೆ. ಅವನು ಬಹಳ ವರ್ಷಗಳಿಂದ ದುಡಿಯತಕ್ಕ ರೈತ. ಜಮೀನಿನಿಂದ ಈಗ ದುಡಿಯುವವರು ಸಾಗುವಳಿ ಮಾಡುವವರು ಅದೇ ಕಸಬಿನಿಂದ ಅನೇಕ ವರ್ಷಗಳಿಂದಲೂ ಶ್ರಮಪಟ್ಟು ಅನುಸರಿಸಿಕೊಂಡು ಬಂದಿರುತ್ತಾರೆ. ಇಂತಹವರನ್ನು ಈಗ ನಿರಾಶ್ರಿತರನ್ನಾಗಿ ಮಾಡತಕ್ಕ ಸರ್ಕಾರದ ನೀತಿ ಖಂಡಿತ ಸಾಧುವಲ್ಲವೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇಷ್ಟು ಮಾತುಗಳನ್ನು ಈ ಸಭೆಯಲ್ಲಿ ಹೇಳುವುದಕ್ಕೆ ತಾವು ನನಗೆ ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇವೆ.

Mr. DEPUTY SPEAKER.—The House will now rise and meet again tomorrow at 8-30 A.M.

The House adjourned at Six of the Clock to meet again on Saturday, the 19th October 1957 at Thirty Minutes past Eight of the Clock.

WD 4185—GPB—900—25-4-58